ಕರ್ನಾಟಕ ಲಲಿತಕಲಾ ಅಕಾಡೆಮಿ

ಜನಪ್ರಿಯ ದೇಶಿ ಕಲಾಮಾಲೆ

# ನಾಗಾರಾಧನೆ ಮತ್ತು ಚಿತ್ರಕಲೆ

• ಉಪಾಧ್ಯಾಯ ಮೂಡುಬೆಳ್ಳಿ



# ನಾಗಾರಾಧನೆ ಮತ್ತು ಚಿತ್ರಕಲೆ

ಪೀಟರ್ ಎ. ಲುಯಿಸ್
ಪ್ರಧಾನ ಸಂಪಾದಕರು

ಲೇಖಕರು
ಉಪಾಧ್ಯಾಯ ಮೂಡಬೆಳ್ಳ

ಕರ್ನಾಟಕ ಲಲಿತಕಲಾ ಅಕಾಡೆಮಿ
ಕನ್ನಡ ಭವನ, ಜೆ.ಸಿ.ರಸ್ತೆ
ಬೆಂಗಳೂರು ೫೬೦೦೦೨

**NAGARADHANE MATTU CHITRAKALE**

***By*** **: Upadyaya Mudubella**

***Published by***

**B.T. Munirajayya, Registrar**

**Karnataka Lalithakala Academy**

**Kannada Bhavana, J.C.Road**

**BANGALORE-560002**

**First Impression : 2004**

**Pages : VIII + 38 Price Rs : 40-00**

ಬೆಲೆ ರೂ. : ೪೦-೦೦

ಪ್ರಥಮ ಮುದ್ರಣ : ೨೦೦೪

© ಲೇಖಕರದು

ಈ ಪುಸ್ತಕದಲ್ಲಿರುವ ಅಭಿಪ್ರಾಯಗಳು

ಆಯಾ ಲೇಖಕರಿಗೆ ಸಂಬಂಧಿಸಿದ್ದು

*ಪ್ರಧಾನ ಸಂಪಾದಕರು*

ಶ್ರೀ ಪೀಟರ್ ಎ. ಲೂಯಿಸ್

*ಸಂಪಾದಕರು*

ಡಾ.ಎಸ್.ಸಿ.ಪಾಟೀಲ

*ಪ್ರಕಟಣಾ ಸಮಿತಿ ಸದಸ್ಯರು*

ಶ್ರೀ ಸುರೇಶ ಡಿ.ಹಾಲಬಾವಿ

ಡಾ. ಪೂರ್ಣಿಮಾ ಪಾಟೀಲ

ಶ್ರೀ ಪಿ.ಎಸ್.ಕಡೇಮನಿ

ಶ್ರೀ ಬಿ.ಎಸ್.ದೇಸಾಯಿ

ಶ್ರೀ ದಿಲೀಪಕುಮಾರ ಕಾಳೆ

*ಪ್ರಕಾಶಕರು*

ಶ್ರೀ ಬಿ.ಟಿ.ಮುನಿರಾಜಯ್ಯ, ರಿಜಿಸ್ಟ್ರಾರ್

ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು

*ಸಮನ್ವಯಕಾರ* : ಶ್ರೀ ಪ.ಸ.ಕುಮಾರ

*ಮುಖಪುಟ* : ಶ್ರೀ ಸುಧಾಕರ ದರ್ಬೆ

*ಅಕ್ಷರ ಜೋಡಣೆ* : ಯಾಜಿ ಗ್ರಾಫಿಕ್ಸ್, ಹೊಸಪೇಟೆ

ಮುದ್ರಣ

ಮನು ಗ್ರಾಫೀಕ್ಸ್

11/3, 3ನೇ ಕ್ರಾಸ್, ಅಣ್ಣಪುರ

ಬೆಂಗಳೂರು - 27

# ಅಧ್ಯಕ್ಷರ ಮಾತು

ಆತ್ಮೀಯರೆ,

ಲಲಿತಕಲಾ ಅಕಾಡೆಮಿಯ ಅಧ್ಯಕ್ಷನಾಗಿ ಮೂರು ವರ್ಷಗಳಾಗುತ್ತಿದೆ. ಈ ಅವಧಿಯಲ್ಲಿ ನಾನು ಮತ್ತು ಸದಸ್ಯರ ತಂಡ, ರೂಪಿಸಿ ನಿರ್ವಹಿಸಿದ ಕಾರ್ಯಕ್ರಮಗಳನ್ನು ನಿಮ್ಮ ಮುಂದಿಡುವುದು ನನ್ನ ಜವಾಬ್ದಾರಿ ಹಾಗೂ ಸಂತೋಷದ ವಿಷಯ. ನಾವು ಮೂರು ವರ್ಷಗಳು ಕಾರ್ಯಕ್ರಮಗಳನ್ನು ರೂಪಿಸುವಾಗ ಯುವ ಪೀಳಿಗೆಗೆ ಸಿಂಹಪಾಲು ನೀಡಿದ್ದೇವೆ, ಹೊಸತನವನ್ನೂ ಕಾಪಾಡಿಕೊಂಡಿದ್ದೇವೆ.

'ಯಂಗ್ ಸ್ಟ್ರೋಕ್ಸ್' 'ನಿಮ್ಮೊಂದಿಗೆ ನಾವು' 'ಮನೆಗೊಂದು ಕಲಾಕೃತಿ', 'ಜನಪದ ಶೃತಿ-ಆಧುನಿಕ ಕೃತಿ', ಯುವಕಲಾವಿದರಿಗೆ ಫೆಲೋಶಿಪ್ ಮುಂತಾದ ನವೀನ ಹಾಗೂ ಉಪಯುಕ್ತ ಕಾರ್ಯಕ್ರಮಗಳನ್ನು ರೂಪಿಸಿದ್ದೇವೆ. ಕರ್ನಾಟಕವನ್ನು ನಾಲ್ಕು ವಿಭಾಗಗಳಾಗಿ ಮಾಡಿ, ಪ್ರತಿ ಕಾರ್ಯಕ್ರಮದಲ್ಲಿ ನಾಲ್ಕೂ ವಿಭಾಗದ ಕಲಾವಿದರಿಗೆ ಸಮಪಾಲು ದೊರಕುವಂತೆ ಮಾಡಿದ್ದು ಕಲಾವಿದರಿಗೆ ಸಂತಸ ತಂದಿದೆ.

**ಯಂಗ್ ಸ್ಟ್ರೋಕ್ಸ್:** ಕರ್ನಾಟಕದ ನಾಲ್ಕು ವಿಭಾಗಗಳಿಂದ ಆಯ್ದ ಪ್ರತಿಭಾವಂತ ಯುವಕಲಾವಿದರ ಕಲಾಪ್ರದರ್ಶನವನ್ನು ಬೆಂಗಳೂರು, ಮುಂಬೈ ಮತ್ತು ನವದೆಹಲಿಯಲ್ಲಿ ಪ್ರದರ್ಶಿಸಿದ್ದೇವೆ. ಸುಂದರ ಕೈಪಿಡಿಯನ್ನು ಮುದ್ರಿಸಿದ್ದೇವೆ.

**ಮನೆಗೊಂದು ಕಲಾಕೃತಿ :** ಮಧ್ಯಮ ವರ್ಗದ ಜನರ ಮನೆಯಲ್ಲಿ ನಾಡಿನ ಕಲಾವಿದರ ಕೃತಿಗಳು ರಾರಾಜಿಸಬೇಕೆಂಬ ಉದ್ದೇಶದಿಂದ ಕಡಿಮೆ ಬೆಲೆಯಲ್ಲಿ ಕಲಾಕೃತಿಗಳನ್ನು ಮಾರಾಟ ಮಾಡಿದೆವು. ಜನರ ಉತ್ಸಾಹ ಹಾಗೂ ಪ್ರೋತ್ಸಾಹ ನಮ್ಮನ್ನು ನಿಬ್ಬೆರಗಾಗಿಸಿತು. ಐದು ನೂರಕ್ಕೂ ಹೆಚ್ಚು ಕಲಾಕೃತಿಗಳು ಮಧ್ಯಮ ವರ್ಗದ ಮನೆಗಳನ್ನು ಅಲಂಕರಿಸಿದರೆ, ಅಕಾಡೆಮಿ ಬೊಕ್ಕಸಕ್ಕೆ ಲಕ್ಷಕ್ಕೂ ಹೆಚ್ಚು ಆದಾಯ ಬಂತು.

**ನಿಮ್ಮೊಂದಿಗೆ ನಾವು :** ಕರ್ನಾಟಕದ ಎಲ್ಲ ಕಡೆಗಳಲ್ಲೂ ಈ ಕಾರ್ಯಕ್ರಮಕ್ಕೆ ನಿರೀಕ್ಷೆಗೆ ಮೀರಿದ ಯಶಸ್ಸು ಲಭಿಸಿದೆ. ಈಗಾಗಲೇ ಎಪ್ಪತ್ತೈದು ಸಾವಿರ ಜನರಿಗೆ ಕಲೆಯ ಕಿರು ಪರಿಚಯವನ್ನು ಮಾಡಿಸಿದೆ.

**ಜನಪದ ಶೃತಿ-ಆಧುನಿಕ ಕೃತಿ :** ಜಾನಪದದ ಬೇರುಗಳು ಗಟ್ಟಿಯಾಗಿರುವ ಹಳ್ಳಿಯಲ್ಲಿ ಆಧುನಿಕ ಚಿತ್ರಕಲೆಯನ್ನು ಎತ್ತಿನ ಬಂಡಿಗಳ ಮೇಲೆ ಚಿತ್ರಿಸಿ 'ಚಲಿಸುವ ಗ್ಯಾಲರಿ'ಗಳನ್ನು ನಿರ್ಮಿಸಿದ್ದೇವೆ.

**ಯುವ ಕಲಾವಿದರಿಗೆ ಫೆಲೋಶಿಪ್ :** ಮೂವರು ಯುವ ಪ್ರತಿಭೆಗಳನ್ನು ಆಯ್ಕೆ ಮಾಡಿ ಅವರಿಗೆ ಒಂದು ವರ್ಷದ ಅವಧಿಗೆ ತಿಂಗಳಿಗೆ ರೂ.೩೦೦೦ (ಮೂರು ಸಾವಿರ) ಧನ ಸಹಾಯ ನೀಡಿ ಸ್ವತಂತ್ರವಾಗಿ ಚಿಂತಿಸಿ ಅಭಿವ್ಯಕ್ತಿಸುವ ವಾತಾವರಣವನ್ನು ನಿರ್ಮಿಸಿ ಕೊಟ್ಟಿದ್ದೇವೆ.

ಈ ಎಲ್ಲಾ ಕಾರ್ಯಕ್ರಮಗಳು ಯುವಶಕ್ತಿಯ ಪಾಲಾದರೆ, ಹೊಸದುರ್ಗದ ಹತ್ತಿರವಿರುವ ಸಾಣೆಹಳ್ಳಿಯಲ್ಲಿ ಹಿರಿಯ ಕಲಾವಿದರ ಶಿಬಿರ, ಬೆಂಗಳೂರಿನಲ್ಲಿ ಕಲಾವಿದೆಯರ ಶಿಬಿರ, ಬೆಂಗಳೂರು ಹಾಗೂ ಗುಲ್ಬರ್ಗಾದಲ್ಲಿ ಗ್ರಾಫಿಕ್ ಶಿಬಿರವನ್ನು ನಡೆಸಿದ್ದೇವೆ. ಶ್ರೀ ಜಿ.ಎಸ್. ದಂಡಾವತಿಮಠ ಹಾಗೂ ಡಾ.ಎಂ.ವಿ.ಮಿಣಜಿಗಿಯವರ ಶತಮಾನೋತ್ಸವ ಕಾರ್ಯಕ್ರಮಕ್ಕೂ ಪರೋಕ್ಷವಾಗಿ ನಾವು ಕಾರಣಕರ್ತರಾಗಿದ್ದೇವೆ.

ಇದರೊಂದಿಗೆ ವಾರ್ಷಿಕ ಕಲಾಪ್ರದರ್ಶನ, ವಾರ್ಷಿಕ ಪ್ರಶಸ್ತಿ ಸಮಾರಂಭ, ಜಿಲ್ಲಾವಾರು ಕಲಾಶಿಬಿರ, ಏಕವ್ಯಕ್ತಿ ಹಾಗೂ ಸಮೂಹ ಕಲಾಪ್ರದರ್ಶನಗಳಿಗೆ ಧನಸಹಾಯ ಮುಂತಾದ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ನಿರ್ವಹಿಸಿದ್ದೇವೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕಾರ್ಯಕ್ರಮ, ಐಫೆಕ್ಸ್ ಕಲಾಪ್ರದರ್ಶನಗಳಿಗೆ ಸಹಯೋಗ ನೀಡಿದ್ದೇವೆ.

ಹಿರಿಯ ಕಲಾವಿದರಿಗೆ ನೀಡುವ ವಾರ್ಷಿಕ ಪ್ರಶಸ್ತಿಯ ಜೊತೆಗೆ ಕಲಾಕ್ಷೇತ್ರದ ಅಭಿವೃದ್ಧಿಗೆ ನಿಸ್ವಾರ್ಥ ಸೇವೆ ಸಲ್ಲಿಸಿದ ಚೇತನಗಳಿಗೆ ವಾರ್ಷಿಕ ಪುರಸ್ಕಾರವನ್ನು ನೀಡಿ ಗೌರವಿಸುವುದನ್ನು ಪ್ರಾರಂಭಿಸಿದ್ದೇವೆ. ಈ ವರ್ಷ ವಾರ್ಷಿಕ ಕಲಾ ಪ್ರದರ್ಶನದಲ್ಲಿ ನೀಡುವ ಬಹುಮಾನಗಳನ್ನು ಹಿರಿಯ ಕಲಾವಿದರ ಹೆಸರಿನಲ್ಲಿ ನೀಡುವುದರೊಂದಿಗೆ ಅವರನ್ನು ಸ್ಮರಿಸುತ್ತಿದ್ದೇವೆ.

ಇಷ್ಟೆಲ್ಲಾ ಆದರೂ ಮನಸ್ಸಿನಲ್ಲಿ ಕೊರತೆ ಕೊರೆಯುತ್ತಿದೆ. ರಾಷ್ಟ್ರಮಟ್ಟದ ಕಲಾಶಿಬಿರ, ರಾಷ್ಟ್ರಮಟ್ಟದ ವಿಚಾರಗೋಷ್ಠಿ, ಕಲಾಕೃತಿಗಳ ಮಾರಾಟ ಕೇಂದ್ರ, ಹಾಸನದಲ್ಲಿ ರಾಷ್ಟ್ರೀಯ ಕಲಾಗ್ರಾಮ, ವಿಭಿನ್ನ ಶೈಲಿಯ ಭಾವಚಿತ್ರದ ಶಿಬಿರವನ್ನು ಈ ಅವಧಿಯಲ್ಲಿ ನಡೆಸಲಾಗದಿದ್ದುದಕ್ಕೆ ನಮ್ಮ ಮನಸ್ಸುಗಳಲ್ಲಿ ಇನ್ನೂ ಅತೃಪ್ತಿ ಕಾಡುತ್ತಿದೆ.

ಕರ್ನಾಟಕ ಲಲಿತಕಲಾ ಅಕಾಡೆಮಿಯ ಹಲವು ಹತ್ತು ಕಾರ್ಯಕ್ರಮಗಳಲ್ಲಿ ಪುಸ್ತಕ ಪ್ರಕಟಣಾ ಯೋಜನೆಯು ಒಂದು. ಅದರ ಅಂಗವಾಗಿ ಪ್ರತಿ ಮೂರು ತಿಂಗಳಿಗೊಮ್ಮೆ ಕಲಾವಾರ್ತೆ ಎಂಬ ಸಂಚಿಕೆಯನ್ನು ಅಕಾಡೆಮಿ ನಿಯಮಿತವಾಗಿ ಪ್ರಕಟಿಸುತ್ತ ಬಂದಿದೆ. ಮುದ್ರಣ ಹಾಗೂ ವಿನ್ಯಾಸಗಳಲ್ಲಿ ಕಲಾತ್ಮಕತೆಗೆ ಒತ್ತುಕೊಟ್ಟು, ಕಲಾವಾರ್ತೆಯನ್ನು ವಾರ್ತಾ ಸಂಚಿಕೆಯಾಗಿಸದೆ ಸಂಗ್ರಹಯೋಗ್ಯ ಸಂಚಿಕೆಯನ್ನಾಗಿಸಿದ್ದೇವೆ. ಹಾಗೆಯೇ ಅಕಾಡೆಮಿಯ

ಎಲ್ಲ ಸದಸ್ಯರ ತೀರ್ಮಾನದಂತೆ ಹತ್ತು ಜನ ಹಿರಿಯ ಕಲಾವಿದರ ಚಿತ್ರಸಂಪುಟ ಮತ್ತು ಒಂಬತ್ತು ಜನ ಹಿರಿಯ ಕಲಾವಿದರಾದ ಪ್ರೊ.ವ್ಹಿ.ಜಿ.ಅಂದಾನಿ, ಎಸ್.ಕಾಳಪ್ಪ, ಎಚ್.ಎಸ್. ಇನಾಮತಿ, ಕೆ.ಕೇಶವಯ್ಯ, ಪುರುಷೋತ್ತಮ ಕಾರಂತ, ಎಂ.ಆರ್.ಬಾಳೀಕಾಯಿ, ರಘೋತ್ತಮ ಪುಟ್ಟಿ, ವ್ಹಿ.ಟಿ.ಕಾಳೆ ಹಾಗೂ ಸಿ.ಚಂದ್ರಶೇಖರ್ ಅವರುಗಳ ಜೀವನ ಸಾಧನೆಗಳ ಪುಸ್ತಕಗಳು ಸಿದ್ಧಗೊಂಡಿವೆ. ಇವರಲ್ಲಿ ಮೂವರು ಕಲಾವಿದರು ಇಂದು ಇಲ್ಲವಾಗಿದ್ದಾರೆ. ಅವರ ಬಗ್ಗೆ ಮಾಹಿತಿ ಸಂಗ್ರಹಿಸುವುದು ಅತ್ಯಂತ ದುಸ್ತರ ಕಾರ್ಯವಾಗಿದ್ದು ಆಯಾ ಲೇಖಕರು ಆ ಕಾರ್ಯವನ್ನು ಸಾಹಸವೆಂಬಂತೆ ತೆಗೆದುಕೊಂಡು ಬರೆದಿದ್ದಾರೆ. ಉಳಿದ ಲೇಖಕರು ತಮ್ಮ ಲೇಖನದ ಕಲಾವಿದರನ್ನು ಅನೇಕ ಬಾರಿ ಸಂಪರ್ಕಿಸಿ, ಸಂದರ್ಶಿಸಿ ಅಭ್ಯಾಸ ಪೂರ್ಣವಾಗಿ ಬರೆದಿದ್ದಾರೆ. ಈ ಎಲ್ಲ ಬರಹಗಾರರಿಗೆ ಮತ್ತು ಸಂಪಾದಿಸಿಕೊಟ್ಟ ಡಾ.ಅ.ಲ. ನರಸಿಂಹನ್ ಅವರಿಗೆ ಅಕಾಡೆಮಿ ಪರವಾಗಿ ಧನ್ಯವಾದಗಳು. ಅಕಾಡೆಮಿಯ ಇನ್ನೊಂದು ಗ್ರಂಥ 'ಮುಖಗಳೊಂದಿಗೆ ಮುಖಾಮುಖಿ' ಭಾವಚಿತ್ರ ಪರಂಪರೆ ಶೀರ್ಷಿಕೆಯ ಅಧ್ಯಯನ ಯೋಗ್ಯ ಕೃತಿಯನ್ನು ನಮ್ಮ ಮನವಿಯಂತೆ ಬರೆದು ಕೊಟ್ಟಿರುವ ವಿಮರ್ಶಕರಾದ ಶ್ರೀ ಕೆ.ವಿ.ಸುಬ್ರಹ್ಮಣ್ಯಂರವರಿಗೆ ಅಕಾಡೆಮಿಯ ಪರವಾಗಿ ವಂದನೆಗಳು.

ಕರ್ನಾಟಕದ ಎಲ್ಲ ಜಿಲ್ಲೆಗಳ ಸಮಗ್ರ ಚಿತ್ರಕಲೆಯ ಸ್ಥೂಲ ನೋಟವನ್ನು ಒಂದೆಡೆಗೆ ಮಾಡಿಕೊಡುವ ಉದ್ದೇಶದಿಂದ **ಕರ್ನಾಟಕ ಚಿತ್ರಕಲಾ ದರ್ಶನ** ಎಂಬ ಬೃಹತ್ ಸಂಪುಟವನ್ನು ತರುತ್ತಿದ್ದು ಇದನ್ನು ಡಾ.ಎಸ್.ಸಿ.ಪಾಟೀಲ ಅವರು ಸಂಪಾದಿಸಿ ಕೊಡುತ್ತಿದ್ದಾರೆ. ಅದಕ್ಕಾಗಿ ಹೆಚ್ಚಿನ ಅನುದಾನಕ್ಕಾಗಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆ. ಜನಪ್ರಿಯ ಕಲಾಮಾಲೆಯ ಅಡಿಯಲ್ಲಿ ಕರ್ನಾಟಕದ ದೇಶಿ ಚಿತ್ರಕಲೆಯನ್ನು ಪ್ರಾದೇಶಿಕ ವೈಶಿಷ್ಟ್ಯತೆಯ ಹಿನ್ನೆಲೆಯಲ್ಲಿ ಪರಿಚಯಿಸುವ ದೃಷ್ಟಿಯಿಂದ ಈ ಕೆಳಗಿನ ಗ್ರಂಥಗಳನ್ನು ತಜ್ಞ ವಿದ್ವಾಂಸರಿಂದ ಬರೆಯಿಸಿ ಇದೀಗ ಪ್ರಕಟಿಸುತ್ತಿದ್ದೇವೆ.

೧. ರಂಗೋಲಿ ಚಿತ್ರಕಲೆ
೨. ಶೀಗಿ ಚಿತ್ರಕಲೆ
೩. ಕಸೂತಿ ಚಿತ್ರಕಲೆ
೪. ಹಚ್ಚೆ ಚಿತ್ರಕಲೆ
೫. ಬೆಳದಿಂಗಳ ಚಿತ್ರಕಲೆ
೬. ಚಿತ್ತಾರಗೊಂಬೆ ಚಿತ್ರಕಲೆ
೭. ನಾಗಾರಾಧನೆ ಮತ್ತು ಚಿತ್ರಕಲೆ
೮. ಯಕ್ಷಗಾನ ಮತ್ತು ಚಿತ್ರಕಲೆ
೯. ಬಿದರಿ ಚಿತ್ರಕಲೆ
೧೦. ಭೂತಾರಾಧನೆ ಮತ್ತು ಚಿತ್ರಕಲೆ

ಅಳಿದು ಹೋಗುತ್ತಿರುವ ನಮ್ಮ ಜಾನಪದರ ಈ ಚಿತ್ರಕಲೆಯನ್ನು ಉಳಿಸಿ ಬೆಳೆಸಿಕೊಳ್ಳುವ ಮತ್ತು ಜನಸಾಮಾನ್ಯರಿಗೂ ಪರಿಣಿತರಿಗೂ ಸುಲಭ ಬೆಲೆಯಲ್ಲಿ ಕಲೆಯ ಈ ಸಾಹಿತ್ಯವನ್ನು ತಲುಪಿಸುವುದು ನಮ್ಮ ಉದ್ದೇಶವಾಗಿದೆ. ಎಲ್ಲ ವರ್ಗದ ಜನರು ಕಲೆಯನ್ನು ಅರ್ಥೈಸಿಕೊಳ್ಳಬೇಕು ಮತ್ತು ಅದರೊಂದಿಗೆ ತಾವೂ ಬೆರೆತುಕೊಳ್ಳಬೇಕು ಅಂದಾಗ ಮಾತ್ರ ಕಲೆ ಉಳಿಯುತ್ತದೆ ಮತ್ತು ಬೆಳೆಯುತ್ತದೆ. ಇಂತಹ ಕೆಲಸಗಳು ಹಲವಾರು ರೀತಿಯಿಂದ ಆಗಬೇಕಾಗಿದೆ. ಕಲಾ ಪ್ರದರ್ಶನ, ಕಲಾಶಿಬಿರ, ವಿಚಾರ ಸಂಕಿರಣ, ಕಲಾ ಪ್ರಾತ್ಯಕ್ಷಿಕೆ ಇತ್ಯಾದಿಯಾಗಿ ಮಾಡುತ್ತ ಹೆಚ್ಚು ಹೆಚ್ಚು ಜನಪ್ರಿಯಗೊಳಿಸುವ ಕೆಲಸಗಳು ನಡೆದಷ್ಟು ಈ ಕ್ಷೇತ್ರ ಬೆಳೆಯುತ್ತದೆ.

ಈ ಹಿನ್ನೆಲೆಯಲ್ಲಿ ಪ್ರಸ್ತುತ ಜನಪ್ರಿಯ ಕಲಾಮಾಲಿಕೆಯಲ್ಲಿ ಈ ಹೊತ್ತಿಗೆಗಳನ್ನು ಪ್ರಕಟಿಸು ತ್ತಿದ್ದೇವೆ. ನಮ್ಮ ಮನವಿಯನ್ನು ಒಪ್ಪಿ ಈ ಹೊತ್ತಿಗೆಗಳನ್ನು ತಮ್ಮ ಬಿಡುವಿಲ್ಲದ ವೇಳೆಯಲ್ಲಿಯೂ ನಮಗಾಗಿ ಕಷ್ಟಪಟ್ಟು ಬರೆದುಕೊಟ್ಟ ಎಲ್ಲ ಲೇಖಕರಿಗೆ ಮತ್ತು ಈ ಪುಸ್ತಕಗಳ ಯೋಜನೆಯನ್ನು ರೂಪಿಸಿ, ಪರಿಣಿತ ಲೇಖಕರನ್ನು ಹುಡುಕಿ, ಅವರಿಂದ ಬರವಣಿಗೆಯನ್ನು ಬರೆಯಿಸಿ ಅವುಗಳನ್ನು ಸುಂದರವಾಗಿ ಸಂಪಾದಿಸಿ ಕೊಟ್ಟವರು ಅಕಾಡೆಮಿಯ ಸದಸ್ಯರಾದ ಸಂಶೋಧಕ ಡಾ.ಎಸ್.ಸಿ.ಪಾಟೀಲ ಅವರಿಗೆ ಅಕಾಡೆಮಿಯ ಪರವಾಗಿ ವಂದನೆಗಳು.

ನಾವು ಮೂರು ವರ್ಷಗಳಲ್ಲಿ ಮಾಡಿದ ಕಾರ್ಯಕ್ರಮಗಳ ಪಟ್ಟಿಯನ್ನು ನಿಮ್ಮ ಮುಂದಿಟ್ಟಿದ್ದೇವೆ. ಎಲ್ಲಾ ಕಾರ್ಯಕ್ರಮಗಳಲ್ಲೂ ನಮ್ಮೊಡನೆ ಸಹಕರಿಸಿದ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕೇಂದ್ರ ಲಲಿತಕಲಾ ಅಕಾಡೆಮಿ, ರೀಜನಲ್ ಸೆಂಟರ್ ಚೆನ್ನೈ, ಐಫೇಕ್ಸ್ ಸಂಸ್ಥೆಗೆ ವಂದನೆಗಳು. ನನ್ನೊಡನೆ ಇದುವರೆಗೂ ಸಹಕರಿಸಿ ಉಪಯುಕ್ತ ಸಲಹೆಗಳನ್ನು ನೀಡಿದ ಸದಸ್ಯ ಮಿತ್ರರೆಲ್ಲರಿಗೂ ನನ್ನ ಇಡೀ ತಂಡದ ಪರವಾಗಿ ಹಾಗೂ ವೈಯಕ್ತಿಕವಾಗಿ ಮತ್ತೊಮ್ಮೆ ವಂದನೆಗಳನ್ನು ಸಲ್ಲಿಸುತ್ತಿದ್ದೇನೆ.

ವಿಶೇಷವಾಗಿ ಸಮನ್ವಯಕಾರರಾಗಿ ಈ ಕಾರ್ಯ ಆಗು ಮಾಡಿದ ಸದಸ್ಯ ಶ್ರೀ ಪ.ಸ. ಕುಮಾರ್ ಅವರಿಗೆ ನನ್ನ ಕೃತಜ್ಞತೆಗಳು. ಈ ಎಲ್ಲ ಪ್ರಕಟಣೆಗಳೂ ವಿವಿಧ ಮುದ್ರಣಾಲಯಗಳಲ್ಲಿ ರೂಪತಳೆದಿದ್ದು, ಅವುಗಳ ಮಾಲೀಕರಿಗೆ, ಮುಖಚಿತ್ರವನ್ನು ಕಲಾಕೃತಿಯೆಂಬಂತೆಯೇ ರಚಿಸಿಕೊಟ್ಟ ಶ್ರೀ ಸುಧಾಕರ ದರ್ಬೆ ಅವರಿಗೆ, ಅಕಾಡೆಮಿ ರಿಜಿಸ್ಟ್ರಾರ್ ಶ್ರೀ ಬಿ.ಟಿ. ಮುನಿರಾಜಯ್ಯ ಮತ್ತು ಸಿಬ್ಬಂದಿವರ್ಗ, ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಬೆಂಬಲ ನೀಡಿದ ಮಹನೀಯರಿಗೆಲ್ಲಾ ನಮ್ಮ ಧನ್ಯವಾದಗಳು. ನಮ್ಮ ಈ ಕಿರುಪ್ರಯತ್ನಗಳನ್ನು ಕಲಾವಿದರು, ಸಹೃದಯ ಕಲಾಸಕ್ತರು ತುಂಬು ಹೃದಯದಿಂದ ಸ್ವಾಗತಿಸುತ್ತಾರೆಂದು ನಂಬಿದ್ದೇನೆ.

ಬೆಂಗಳೂರು
೨೦೦೪

ಪೀಟರ್ ಎ. ಲೂಯಿಸ್
ಅಧ್ಯಕ್ಷರು

# ಸಂಪಾದಕೀಯ

ಎಲ್ಲ ಅನ್ಯಶಿಸ್ತುಗಳಲ್ಲಿ ಅದಂತೆ ದೃಶ್ಯಕಲೆಯ ಕ್ಷೇತ್ರದಲ್ಲೂ ಹೊಸ ನೀರು ಪಶ್ಚಿಮದಿಂದ ಹರಿದು ಬಂದಿದೆ. ಅದರೊಂದಿಗೆ ನಮ್ಮದೇ ಆದ ದೇಶಿಪರಂಪರೆಯ ತಿಳುವಳಿಕೆಯ ಹಿನ್ನಲೆಯಲ್ಲಿಯೂ ಈ ಕಲೆ ಬೆಳೆದು ಬಂದಿದೆ. ಈ ಎರಡೂ ವಿಭಿನ್ನ ಜ್ಞಾನಪರಂಪರೆಯ ತಿಳುವಳಿಕೆಯ ಸಂಪರ್ಕ, ಸಂಸರ್ಗದಲ್ಲಿ ಮತ್ತೊಂದು ಬಗೆಯ ಹೊಸಜ್ಞಾನ ಪ್ರವಾಹ ನಮ್ಮ ಕಲಾಪ್ರಪಂಚದಲ್ಲಿ ಸಂಚಲನೆಗೊಂಡಿದ್ದು ಅದು ನಮ್ಮನ್ನು ದಿಗ್ಭ್ರಮೆಗೊಳಿಸುವಷ್ಟು ಈ ಕ್ಷೇತ್ರವನ್ನು ಆವರಿಸಿಕೊಳ್ಳುತ್ತಿದೆ.

ನಮ್ಮ ತನವನ್ನೆಲ್ಲ ನಾವು ಎಲ್ಲಿ ಕಳೆದುಕೊಳ್ಳುತ್ತೇವೆಯೋ ಎಂಬ ಆತಂಕ ಕೂಡ ಕಲಾವಲಯದಲ್ಲಿ ಉಂಟಾಗುತ್ತದೆ. ಜಾಗತೀಕರಣ ನಮ್ಮ ಸ್ಥಳೀಕರಣದ ಕಲಾ ಸಂಸ್ಕೃತಿಯ ಮೇಲೆ ಮೂಡಿಸಿದ ಈ ಪರಿಣಾಮದ ಬಗ್ಗೆ ಗಂಭೀರ ಚಿಂತನೆಗಳು ನಡೆಯಬೇಕಾಗಿವೆ, ಇಂತಹ ಸಂಕ್ರಮಣ ಕಾಲದಲ್ಲಿ ಸಹಜವಾಗಿಯೇ ದೇಶಿಕಲಾ ಚಿಂತನೆಗೆ ಹೆಚ್ಚು ಪ್ರಾಮುಖ್ಯತೆ ಪ್ರಾಪ್ತವಾಗುತ್ತಲಿದೆ.

ಕರ್ನಾಟಕದಲ್ಲಿ ಈಗ ಸ್ಥಾನಿಕ ನೆಲೆಯಲ್ಲಿ ಪ್ರಾದೇಶಿಕ ಹಿನ್ನೆಲೆಯ ದೇಶಿಚಿತ್ರ ಕಲೆಯ ಬಹುವಿನ್ಯಾಸಗಳ ಕಡೆಗೆ ನಾವು ಗಮನಹರಿಸಬೇಕಾಗಿದೆ. ಇಂದು ಶಿಷ್ಟಪರಂಪರೆಯ ಚಿತ್ರಕಲೆ ವ್ಯಾಪಕವಾದ ಪ್ರಚಾರ ಮಾಧ್ಯಮದಿಂದ ಮುಂಚೂಣಿಯಲ್ಲಿದ್ದು ಚಿತ್ರಕಲೆ ಎಂದರೆ ಶಿಷ್ಟ ಚಿತ್ರಕಲೆಯೇ ಎಂಬ ವಾತಾವರಣ ಉಂಟಾಗಿದೆ. ಅದರೆ ಈ ಕಲೆಯ ತಾಯಿಬೇರುಗಳು ಜನಪದ ಚಿತ್ರಕಲೆಯಿಂದ ಬಂದವುಗಳು ಎಂಬ ಪ್ರಜ್ಞೆಯನ್ನು ನಾವು ಅರಿಯಬೇಕಾಗಿದೆ. ಈ ಹಿನ್ನಲೆಯಲ್ಲಿ ನಮ್ಮ ಜಾನಪದ ನೆಲೆಯ ಚಿತ್ರಕಲಾ ಸಂಸ್ಕೃತಿಯನ್ನು ನಾವು ಜಾಗತಿಕ ನೆಲೆಯಲ್ಲಿ ಪರಿಚಯಿಸುವ, ಅನ್ವಯಗೊಳಿಸುವ, ಕಾರ್ಯಕ್ರಮಗಳನ್ನು ಅಸ್ತಿತ್ವಕ್ಕೆ ತರಬೇಕಾಗಿದೆ. ಈ ದಿಸೆಯಲ್ಲಿ ಅಕಾಡೆಮಿಯ ಈ ಯೋಜನೆ ಒಂದು ಸಣ್ಣಪ್ರಯತ್ನಮಾತ್ರ. ಹೆಚ್ಚಿನ ಅಧ್ಯಯನಗಳಿಗೆ ಇದು ನಾಂದಿಯಾಗುತ್ತದೆ ಎಂಬ ವಿಶ್ವಾಸ ನಮ್ಮದಾಗಿದೆ. ಸಾವಿರಾರು ವರ್ಷಗಳ ನಮ್ಮ ಚಿತ್ರಕಲೆಯನ್ನು ಅಭ್ಯಸಿಸಿದಾಗ ಕೂಡ ನಮ್ಮ ಜಾನಪದದ ವಿವಿಧ ಮುಖಗಳು ಅದರಲ್ಲಿ ಅಂತರ್ಗತವಾಗಿರುವುದನ್ನು ಮತ್ತು ಅದಕ್ಕೆ ಒಂದು ಜೀವಶಕ್ತಿ

ಒದಗಿಸಿರುವುದನ್ನು ವಿದ್ವಾಂಸರು ಈಗಾಗಲೇ ಗುರುತಿಸಿದ್ದಾರೆ. ಹೀಗೆ ಜಾನಪದ ನಮ್ಮ ಪ್ರಾಚೀನ ಮಾರ್ಗ ಚಿತ್ರಕಲೆಯ ಒಂದು ಅವಿಭಾಜ್ಯ ಅಂಗವಾಗಿರುವುದನ್ನು ಯಾರು ಅಲ್ಲಗಳೆಯುವಂತಿಲ್ಲ.

ಜಾನಪದ ಜನಪದರ ಬದುಕಿನ ಸಂಸ್ಕೃತಿಯನ್ನು ಬಿಂಬಿಸುವ ಜೀವಂತ ವ್ಯವಸ್ಥೆ. ಜನಾಂಗದ ಬದುಕಿನೊಂದಿಗೆ ಪರಂಪರಾಗತವಾಗಿ ಬೆಳೆದು ಬಂದಿರುವ ಜನಪದ ಚಿತ್ರಕಲೆ ಆಯಾ ಪ್ರದೇಶದ ಜನಾಂಗದ ಸಾಂಸ್ಕೃತಿಕ ಅಧ್ಯಯನಕ್ಕೆ ಮೂಲ ಆಕರ ಸಾಮಗ್ರಿಯಾಗಿದೆ. ನಾಡಿನ ಸಂಸ್ಕೃತಿ ಹಾಗೂ ಪರಂಪರೆಯನ್ನು ಜೀವಂತಿವಾಗಿ ಮೌಖಿಕ ಪರಂಪರೆಯಲ್ಲಿ ಉಳಿಸಿಕೊಂಡು ಬಂದ ಹಿರಿಮೆ ಇವುಗಳಿಗೆ ಇದೆ. ವ್ಯಕ್ತಿತನ್ನ ಅನುಭವಗಳಿಗೆ ಜೀವ ಕೊಟ್ಟದ್ದು, ಬಣ್ಣ ತುಂಬಿದ್ದು ಇಂಥ ಕಲೆಗಳ ಮೂಲಕವೇ. ವ್ಯಕ್ತಿಯ ಬದುಕಿನಷ್ಟೇ ವೈವಿಧ್ಯಮಯ, ವರ್ಣಮಯವಾಗಿ ಈ ಕಲೆ ಬೆಳೆದು ಬಂದಿದೆ.

ಇಂದಿನ ಶಿಷ್ಟಪರಂಪರೆ ಚಿತ್ರಕಲೆಯೇ ನಮ್ಮ ಚಿತ್ರಕಲೆ ಎಂಬ ಭ್ರಮೆಯಲ್ಲಿರುವ ನಮಗೆ ನಮ್ಮ ದೇಶಿಚಿತ್ರಕಲೆಯ ಬಗೆಗಿನ ತಿಳುವಳಿಕೆ ತೀರ ಕಡಿಮೆ. ಈ ಕೊರತೆಯನ್ನು ಹೋಗಲಾಡಿಸುವ ಪ್ರಯತ್ನವಾಗಿ ಅಕಾಡೆಮಿ ದೇಶೀ ಜನಪ್ರಿಯ ಕಲಾಮಾಲೆಯ ಅಡಿಯಲ್ಲಿ ಕರ್ನಾಟಕದ ವಿವಿಧ ಪ್ರದೇಶದ ಪ್ರಾತಿನಿಧಿಕವಾದ ಜನಪದ ಚಿತ್ರಕಲೆಯ ಗ್ರಂಥಗಳನ್ನು ಹೊರತರಲಾಗುಗುತ್ತಿದೆ. ಇಲ್ಲಿ ಜನಪದ ಚಿತ್ರಕಲೆಯನ್ನು ತಾತ್ವಿಕ ಮತ್ತು ಸೈದ್ಧಾಂತಿಕ ನೆಲೆಯಲ್ಲಿ ವ್ಯಾಖ್ಯಾನಿಸುವ, ವಿಶ್ಲೇಷಿಸುವ ಮತ್ತು ದಾಖಲೀಕರಣಗೊಳಿಸುವ ಮಹತ್ವದ ಉದ್ದೇಶವನ್ನು ಹೊಂದಲಾಗಿದ್ದು ಕ್ಷೇತ್ರಕಾರ್ಯದಿಂದ ಮೂಲ ಪ್ರಮಾಣಭೂತವಾದ ಸಂಶೋಧನಾ ವಿವರಗಳು ಇಲ್ಲಿ ಹರಳುಗಟ್ಟಿ ನಿಂತಿವೆ.

ಈ ಗ್ರಂಥಗಳನ್ನು ಬರೆಯಿಸುವ ಸಂದರ್ಭದಲ್ಲಿ, ನಾನು ಕೊಟ್ಟ ತೊಂದರೆಯನ್ನು ಸಹಿಸಿಕೊಂಡು ಪ್ರೀತಿಯಿಂದ ಬರೆದುಕೊಟ್ಟ ಎಲ್ಲಾ ಸನ್ಮಿತ್ರ ಬರಹಗಾರರಿಗೆ ಮತ್ತೊಮ್ಮೆ ವಂದನೆಗಳನ್ನು ಹೇಳುತ್ತೇನೆ.

ಅಕಾಡೆಮಿಯ ಅಧ್ಯಕ್ಷರಾದ ಶ್ರೀ ಪೀಟರ್ ಎ. ಲೂಯಿಸ್ ಮತ್ತು ಪ್ರಕಟಣಾ ಸಮಿತಿಯ ಸದಸ್ಯರು ಹಾಗೂ ಅಕಾಡೆಮಿಯ ಎಲ್ಲಾ ಸದಸ್ಯರು ಈ ಯೋಜನೆಯಲ್ಲಿ ಈ ಗ್ರಂಥಗಳನ್ನು ಪ್ರಕಟಿಸಲು ಸರ್ವಾನುಮತದ ಅಭಿಪ್ರಾಯವನ್ನು ವ್ಯಕ್ತಪಡಿಸುವುದರೊಂದಿಗೆ ಸಹಕಾರ ನೀಡಿದ್ದಾರೆ

ಅಕಾಡೆಮಿಯ ರಿಜಿಸ್ಟ್ರಾರ್ ಶ್ರೀ ಬಿ. ಟಿ. ಮುನಿರಾಜಯ್ಯ ಅವರು ನನಗಿಂತಲ್ಲೂ ಹೆಚ್ಚು ಕಾಳಜಿವಹಿಸಿ ಬರಹಗಳನ್ನು ತರಿಸಿಕೊಡಲು ಮತ್ತು ಮುದ್ರಣದ ಜವಾಬ್ದಾರಿಯನ್ನು ಹೊತ್ತು ಸಹಾಯ ಮಾಡಿದ್ದಾರೆ. ಅವರು ತೋರಿದ ಪ್ರೀತಿ, ಸಹಕಾರಕ್ಕೆ ವಂದನೆಗಳು. ಪ್ರಕಟಣೆಯಲ್ಲಿ ಸಹಾಯ ಮಾಡಿದ ಸ್ನೇಹಿತ ಸದಸ್ಯರಾದ ಪ. ಸ. ಕುಮಾರ ಅವರಿಗೂ ಅಕಾಡೆಮಿಯ ಸಿಬ್ಬಂದಿ ವರ್ಗದವರಿಗೂ ಮತ್ತು ಕಡಿಮೆ ವೇಳೆಯಲ್ಲಿ ಅಕ್ಷರ ಜೋಡಣೆ ಮತ್ತು ಪುಟವಿನ್ಯಾಸ ಮಾಡಿಕೊಟ್ಟ ಹೊಸಪೇಟೆಯ ಯಾಜಿ ಗ್ರಾಫಿಕ್ಸ್‌ನ ಸವಿತಾಯಾಜಿ ಮತ್ತು ಗಣೇಶ ಯಾಜಿಯವರಿಗೆ ಸಹ ವಂದನೆಗಳನ್ನು ತಿಳಿಸುವುದು ನನ್ನ ಕರ್ತವ್ಯವಾಗಿದೆ.

ಬಸವ ಜಯಂತಿ
2004

ಡಾ. ಎಸ್. ಸಿ. ಪಾಟೀಲ
ಸಂಪಾದಕರು

ನಾಗಾರಾಧನೆ ಇಂದು ನಿನ್ನೆಯದಲ್ಲ. ಮಾನವನ ಆದಿಮ ಸಂಸ್ಕೃತಿಯಿಂದ ತೊಡಗಿ ನೂತನ ಸಂಸ್ಕೃತಿಯವರೆಗೆ ಬೆಳೆದು ಬಂದಿರುವ ಜನಪದ ಆಚರಣೆಯಾಗಿದೆ. ನಾಗಾರಾಧನೆ ಮೂಢನಂಬಿಕೆಯೆಂದು ಆಧುನಿಕ ವಿಚಾರವಾದಿಗಳು ಗೊಣಗಬಹುದಾದರೂ ನಾಗರಾಜ ಪ್ರಪಂಚದ ಬಹುತೇಕ ಸಂಸ್ಕೃತಿಗಳಲ್ಲಿ ಪೂಜಾರ್ಹದೈವವಾಗಿದ್ದಾನೆ. ಇದನ್ನು ಇಂದಿಗೂ ಸಹಾ ಪ್ರಪಂಚದ ಮೂಲೆಮೂಲೆಗಳಲ್ಲಿ ಉತ್ಖನನ ನಡೆಸುವಾಗ ದೊರಕುವ ಪ್ರಾಚೀನ ಸಂಸ್ಕೃತಿಗಳ ಅವಶೇಷಗಳಿಂದ ಕಂಡುಕೊಳ್ಳಬಹುದು. ಜೀವಂತರೂಪಗಳಲ್ಲಿ ಆರಾಧಿಸಲ್ಪಡುವ ಪ್ರಾಣಿಗಳಲ್ಲಿ ನಾಗರಾಜ ಅಗ್ರಗಣ್ಯನಾಗಿದ್ದಾನೆ.

ಇತ್ತ ಮೆಡಿಟರೇನಿಯನ್ ತೀರದಿಂದ ಮಲೇಶಿಯಾದವರೆಗೆ, ಅತ್ತ ಆಸ್ಟ್ರೇಲಿಯಾದಿಂದ ಅಮೇರಿಕಾದ ಮೂಲ ನಿವಾಸಿ ಪ್ರದೇಶಗಳವರೆಗೆ ಸರ್ಪರಾಜನು ಮಂದಿರಗಳಲ್ಲಿ ಆರಾಧನಾ ಮೂರ್ತಿಯಾಗಿಯೂ, ವಾಸ್ತುಶಿಲ್ಪಗಳಲ್ಲಿ ಮಂಗಳಕಾರಕ ಚಿಹ್ನೆಯಾಗಿಯೂ, ರಾಜಮುದ್ರೆ ಕಿರೀಟಗಳಲ್ಲಿ ಅಧಿಕಾರ ಸೂಚಕವಾಗಿಯೂ, ಕುಲ ಪಂಗಡಗಳ ಲಾಂಛನವಾಗಿಯೂ, ಮಳೆ-ಬೆಳೆ, ಫಲವತ್ತತೆ, ಸಂತಾನಾಭಿವೃದ್ಧಿ, ರೋಗಶಮನ ಮುಂತಾದ ಭಾಗ್ಯಗಳ ಅಧಿದೇವತೆಯಾಗಿಯೂ ಭೂಮಂಡಲಕ್ಕೆ, ಆಧಾರಸ್ತಂಭವಾಗಿಯೂ ನಿಂತು ಮನುಕುಲದ ರಕ್ಷಣೆ ಮಾಡುವವನು ಎಂಬ ಕೀರ್ತಿಗೆ ಪಾತ್ರನಾಗಿದ್ದಾನೆ.

ನಾಗಾರಾಧನೆ ಜಗತ್ತಿನ ಯಾವ ಪ್ರದೇಶದಲ್ಲಿ ಮೊದಲು ಆರಂಭವಾಯಿತು ಎಂದು ಖಚಿತವಾಗಿ ನಿರ್ಧಾರವಾಗಿಲ್ಲವಾದರೂ, ಜೇಮ್ಸ್ ಫರ್ಗ್ಯೂಸನ್ ಎಂಬ ವಿದ್ವಾಂಸರ ಅಭಿಪ್ರಾಯದಂತೆ ಮಧ್ಯ ಪ್ರಾಚ್ಯದ ಯೂಫ್ರೆಟಿಸ್ ಪ್ರದೇಶದಲ್ಲಿನ ತುರೇನಿಯನ್ ಜನಾಂಗದವರಿಂದ ಪ್ರಾರಂಭವಾಯಿತು ಎನ್ನಲಾಗಿದೆ. ಹಾಗೆಯೇ ಜಗತ್ತಿನ ಹಲವಾರು ಪ್ರಾಗೈತಿಹಾಸಿಕ ಸಂಸ್ಕೃತಿಗಳಲ್ಲಿ ಸರ್ಪಪೂಜೆ ಸಂಪ್ರದಾಯದ ಅವಶೇಷಗಳು ಕಂಡುಬಂದಿದೆ. ಇದರಿಂದಾಗಿ ಇದು ಜಗತ್ತಿನ ಅತಿ ಪ್ರಾಚೀನತಮ ಸಂಪ್ರದಾಯಗಳಲ್ಲೊಂದು ಎಂದು ಖಚಿತವಾಗಿ ನಿರ್ಧರಿಸಬಹುದು.

ಅನಾದಿಕಾಲದಲ್ಲಿ ಮಾನವ ಚಿಂತನಶೀಲನಾಗತೊಡಗಿದಾಗ ಪ್ರಥಮತಃ ಪ್ರಾಕೃತಿಕ ವಸ್ತುಗಳನ್ನೂ, ಪಂಚಭೂತಗಳನ್ನೂ, ಪ್ರಾಣಿಗಳ ಅಂತರ್ಯಾಮಿ ಶಕ್ತಿಗಳನ್ನೂ, ಮಾತೃ ಪಿತೃ ದೇವತೆಗಳ ಆತ್ಮಗಳನ್ನೂ ಪೂಜಿಸಲು ಪ್ರಾರಂಭಿಸಿದ ಜಗತ್ತನ್ನು ನಿಯಂತ್ರಿಸುವ ಸೂರ್ಯ, ಚಂದ್ರ, ಮೋಡ, ಗಾಳಿ, ಮಳೆ, ನೀರು, ಮರ ಮುಂತಾದ ಪ್ರಾಕೃತಿಕ ಶಕ್ತಿಗಳಲ್ಲಿ ವಿಶಿಷ್ಟವೆನಿಸಿದ ಪ್ರಾಣಿ, ಪಕ್ಷಿ, ಹಾವುಗಳಲ್ಲಿಯೂ ದೈವತ್ವವನ್ನು ಕಲ್ಪಿಸಿಕೊಂಡು ಪೂಜಿಸ ತೊಡಗಿದ. ಆದಿ ಮಾನವ ದೈವತ್ವವನ್ನು ಕಲ್ಪನೆಮಾಡಿದ ಅತಿ ಪ್ರಾಚೀನ ಪ್ರಾಣಿ ಚಿಹ್ನೆ (ಟೋಟಂ) ಸರ್ಪ ಎಂದು ಹೇಳಲಾಗಿದೆ. ಕಾಲಿಲ್ಲದೆ ನಡೆಯುವ, ಕಿವಿಯಿಲ್ಲದೆ ಕೇಳುವ, ಅಂಕುಡೊಂಕಾಗಿ ಸುರುಳಿ ಸುರುಳಿಯಾಗಿ ಸುತ್ತುವ, ತಲೆಯೆತ್ತಿ ಹೆಡೆಯರಳಿಸುವ, ಸೂಜಿ ನಾಲಗೆಯ ವಿಷಭರಿತವಾದ ಈ ವಿಚಿತ್ರ ಭಯಾನಕ ಜಂತು ಮಾನವನನ್ನು ಕೆರಳಿಸಿದೆ. ಚಿತ್ರಕಾರ, ಕವಿಗಳಿಗೆ ಸ್ಫೂರ್ತಿ ನೀಡಿದೆ. ಜನ ಸಾಮಾನ್ಯರಲ್ಲಿ ಭಕ್ತಿ ಭಾವಗಳನ್ನು ಮೂಡಿಸಿದೆ.

ಮಾನವನ ಹೆಚ್ಚಿನ ಆಚರಣೆಗಳಿಗೆ ಭಯವೇ ಮೂಲವೆನ್ನಲಾಗಿದೆ. ಆದರೆ ಭಯ ಕ್ಕಿಂತಲೂ ಮಿಗಿಲಾಗಿ ಸರ್ಪನಲ್ಲಿರುವ ಅಲೌಕಿಕ ಸೌಂದರ್ಯ ಹಾಗೂ ಕೆಲವು ವಿಚಿತ್ರ ಸ್ವಭಾವಗಳು ಮಾನವನಲ್ಲಿ ಭಯ ಭಕ್ತಿ ಮೂಡಿಸಿರಬೇಕು. ಚಿನ್ನದಂತೆ ಹೊಳೆಯುವ ಮೈ ಕಾಂತಿಯುಳ್ಳ, ಮೋಹಕವಾಗಿ ಹೆಡೆಯನ್ನು ಅರಳಿಸುವ ಸರ್ಪದ ಆಕರ್ಷಕ ಭಂಗಿಗೆ ಆಕರ್ಷಿತ ರಾಗದವರುಂಟೆ? ವಿಷವೆಂಬ ವಸ್ತು ಅದರಲ್ಲಿ ಇಲ್ಲದಿರುತ್ತಿದ್ದರೆ ಮಾನವ ಅದನ್ನು ಹಿಡಿದು ಮುದ್ದಾಡುತ್ತಿದ್ದನೋ ಏನೋ! ಆದರೆ ಎಷ್ಟೇ ವಿಷಭರಿತವಾಗಿದ್ದರೂ ಸರ್ಪ ವಿನಾಕಾರಣ ಯಾರಿಗೂ ಕಚ್ಚುವುದಿಲ್ಲ. ಅಪಾಯಕಾರಿಯಾದ ವಿಷಭರಿತ ಪ್ರಾಣಿಗಳಲ್ಲಿ ಸರ್ಪದಷ್ಟು ಸಾಧು ಪ್ರಾಣಿ ಬೇರೊಂದಿಲ್ಲ ಎನ್ನುತ್ತಾರೆ. ಹಾಗಾಗಿ ಪ್ರಪಂಚದಾದ್ಯಂತ ಎಲ್ಲಾ ಸಂಸ್ಕೃತಿ ಗಳಲ್ಲೂ ಸರ್ಪ ಪೂಜೆ ಅವಿರತವಾಗಿ ನಡೆದು ಬಂದಿದೆ.

ಪುರಾತನ ಸಂಸ್ಕೃತಿಗಳಾದ ಗ್ರೀಕ್, ಮೆಸಪಟೋಮಿಯಾ ಹಾಗೂ ಮೆಡಿಟರೇನಿಯನ್ ಪ್ರದೇಶಗಳಲ್ಲಿ ಸರ್ಪಾರಾಧನೆಗೆ ವಿಶೇಷ ಮಹತ್ವ ಕೊಟ್ಟದ್ದು ಕಂಡುಬರುತ್ತದೆ. ಅಲ್ಲಿನ ಪ್ರಾಚೀನ ಅವಶೇಷಗಳಿಂದ ಇದಕ್ಕೆ ಸಂಬಂಧಿಸಿದ ವಸ್ತುಗಳು ದೊರೆತಿವೆ. ಸಂತಾನ ಪ್ರಾಪ್ತಿ ಗಾಗಿ ಮತ್ತು ರೋಗ ನಿವಾರಣೆಗಾಗಿ ಅಲ್ಲಿ ನಾಗಪೂಜೆ ನಡೆಯುತ್ತಿತ್ತು. ಗ್ರೀಕರ ರಾಷ್ಟ್ರ ಚಿಹ್ನೆಯೇ ಸರ್ಪವಾಗಿತ್ತು. ಅಲ್ಲಿನ ಆರೋಗ್ಯ ದೇವತೆಯ ಕೈಯಲ್ಲಿನ ಕೋಲಿನಲ್ಲಿ ಸರ್ಪ ಮಿಥುನದ ಲಾಂಛನವಿದೆ. ಆಧುನಿಕ ವೈದ್ಯ ವಿಜ್ಞಾನದ ಲಾಂಛನದಲ್ಲಿಯೂ ಸರ್ಪಮಿಥುನದ ಚಿಹ್ನೆಯಿದೆ. ಯಾವುದೇ ವೈದ್ಯಕೀಯ ಕಾಲೇಜು, ಸಂಘ, ಔಷಧಿ ತಯಾರಿಕಾ ಸಂಸ್ಥೆ, ವೈದ್ಯಕೀಯ ಪುಸ್ತಕ ಮೊದಲಾದುವುಗಳಲ್ಲಿ ಈ ಚಿಹ್ನೆಗಳನ್ನು ಕಾಣಬಹುದು.

ಸರ್ಪ ರೋಗ ನಿವಾರಕ ಎಂಬ ತಮ್ಮ ಪೂರ್ವಜರ ನಂಬಿಕೆಯ ನೆನಪಿಗಾಗಿ ಪಾಶ್ಚಾತ್ಯರು ಇಂದಿಗೂ ಈ ಚಿಹ್ನೆಯನ್ನು ಉಳಿಸಿಕೊಂಡು ಬಂದಿದ್ದಾರೆ. ಗ್ರೀಸಿನ ವೀರರು ಸತ್ತಮೇಲೆ

ಸರ್ಪವಾಗಿ ಅವತರಿಸುತ್ತಾರೆ ಎಂಬ ನಂಬಿಕೆಯಿದೆ. ಗ್ರೀಕ್ ಪುರಾಣಗಳಲ್ಲಿ ಮಾನವ- ಸರ್ಪ ಸಂಬಂಧದ ಹಲವಾರು ಘಟನೆಗಳ ವರ್ಣನೆಯಿದೆ. ವೀರ ಅಲೆಕ್ಸಾಂಡರನು ತನ್ನ ತಾಯಿ ಒಲಿವಿಯಾ ಮತ್ತು ಸರ್ಪರಾಜನ ಮಿಲನದಿಂದ ಹುಟ್ಟಿದ್ದು ಎಂದು ಗ್ರೀಕರ ನಂಬಿಕೆ. ವೀರ ಹರ್ಕ್ಯುಲಸ್ ಮೊದಲು ಸರ್ಪಗಳ ನಾಶಕನಾಗಿದ್ದರೂ ಆಮೇಲೆ ಸರ್ಪಿಣಿ ಎಚಿಡ್ನಾ ಜೊತೆ ಸೇರಿ ನೀಥಿಯನ್ ವಂಶದ ಜನಕನಾದ ಎಂದಿದೆ.

ಎಥೆನ್ಸ್ ನಗರಕ್ಕೆ ಸರ್ಪಕಾವಲಾಗಿ ನಾಲ್ಕೂ ಕಡೆಗಳಲ್ಲಿ ಸರ್ಪ ದೇವಾಲಯಗಳಿದ್ದು ಅವುಗಳಲ್ಲಿ ಜೀವಂತ ಸರ್ಪಗಳೂ ಇರುತ್ತಿದ್ದವು. ರೆಕ್ಕೆ ಕೊಂಬುಗಳಿರುವ ಸರ್ಪಗಳು ಅವರ ಪುರಾಣ ಕಥೆಗಳಲ್ಲಿವೆ. ಸರ್ಪಗಳು ದೇವತೆಗಳ ಪ್ರತಿನಿಧಿ ಹಾಗೂ ದೇವತೆಗಳ ಸಂದೇಶವಾಚಕ ಎಂದು ಅವರು ನಂಬಿದ್ದರು. ಫಲವತ್ತತೆಯ ಸಂಕೇತವಾಗಿ ಮಾತೃದೇವತೆಯ ಕೈಯಲ್ಲಿ ಸರ್ಪವಿರುವುದನ್ನು ಅವರ ಕಲಾಕೃತಿಗಳಲ್ಲಿ ನಾವು ಕಾಣಬಹುದು.

ಹುಡುಗಿಯರು ಸರ್ಪಗುಡಿಗೆ ತೆರಳಿ ಹಾವುಗಳಿಗೆ ರೊಟ್ಟಿ, ಜೇನು ನೀಡುವ ಸಂಪ್ರದಾಯವಿದೆ. ಆ ರೊಟ್ಟಿಯನ್ನು ಸರ್ಪಗಳು ತಿಂದರೆ ದೇಶಕ್ಕೆ ಸುಭಿಕ್ಷೆ ಎಂದು ಅವರು ನಂಬುತ್ತಾರೆ. ಒಮ್ಮೆ ಎಥೆನ್ಸ್ ನಗರವನ್ನು ಪರ್ಶಿಯಾದ ಶತ್ರುಸೈನ್ಯ ಅತಿಕ್ರಮಣ ಮಾಡಲಿಕ್ಕೆ ಬಂದಾಗ ಆ ಸರ್ಪಗಳು ಆಹಾರ ತೆಗೆದುಕೊಳ್ಳಲು ನಿರಾಕರಿಸಿದುವಂತೆ. ಇದು ಅಪಶಕುನ ತಮ್ಮ ಪಟ್ಟಣಕ್ಕೆ ವಿಪತ್ತು ಕಾದಿದೆ ಎಂದು ಭಾವಿಸಿ ನಾಗರಿಕರು ಪಟ್ಟಣ ಬಿಟ್ಟು ಓಡಿದರಂತೆ. ಇಂತಹ ವಿಪತ್ಕಾರಿ ಘಟನೆಗಳನ್ನು ಸರ್ಪಗಳ ಮೂಲಕ ತಿಳಿದುಕೊಳ್ಳುತ್ತಿದ್ದರು.

ಕ್ರೀಟ್ ರಾಜ್ಯದಲ್ಲಿ ಸರ್ಪನಿಗೆ ಹಾಲುಕೊಟ್ಟು ಪೂಜಿಸುವ ಸಂಪ್ರದಾಯ ಕಂಡು ಬರುತ್ತದೆ. ರೋಮನ್ನರಲ್ಲಿ ಪ್ರತ್ಯಕ್ಷ ನಾಗಾರಾಧನೆ ಕಂಡುಬಾರದಿದ್ದರೂ ರೋಮ್ ನಗರಕ್ಕೆ ಹತ್ತಿರದ ಲನುವಿಯಂ ಎಂಬಲ್ಲಿ ಸರ್ಪಾರಾಧನೆ ಇತ್ತು. ಕನ್ಯೆಯರು ಒಂದು ಪರ್ವ ದಿನಗಳಲ್ಲಿ ಗುಹಾ ದೇವಸ್ಥಾನವೊಂದಕ್ಕೆ ಹೋಗಿ ಮಹಾಸರ್ಪಕ್ಕೆ ನೈವೇದ್ಯ ಕೊಟ್ಟು ಬರುವ ಸಂಪ್ರದಾಯ ಅಲ್ಲಿತ್ತಂತೆ. ಸರ್ಪ ಆ ಕನ್ಯೆ ಕೊಟ್ಟ ನೈವೇದ್ಯ ಸ್ವೀಕರಿಸಿದರೆ ಆಕೆ ಇನ್ನೂ ತನ್ನ ಕೌಮಾರ್ಯ ಕಳೆದುಕೊಳ್ಳಲಿಲ್ಲ ಎಂಬ ರುಜುವಾತು ಆಗುತ್ತಿತ್ತಂತೆ. ಎಪಿರಸ್ ಎಂಬಲ್ಲಿ ಸರ್ಪದ ಗುಹಾ ದೇವಾಲಯಕ್ಕೆ ಕುಮಾರಿಯಾದ ಪೂಜಾರಿಣಿ ನಗ್ನಳಾಗಿ ಹೋಗುವ ಸಂಪ್ರದಾಯವಿತ್ತಂತೆ. ಆಕೆಯು ಕೊಟ್ಟ ನೈವೇದ್ಯವನ್ನು ನಾಗರಾಜ ಸ್ವೀಕರಿಸಿದರೆ ಆ ಊರಿಗೆ ಸುಭಿಕ್ಷೆ. ಇಲ್ಲದಿದ್ದರೆ ಬರಗಾಲ ಎಂದು ಜನ ನಂಬುತ್ತಿದ್ದರು. ಬ್ರಿಟನ್ನಿನಲ್ಲಿ ಕೆಲ್ಟ್ ಜನಾಂಗಕ್ಕಿಂತ ಮೊದಲು ಇದ್ದರೆಂದು ನಂಬಲಾದ ಡ್ರೂಯಿಕ್ ಜನರು ಸರ್ಪಾರಾಧಕರಾಗಿದ್ದರೆಂದು ಅಲ್ಲಿಯ ಜನಪದ ಹಾಡುಗಳಿಂದ ತಿಳಿದುಬರುತ್ತದೆ. ಸ್ಕಾಟ್‌ಲ್ಯಾಂಡಿನ ಶಿಲ್ಪಕಲಾಕೃತಿಗಳಲ್ಲಿಯೂ ಸರ್ಪ ಲಾಂಛನವಿದೆ.

ಮಧ್ಯ ಏಷಿಯಾದಲ್ಲಿ ಬ್ಯಾಬಿಲೋನಿಯಾದ ತ್ರಿಮೂರ್ತಿಗಳಲ್ಲಿ ಮೂರನೆಯವನಾದ 'ಹೋವಾ' ಎಂಬ ದೈವ ಸರ್ಪರೂಪದಲ್ಲಿ ಪೂಜಿಸಲ್ಪಡುತ್ತಿತ್ತು. ಮೆಸಪಟೋಮಿಯಾದ ಪ್ರಾಚೀನ ಅವಶೇಷಗಳಲ್ಲಿ ಕೆಂಪು ಕಲ್ಲುಗಳಲ್ಲಿ ಹಾಗೂ ಮಡಕೆಗಳಲ್ಲಿ ಸರ್ಪದ ಚಿತ್ರಿಕರಣ ಕಂಡುಬರುತ್ತದೆ. ಇಲಾಮೈಟ್ ಸಂಸ್ಕೃತಿಯ ಅವಶೇಷಗಳಲ್ಲಿ ಕೊಂಬು, ರೆಕ್ಕೆಗಳಿರುವ ಸರ್ಪನ ಪ್ರತಿರೂಪ ಹಾಗೂ ಮೈ ಕೈಗಳಲ್ಲಿ ಸರ್ಪರೂಪವಿರುವ ಸ್ತ್ರೀ ದೇವತಾ ವಿಗ್ರಹಗಳು ದೊರೆತಿವೆ. ಕೆಲವೆಡೆ ಸರ್ಪವೇ ಪ್ರಧಾನವಾಗಿಯೂ, ಕೆಲವೆಡೆ ಮುಖ್ಯ ದೇವತೆಯ ಸಹಾಯಕ ದೇವತೆಯಾಗಿಯೂ ಸರ್ಪ ಆರಾಧಿಸಲ್ಪಟ್ಟ ಕುರುಹುಗಳು ಅಲ್ಲಿ ಸಾಕಷ್ಟು ಕಾಣಸಿಕ್ಕಿವೆ. ಕಷ್ಟ ಪರಿಹಾರಕ್ಕಾಗಿ ಹಾಗೂ ಇಷ್ಟ ಸಿದ್ಧಿಗಾಗಿ ನಾಗಪೂಜೆ ಮಾಡುವ ಸಂಪ್ರದಾಯ ಅಲ್ಲಿ ಪರಂಪರೆಯಾಗಿ ಬೆಳೆದು ಬಂದಿತ್ತು.

ಫೆಸಿಫಿಕ್ ಸಾಗರದ ಫಿಜಿ ದ್ವೀಪಗಳಲ್ಲಿ ಸುರುಳಿ ಕಟ್ಟಿ ಕೂತ ಸರ್ಪ ಅಲ್ಲಿನ ಮುಖ್ಯ ದೇವತೆಯಾಗಿದೆ. ಆಸ್ಟ್ರೇಲಿಯಾದ ಮೂಲ ನಿವಾಸಿಗಳ ಪುರಾಣಗಳಲ್ಲಿ ದೈತ್ಯಾಕಾರದ ಸರ್ಪ ತನ್ನ ಬಾಲದ ಹೊಡೆತದಿಂದ ಜಗತ್ತನ್ನು ಸೃಷ್ಟಿಸಿದ ಎಂದು ವರ್ಣಿಸಲಾಗಿದೆ. ಭೂಕಂಪ ವಾಗುವುದೂ ಆತನ ಹೊಡೆತದಿಂದಲೇ ಎಂದು ತಿಳಿಸಿದೆ.

ಅಮೇರಿಕಾದ ಆದಿಮ ಸಂಸ್ಕೃತಿಯಲ್ಲಿ ಸರ್ಪಾರಾಧನೆ ವಿಶೇಷವಾಗಿತ್ತು. ಕೊಲಂಬಸನು ಉತ್ತರ ಅಮೇರಿಕಾ ಖಂಡವನ್ನು ಕಂಡು ಹಿಡಿಯುವುದಕ್ಕೆ ಮೊದಲು ಸರ್ಪಾರಾಧನೆ ಅಲ್ಲಿ ವಿಶೇಷವಾಗಿ ಆಚರಣೆಯಲ್ಲಿತ್ತು. ಗಂಡು ಸೂರ್ಯ ಸರ್ಪ ಮತ್ತು ಹೆಣ್ಣು ಸೂರ್ಯ ಸರ್ಪಗಳ ಮಿಲನದಿಂದ ಒಂದು ಗಂಡು ಮತ್ತು ಒಂದು ಹೆಣ್ಣು ಉತ್ಪನ್ನವಾಗಿ ಅವರಿಂದ ಮನುಕುಲ ಬೆಳೆಯಿತು ಎಂದು ಪುರಾಣ ಸಾರುತ್ತದೆ.

ಮಾಯಾ ಜನಾಂಗದ ಮುಖ್ಯ ದೇವತೆಗಳಲ್ಲಿ ರೆಕ್ಕೆಯಿರುವ ಸರ್ಪವೂ ಒಂದು. ಮೆಕ್ಸಿಕೋದ ಕೆಲವು ದೇವಾಲಯಗಳಲ್ಲಿ ಜೀವಂತ ಸರ್ಪವನ್ನು ಸಾಕುತ್ತಿದ್ದು ಅವುಗಳಿಗೆ ಪ್ರಾಣಿಬಲಿ ಕೊಡುವ ಸಂಪ್ರದಾಯವಿದೆ. ಅಲ್ಲಿನ ದೋಹಾ ಜನಾಂಗದವರು ಸರ್ಪವನ್ನು ತಮ್ಮ ಜನಾಂಗದ ಆದಿ ಪ್ರವರ್ತಕ ಎನ್ನುತ್ತಾರೆ. ಉತ್ತರ ಅಮೇರಿಕಾದ ಹೆಚ್ಚಿನ ಮೂಲ ನಿವಾಸಿಗಳು ಸರ್ಪ ಮಳೆ ನೀರಿನ ಅಧಿದೇವತೆಯೆಂದು ನಂಬಿ ಮಳೆ, ಬೆಳೆಗಾಗಿ ಸರ್ಪಪೂಜೆ ಮಾಡುತ್ತಾರೆ.

ದಕ್ಷಿಣ ಆಫ್ರಿಕಾದ ಅಮೆಜಾನ್ ನದಿ ಪ್ರದೇಶದ ಕಾಡುಗಳ ಆದಿವಾಸಿಗಳು ಹಾಗೂ ಇಂಕಾ (ಇನಕುಲ) ವಂಶದ ರಾಜರುಗಳು, ತಿತಿ ಕಾಕಾ ಆಸುಪಾಸಿನಲ್ಲಿರುವ ಅಹಿಮರಾ (ಅಯಿಮರ) ಜನಾಂಗದವರು. ವೆನಿಜುವೆಲಾದ ವರಾವ್ ಜನಾಂಗದವರು ಸರ್ಪಾರಾಧಕರು.

ವೆನಿಜುವೆಲಾದ 'ಮೆಕಿರಿತಾರೆ' ಎಂಬ ಆದಿವಾಸಿ ಜನಾಂಗದವರ ಐತಿಹ್ಯಗಳಲ್ಲಿ ಆಕಾಶ ಗಂಗಾ ರೂಪದ ಸರ್ಪಿಣಿಯು ತನ್ನ ಗರ್ಭ ಕೊಡದೊಳಗೆ ಎಲ್ಲಾ ರೀತಿಯ ಸಸ್ಯ, ಪ್ರಾಣಿ

ವರ್ಗದ ಬೀಜಗಳನ್ನು ಧರಿಸಿ ಭೂಮಿಗೆ ತಂದು ಇಲ್ಲಿಯ ಎಲ್ಲಾ ಉತ್ಪತ್ತಿಗೆ ಕಾರಣಳಾದ ಳೆಂದು ಹೇಳಲಾಗಿದೆ. ಆದುದರಿಂದ ಈಕೆಯನ್ನು 'ಪಚಮಾಮ' (ಮಹಾತಾಯಿ) ಎಂದು ಇಂದಿಗೂ ಪೂಜಿಸಲಾಗುತ್ತದೆ. ಅವರಲ್ಲಿ ಯಾವುದೇ ಶುಭಕಾರ್ಯದ ಸಂದರ್ಭದಲ್ಲಿ ಮೊದಲಿಗೆ ಪಚಮಾಮ ಪೂಜೆ ನಡೆಯುತ್ತದೆ.

ಆಫ್ರಿಕಾ ಖಂಡದ ಈಜಿಪ್ಟ್‌ನಲ್ಲಿ ನೈಲ್‌ನದಿದಡದ ಜಲಾಶ್ರಿತ ಪ್ರದೇಶಗಳಲ್ಲಿ ಸರ್ಪಾರಾಧನೆಯು ಬಹಳ ವಿಜೃಂಭಣೆಯಿಂದ ನಡೆಯುತ್ತಿದ್ದ ಕುರುಹುಗಳು ದೊರೆತಿವೆ. ಇಲ್ಲಿನ ರಾಜಕಿರೀಟದಲ್ಲಿ ಸರ್ಪ ಲಾಂಛನವಿದೆ. ದೇವಾಲಯಗಳ ವಾಸ್ತುಶಿಲ್ಪಗಳಲ್ಲಿ, ಸಭಾಗೃಹಗಳ ಭಿತ್ತಿಗಳಲ್ಲಿ ಸರ್ಪಕಲಾಕೃತಿಗಳ ವೈವಿಧ್ಯವನ್ನು ಕಾಣಬಹುದಾಗಿದೆ. ಭಾರತಕ್ಕಿಂತಲೂ ಹೆಚ್ಚಿನ ಸ್ಥಾನಮಾನ ನಾಗನಿಗೆ ಆಫ್ರಿಕಾ ಖಂಡದಲ್ಲಿ ದೊರೆತಿದೆ.

ಪರಮಾತ್ಮನು ಜೀವರಾಶಿಗಳಲ್ಲಿ ಮೊದಲು ಸರ್ಪವನ್ನೇ ಸೃಷ್ಟಿಸಿದ ಎಂಬ ಪುರಾಣ ಕತೆ ಅವರಲ್ಲಿದೆ. ಅಸಂಖ್ಯ ಜೀವರಾಶಿಗಳನ್ನು ಹುಟ್ಟಿಸಿದ ಮೇಲೆ ಆ ಭಾರದಿಂದ ಭೂಮಿತಾಯಿ ಕೆಳಕ್ಕುರುಳಿದಂತೆ ಸರ್ಪವನ್ನೇ ಸುರುಳಿಮಾಡಿ ನಿಲ್ಲಿಸಿ ಭೂಮಿಯನ್ನು ಹೊತ್ತು ಕೊಳ್ಳುವಂತೆ ಪರಮಾತ್ಮ ಸಂದೇಶ ನೀಡಿದ. ಸರ್ಪ ಈ ಭಾರ ಹೊರುತ್ತಿರುವಾಗ ಆಯಾಸ ಪರಿಹಾರಕ್ಕಾಗಿ ಹೆಗಲು ಬದಲಾಯಿಸಬೇಕಲ್ಲವೆ ಹಾಗೆ ಹೆಗಲು (ಹೆಡೆ) ಬದಲಾಯಿಸುವಾಗ ಭೂಮಿ ಅಲ್ಲಾಡಿ ಅದರಿಂದಾಗಿ ಭೂಕಂಪ, ಬಿರುಗಾಳಿ ಮುಂತಾದ ಪ್ರಾಕೃತಿಕ ಅವಘಡಗಳು ಸಂಭವಿಸುತ್ತವೆ ಎಂದಿದೆ.

ಸೃಷ್ಟಿಸಿದ ಗಂಡು-ಹೆಣ್ಣುಗಳಿಗೆ ಪ್ರಣಯದ ಕಲ್ಪನೆ ಇಲ್ಲದಿರುವಾಗ ಸಂತಾನಾಭಿವೃದ್ಧಿಯ ದೃಷ್ಟಿಯಿಂದ ಮನುಕುಲಕ್ಕೆ ಪ್ರಣಯದ ಪಾಠ ಕಲಿಸಿದ್ದೂ ಈ ನಾಗರಾಜನೇ. ಹೀಗೆ ಆಫ್ರಿಕಾದವರ ನಂಬಿಕೆಗಳು ಭಾರತದ ನಂಬಿಕೆಗಳಿಗೆ ಸಂವಾದಿಯಾಗಿ ಸರ್ಪನೇ ಸಂತಾನಕ್ಕೆ ಅಧಿದೇವತೆ ಎಂದಾಗಿದೆ. ಆದಿಮಾನವ ಮೊದಲು ಕುರುಡನಾಗಿದ್ದು ಸರ್ಪನೇ ಆತನಿಗೆ ದೃಷ್ಟಿಕೊಟ್ಟದ್ದು ಎಂಬ ನಂಬಿಕೆಯಿಂದಾಗಿ ದೃಷ್ಟಿದೋಷ ಪರಿಹಾರಕ್ಕೂ ಸರ್ಪಾರಾಧನೆಯೇ ಸಂಪ್ರದಾಯವಾಗಿ ಬೆಳೆದುಬಂತು. ಆಫ್ರಿಕಾದ ಕಲಾಕೃತಿಗಳಲ್ಲಿ ವೃತ್ತಾಕಾರದ ಸರ್ಪರೂಪ, ಬಾಲವನ್ನು ಬಾಯಿಯೊಳಗಿಟ್ಟುಕೊಂಡ ಸರ್ಪರೂಪ, ಮಿಲನದ ಸರ್ಪರೂಪಗಳು ಸಾಕಷ್ಟು ದೊರೆತಿವೆ.

ಆಫ್ರಿಕಾದವರು ನಾಗನನ್ನು ಹೆಬ್ಬಾವಿನ ರೂಪದಲ್ಲೂ ಸರ್ಪರೂಪದಲ್ಲೂ ಪೂಜಿಸುತ್ತಾರೆ. ಹಳ್ಳಿಗಳಲ್ಲಿ ಸಾಮಾನ್ಯವಾಗಿ ಬೋಬಾಟ್ ಎನ್ನುವ ವಿಶಾಲವಾದ ಮರ ದಡಿಯಲ್ಲಿ ನಾಗನ ಪ್ರತಿರೂಪವಾಗಿ ಗೂಟ ಬಡಿದು ಅದಕ್ಕೆ ಪೂಜೆ ಮಾಡುತ್ತಾರೆ. ಇಲ್ಲಿಯ ಸಂಪ್ರದಾಯದಂತೆ ಹಾವು ಕೊಲ್ಲುವುದು ಮಹಾಪಾಪ. ಸತ್ತ ಹಾವು ಸಿಕ್ಕಿದರೆ ನಮ್ಮಲ್ಲಿ ಮಾಡುವಂತೆ ಶವಸಂಸ್ಕಾರ ಮಾಡಿ ಪೂಜಿಸುತ್ತಾರೆ.

೧೬-೧೭ನೆಯ ಶತಮಾನಗಳಲ್ಲಿ ಯುರೋಪಿಯನ್ನರು ಅಲ್ಲಿಗೆ ಬಂದು ಬೀಡುಬಿಟ್ಟಾಗ ಅವರು ಸರ್ಪಗಳನ್ನು ಕೊಲ್ಲದಂತೆ ನೋಡಿಕೊಳ್ಳುತ್ತಿದ್ದರು. ಅಲ್ಲಿನ ರಾಜರುಗಳೊಡನೆ ಒಪ್ಪಂದ ಮಾಡಿಕೊಳ್ಳುವಾಗ ಬಿಳಿಯರು ಸರ್ಪವನ್ನು ಕೊಲ್ಲಬಾರದೆಂದೂ, ಮನೆಯೊಳಗೆ ಹಾವು ಬಂದರೆ ಸ್ಥಳೀಯ ಮುಖಂಡರನ್ನು ಕರೆಸಿ ಅದನ್ನು ಗೌರವ ಪೂರ್ವಕವಾಗಿ ಹೊರಗೆ ಕಳುಹಿಸಬೇಕೆಂದೂ ತಾಕೀತು ಮಾಡಿಸಿ ಕೊಳ್ಳುತ್ತಿದ್ದರು.

ಕುಟುಂಬದ ಹಿರಿಯ ನಾಗಪೂಜೆಗೆ ಹೊರಟಾಗ ಅವನ ಹಿಂದಿನಿಂದ ಕುಟುಂಬದ ಸದಸ್ಯರು ಚೆಂಡೆ ನಗಾರಿಗಳನ್ನು ಬಾರಿಸುತ್ತಾ ಕುಣಿಯುತ್ತಾ ಹೋಗುತ್ತಾರೆ. 'ಕಲಬಾಶ್' ಎಂಬ ಮರದ ಪಾತ್ರೆಯಲ್ಲಿ ಮೊಸರು, ಜೋಳದ ಹಿಟ್ಟು ಮುಂತಾದ ಸಾಮಗ್ರಿಗಳನ್ನು ಒಯ್ದು ನಾಗ ಮೂರ್ತಿಗಳಿಗೆ ಅಭಿಷೇಕ ಮಾಡುತ್ತಾರೆ. ಪ್ರಸಾದ ರೂಪದಲ್ಲಿ ಹಿಟ್ಟನ್ನು ಪಡೆದು ಒಬ್ಬರ ಮೇಲೊಬ್ಬರು ಎಸೆದುಕೊಳ್ಳುತ್ತಾರೆ. ಮದುವೆ ನಿಶ್ಚಯವಾಗುವ ಸಂದರ್ಭ ದಲ್ಲಿ ಪ್ರಾರ್ಥನೆ ಮಾಡಿ ಜೋಳದ ಹಿಟ್ಟಿನ ಪಿಂಡವನ್ನು ನಾಗಲಾಂಛನದ ಮುಂದಿಟ್ಟು ಬರುತ್ತಾರೆ. ಮರುದಿನ ಬಂದು ನೋಡಿದಾಗ ಅದು ಹಾಗೆಯೇ ಇದ್ದರೆ ಶುಭ, ಒಡೆದಿದ್ದರೆ ಅಶುಭ. ಮದುವೆ ನಿಂತು ಹೋಗುತ್ತದೆ.

ನಮ್ಮಲ್ಲಿಯೂ ಕೆಲವು ಹಿಂದೂ ಸಂಪ್ರದಾಯದ ಮದುವೆಗಳಲ್ಲಿ ಹಿಟ್ಟಿನ ನಾಗರೂಪದ ಪೂಜೆ ನಡೆಯುವುದನ್ನು ನಾವಿಲ್ಲಿ ಸ್ಮರಿಸಿಕೊಳ್ಳಬಹುದು. ಕೇರಳದ ಮಣ್ಣಾರ್ ಶಾಲೆಗಳಲ್ಲಿ ರುವಂತೆ ಆಫ್ರಿಕಾದ ಕೆಲವು ಸರ್ಪ ದೇವಾಲಯಗಳಲ್ಲಿ ಹೆಂಗಸರು ಪೂಜಾರಿಣಿಗಳಾಗಿ ಪೂಜೆ ಸಲ್ಲಿಸುತ್ತಾರೆ. ದೇವಾಲಯದಲ್ಲಿ ಯಾವ ಕನ್ಯೆಯ ಬಳಿ ಸರ್ಪ ಬರುವುದೊ ಆಕೆಯನ್ನು ನಾಗನ ಸೇವೆಗಾಗಿ ಒಪ್ಪಿಸುತ್ತಾರೆ ಆಕೆ ಪೂಜಾರಿಣಿಯಾಗುತ್ತಾಳೆ.

ಶ್ರೀಲಂಕಾ ದೇಶವು ಮೊದಲು ನಾಗ ವಂಶಜನ ನಾಡಾಗಿತ್ತೆಂದೂ, ಅಲ್ಲಿ ನಾಗಪೂಜೆ ನಡೆಯುತ್ತಿತ್ತೆಂದೂ ಬೌದ್ಧ ಪುರಾಣಗಳಲ್ಲಿ ಉಲ್ಲೇಖವಿದೆ. ಆಮೇಲೆ ಹೆಚ್ಚಿನವರು ಬೌದ್ಧ ಮತಕ್ಕೆ ಮತಾಂತರ ಹೊಂದಿದರೆಂದೂ, ಹಳ್ಳಿಯ ಜನರು ಹಾಗೂ ಮೂಲ ನಿವಾಸಿಗಳು ಹಾಗೆಯೇ ಉಳಿದರೆಂದೂ ತಿಳಿದು ಬರುತ್ತದೆ. ಅವರು ಈಗಲೂ ನಾಗಪೂಜೆ ಮಾಡುತ್ತಾರೆ. ಆಗ್ನೇಯ ಏಷ್ಯಾದ ರಾಷ್ಟ್ರಗಳಲ್ಲಿಯೂ ಭಾರತೀಯ ಸಂಪ್ರದಾಯದ ಹಲವಾರು ಆಚರಣೆ ಗಳು ಇಂದಿಗೂ ಜೀವಂತವಾಗಿದೆ.

ನಾಗಪೂಜೆ ಅಲ್ಲಿನ ದೊಡ್ಡ ಹಬ್ಬವಾಗಿದೆ. ಕಾಂಬೋಡಿಯಾದ ಸರ್ಪ ದೇವಾಲಯ ವಂತೂ ನಮ್ಮ ಕುಕ್ಕೆ ಸುಬ್ರಹ್ಮಣ್ಯ, ನಾಗರಕೊಯಿಲ್‌ಗಳಂತೆ ಪ್ರಸಿದ್ಧ ಯಾತ್ರಾಸ್ಥಳವಾಗಿದ್ದು ದೇವಾಲಯವೆಲ್ಲಾ ಸರ್ಪಾಕೃತಿಯ ಕಲಾಕೃತಿಗಳಿಂದ ತುಂಬಿ ಹೋಗಿದೆ. ಜಪಾನ್ ದೇಶದಲ್ಲಿ ನಾಗ ಸಮೃದ್ಧಿಗೆ ಅಧಿದೇವತೆ ಆತ ದೇವದೂತನೆನಿಸಿದ್ದಾನೆ. ಚೀನಾ ದೇಶದವರೂ ಸರ್ಪ ಮಳೆತರುವ ದೈವವೆಂದು ನಂಬುತ್ತಾರೆ.

ಹೀಗೆ ಸರ್ಪವನ್ನು ಒಂದಲ್ಲಾ ಒಂದು ರೀತಿಯಿಂದ ಗೌರವಿಸದ ದೇಶವಿಲ್ಲ. ಇತ್ತೀಚಿಗಿನ ಎರಡು ಸಾವಿರ ವರ್ಷಗಳಿಂದ ಶಿಷ್ಟ ಸಂಸ್ಕೃತಿಗಳೆನಿಸಿದ ಬೌದ್ಧ, ಕ್ರೈಸ್ತ, ಮುಸಲ್ಮಾನ ಮುಂತಾದ ಮತಗಳು ಪ್ರಚಾರಕ್ಕೆ ಬಂದ ಮೇಲೆ ಪ್ರಾಚೀನ ಸಂಪ್ರದಾಯಗಳಾದ ಪ್ರಕೃತಿ ಪೂಜೆ, ಪ್ರಾಣಿ ಪೂಜೆ, ಪಿತೃಪೂಜೆಗಳು ಸ್ವಲ್ಪ ಸ್ವಲ್ಪವೇ ನಶಿಸುತ್ತಾ ಹೋದರೂ ಅನೇಕ ಕಡೆಗಳಲ್ಲಿ, ಹಳ್ಳಿಗಳಲ್ಲಿ ಇವು ಇನ್ನೂ ಜೀವಂತವಾಗಿದೆ.

ಕೆಲವೆಡೆ ಹಳೆಯ ಸಂಪ್ರದಾಯಗಳು ಹೊಸ ರೂಪಗಳಲ್ಲಿ ವಿಜೃಂಭಣೆಯಿಂದ ನಡೆಯುತ್ತಿವೆ. ಭಾರತದ ಮೂಲ ಜನಾಂಗದವರು ಬೆಳೆಸಿಕೊಂಡು ಬಂದ ನಾಗಾರಾಧನೆಯ ಪ್ರಾಚೀನ ಪದ್ಧತಿ ಮುಂದಿನ ಶತಮಾನಗಳಲ್ಲಿ ವೈದಿಕ ಹಾಗೂ ಪೌರಾಣಿಕ ಸಂಪ್ರದಾಯಗಳೊಡನೆ ಬೆರೆತು ಹೊಸ ರೂಪವನ್ನು ಪಡೆದು ವೈಭವೋಪೇತ ಆಚರಣೆಯಾಗಿ ಇಂದಿಗೂ ಉಳಿದು ಬೆಳೆದು ಬಂದಿದೆ. ನಮ್ಮಲ್ಲಿ ನಾಗಶಿಲೆಗಳ ಪೂಜೆ, ನಾಗಮಂಡಲ ನರ್ತನ, ಆಶ್ಲೇಷಾ ಬಲಿ ಸೇವೆಗಳು ನಾಗಾರಾಧನೆಯ ಮುಖ್ಯ ಅಂಗಗಳಾಗಿವೆ. ಇವೆಲ್ಲವುಗಳ ಹಿಂದೆ ಲಲಿತಕಲೆಗಳ ಸಂಗಮವಿದೆ, ಚಿತ್ರಕಲೆಯ ಪ್ರಧಾನ ಅಂಶಗಳಿವೆ.

ವೇದಪೂರ್ವ ಸೈಂಧವ ಸಂಸ್ಕೃತಿಯಲ್ಲಿ ನಾಗಾರಾಧನೆ ಕಾಣಿಸಿಕೊಂಡಿದೆ. ಸಿಂಧೂ ಸಂಸ್ಕೃತಿಗಳಲ್ಲಿ ಒಂದಾದ ಗುಮ್ಲಾ ಸಂಸ್ಕೃತಿಯ ಜನರು (ಕ್ರಿ.ಪೂ.೩೫೦೦) ಸರ್ಪ ಪೂಜಕರಾಗಿದ್ದರೆಂದು ತಿಳಿದುಬಂದಿದೆ. ಅವರು ನಾಗರ ಹೆಡೆಯ ಆಕಾರವಿರುವ ಮಾತೃದೇವತೆಗಳ ಮಣ್ಣಿನ ಪ್ರತಿಮೆ ಗಳನ್ನು ಪೂಜಿಸುತ್ತಿದ್ದರು. ಭಾರತದಲ್ಲಿ ಆರ್ಯರ ಆಗಮನಕ್ಕೆ ಪೂರ್ವದಲ್ಲೇ ಸರ್ಪಾರಾಧನೆ ನೆಲೆಯಾಗಿತ್ತು. ಆರ್ಯರ ಅತಿಕ್ರಮಣಕ್ಕೆ ಒಳಗಾದ ಬುಡಕಟ್ಟು ಜನಾಂಗದವರು ಪೂರ್ವ ಭಾರತ ಮತ್ತು ದಕ್ಷಿಣ ಭಾರತಕ್ಕೆ ಪಲಾಯನ ಮಾಡಿದರು. ಆ ಪ್ರದೇಶಗಳಲ್ಲಿ ಸರ್ಪಾರಾಧನೆ ಮುಂದುವರಿಯಿತು.

ವಿದೇಶದ ಸುಮೇರಿಯನ್, ಅಸ್ಸಿರಿಯನ್, ಬ್ಯಾಬಿಲೋನಿಯನ್ ಮತ್ತು ಮೆಸಪಟೋಮಿಯನ್ ಸಂಸ್ಕೃತಿಗಳಲ್ಲಿ ಸರ್ಪ ವಿನ್ಯಾಸವು ಅಲ್ಲಿನ ದೇವತೆಗಳೊಂದಿಗೆ ಕಾಣಿಸಿಕೊಂಡಿದೆ. ದಕ್ಷಿಣ ಭಾರತದ ಸರ್ಪಾರಾಧನೆಯ ಸಂಸ್ಕೃತಿ ಹಾಗೂ ಸುಮೇರಿಯನ್ ಸಂಸ್ಕೃತಿ ಒಂದಕ್ಕೊಂದು ಸರಿಹೊಂದುತ್ತವೆ. ಪ್ರಾಚೀನ ಜೈನ ಶಿಲ್ಪಗಳಲ್ಲಿಯೂ ಸರ್ಪ ವಿನ್ಯಾಸವು ಕಾಣಿಸುತ್ತದೆ. ಬೌದ್ಧ ಶಿಲ್ಪಗಳಲ್ಲೂ ನಾಗನಿಗೆ ಸ್ಥಾನ ದೊರೆತಿದೆ. ಭಾರತದ ಪಶ್ಚಿಮ ಕರಾವಳಿಯ ಪ್ರದೇಶ ದಲ್ಲಂತೂ ನಾಗ ಆರಾಧ್ಯದೈವನಾಗಿದ್ದು ಅವನ ಆಚರಣೆಗಳು ಕಲಾತ್ಮಕವಾಗಿವೆ.

ಕರ್ನಾಟಕದ ಕರಾವಳಿ ತೀರವು ಹಿಂದೆ 'ನಾಗರಖಂಡ' ಎನ್ನುವ ಭೂಭಾಗವಾಗಿದ್ದು, ನಾಗಬ್ರಹ್ಮನನ್ನು ವಿವಿಧ ರೂಪಗಳಲ್ಲಿ ಕಡೆದ ಪ್ರತಿಮೆಗಳೂ ಕಂಡುಬರುತ್ತವೆ. ಕಾರ್ಕಳ ತಾಲೂಕು ಕೆಲ್ಲಪುತ್ತಿಗೆಯ ಸೂರ್ಯನಾರಾಯಣ ದೇವಾಲಯದಲ್ಲಿ ೧೫ನೆಯ ಶತಮಾನದ

ಪ್ರತಿಮೆಯಲ್ಲಿ ಸರ್ಪಗಳ ಹೆಡೆಗಳಿಂದ ಆವೃತನಾಗಿ ಕುಳಿತಿರುವ ಬ್ರಹ್ಮನ ಮಾನವಾಕಾರವಿದ್ದು ಕೈಯಲ್ಲಿ ದಂಡವಿದೆ. ಕಾರ್ಕಳ ತಾಲೂಕು ನಾರಾವಿಯ ಸೂರ್ಯನಾರಾಯಣ ದೇವಾಲಯದಲ್ಲಿ ಧ್ಯಾನ ಭಂಗಿಯಲ್ಲಿ ಕುಳಿತ ನಾಗಬ್ರಹ್ಮನ ಪ್ರತಿಮೆಯಿದೆ.

ಹಾಗೆಯೇ ಕಾರ್ಕಳ ತಾಲೂಕಿನ ಕಾರ್ಪೆಟ್ಟಿನ ಬ್ರಹ್ಮಸ್ಥಾನದಲ್ಲಿ (೧೫ನೆಯ ಶತಮಾನ) ಸೊಂಟದ ಕೆಳಗೆ ಸರ್ಪಾಕೃತಿ ಮೇಲ್ಭಾಗ ಮನುಷ್ಯಾಕೃತಿಯಿರುವ ವಿಗ್ರಹವಿದೆ. ಕೆಲವೆಡೆ ನಾಗಬ್ರಹ್ಮನನ್ನು ಹುತ್ತದ ರೂಪದಲ್ಲಿ, ಲಿಂಗದ ರೂಪದಲ್ಲಿ ಮರದ ಉರುವಿನ ರೂಪದಲ್ಲಿ ಪೂಜಿಸುತ್ತಾರೆ. (ಹಿರಿಯಡಕ, ಮಂದರ್ತಿ, ಮೊರಣಕಟ್ಟೆ, ಪೊಸರಾಲ್ ಮುಂತಾದೆಡೆ) ಆಲಡೆಗಳಲ್ಲಿ ಅಥವಾ ಆಗಮೋಕ್ತ ದೇವಾಲಯಗಳಾದ ಕ್ಷೇತ್ರಗಳಲ್ಲಿ ನಾಗಬ್ರಹ್ಮನಿಗೆ ಬ್ರಹ್ಮ ಮಂಡಲವೆಂಬ ತಾಂತ್ರಿಕ ನೃತ್ಯ ಆಚರಣೆಯ ವಿಧಿಯು ವೈದ್ಯರಿಂದ ಜರಗುತ್ತದೆ. ಇಲ್ಲಿ ನಾಗ ಎನ್ನುವ ಮೂಲ ನಿವಾಸಿಗಳು ವಾಸಿಸುತ್ತಿದ್ದರೆನ್ನುವ ಐತಿಹ್ಯವಿದೆ.

ನಾಗ ಅಥವಾ ಸರ್ಪ ಅವರ ದೇವರಾಗಿದ್ದರು. ಸರ್ಪವೇ ಅವರ ಲಾಂಛನವಾಗಿತ್ತು. ಕರಾವಳಿಯ ಖ್ಯಾತ ಪ್ರಾಚೀನ ಅರಸುಮನೆತನವಾದ 'ಆಳುಪ' ವಂಶಕ್ಕೆ ಆ ಹೆಸರು ಶೇಷನಾಗ (ಆಲುಕ)ನಿಂದಾಗಿಯೇ ಬಂದದ್ದು ಎನ್ನಲಾಗಿದೆ. ಆಳುಪ ದೊರೆಗಳ ಶಿಲಾಶಾಸನಗಳಲ್ಲಿಯೂ ಮೇಲ್ಗಡೆ ಸುರುಳಿ ಹಾಕಿ ಕೂತು ಹೆಡೆಯನ್ನು ಬಿಚ್ಚಿರುವ ಹಾವಿನ ನಕ್ಷೆಯಿದೆ.

ಇಲ್ಲಿ ಸರ್ಪನಿಗಾಗಿ ಕಟ್ಟಿದ ಬೃಹತ್ ಗಾತ್ರದ ದೇವಾಲಯಗಳು, ಕಾದಿರಿಸಿ ಬೆಳೆಸಿದ ವನಗಳು, (ಬನಗಳು) ಕಾಲಕಾಲಕ್ಕೆ ಸಲ್ಲಿಸುವ ಹರಕೆ ಕಾಣಿಕೆಗಳು, ನಡೆಸುವ ಆರಾಧನೆಗಳು ಬೇರೆ ಕಡೆ ಕಂಡುಬರುವುದಿಲ್ಲ. ಇದಕ್ಕೂ ಮಹತ್ವದ ಕಾರಣಗಳಿವೆ. ಈ ಪ್ರದೇಶ ಮೊದಲು ಸಮುದ್ರವೇ ಆಗಿತ್ತಂತೆ. ಪರಶುರಾಮನ ಕೊಡಲಿಯ ಬಡಿತಕ್ಕೆ ಸಮುದ್ರ ಹಿಂದೆ ಸರಿದರೂ ಸರ್ಪ ವರ್ಗದ ಜಂತುಗಳು ಇಲ್ಲೇ ಉಳಿದುಹೋಗಿವೆ. ಆದ್ದರಿಂದಲೇ ಈ ಪ್ರದೇಶವು 'ನಾಗಖಂಡ'ವೆಂದು ಹೆಸರು ಪಡೆದಿದೆ.

ಪರಶುರಾಮನು ಸಮುದ್ರದ ನೀರನ್ನು ಹಿಂದೆ ಸರಿಸಿ ಆ ಜಾಗವನ್ನು ಬಿಟ್ಟು ಕೊಡಲಿಲ್ಲವಂತೆ. ಅವುಗಳ ಪ್ರೀತಿಗಾಗಿ ನಾಗಪೂಜೆ ನಡೆಸುವ ಸಂಪ್ರದಾಯ ಬಂದ ಮೇಲೆ ಅವು ಶಾಂತಚಿತ್ತವಾಗಿ ಸಹಬಾಳ್ವೆ ನಡೆಸಲು ಅನುಮತಿ ನೀಡಿದವು ಎಂದು 'ಕೇರಳೋತ್ಪತ್ತಿ' ಗ್ರಂಥದಲ್ಲಿ ಹೇಳಿದೆ. ನಮ್ಮ ನಾಗಮಂಡಲದ ಹಾಡುಗಳಲ್ಲಿಯೂ ಇಂತಹ ವಿವರಣೆಯಿದೆ.

ಸರ್ಪ ತನ್ನ ಮರಿಮಕ್ಕಳೊಡನೆ ಪಾತಾಳದಿಂದ ಮೇಲಕ್ಕೆ ಬಂದು ಇಲ್ಲಿ ವಿಹರಿಸುತ್ತಿದ್ದಾಗ ಮಾನವರು ಅವುಗಳಿಗೆ ತೊಂದರೆ ಕೊಟ್ಟುದಕ್ಕಾಗಿ, ಅವು ಮಾನವರಿಗೆ ರೋಗರುಜಿನ, ಸಂತತಿ ಹಾನಿ ಮುಂತಾದ ದುರಿತಗಳನ್ನು ಕೊಟ್ಟುವಂತೆ. ಇದರಿಂದ ಬಳಲಿದ ಜನರು ಆಮೇಲೆ ನಾಗನಿಗೆ ತೊಂದರೆ ಕೊಡುವುದನ್ನು ನಿಲ್ಲಿಸಿ ನಾಗಪೂಜೆಯ ಸಂಪ್ರದಾಯ ಬೆಳೆಸಿಕೊಂಡು

ಬಂದಾಗ ಅವು ಸಂತುಷ್ಟವಾಗಿ ಜನ ಸಮುದಾಯಕ್ಕೆ ಬೇಕಾದ ವರಗಳನ್ನು ಅನುಗ್ರಹಿಸಿದುವಂತೆ. ಇದಕ್ಕನುಗುಣವಾಗಿ ಇಲ್ಲಿನ ಜನರು ಹಾವಿನ ಹುತ್ತಕ್ಕೆ, ಹಾವಿನ ಶಿಲೆಗಳಿಗೆ ಹಾಲೆರೆಯುತ್ತಾರೆ.

ದೃಷ್ಟಿ ದೋಷ ಚರ್ಮವ್ಯಾಧಿಗಳು ಬಂದಾಗ ಅಥವಾ ಸಂತಾನಾಭಿವೃದ್ಧಿಗಾಗಿ ಅರಳಿ ಮರದ ಕೆಳಗೆ ನಾಗಶಿಲೆಗಳನ್ನು ಪ್ರತಿಷ್ಠಾಪಿಸುತ್ತಾರೆ. ಮಕ್ಕಳು ಹೆದರಿಕೊಂಡಾಗ ನಾಗಬಂಧನ ಮಾಡಿಸುವುದು, ಸತ್ತ ಸರ್ಪವನ್ನು ಕಂಡಾಗ ವೈದಿಕ ಮಂತ್ರ ಪೂರ್ವಕ ಸಂಸ್ಕಾರ ಮಾಡಿ ಅಪರ ಕರ್ಮಗಳನ್ನು ನಡೆಸುತ್ತಾರೆ. ಕುಟುಂಬದ ತೊಂದರೆ ತಗಾದೆಗಳಿಗೆ ನಾಗದರ್ಶನ ಮಾಡಿಸಿ ಪರಿಹಾರ ಕಂಡುಕೊಳ್ಳುತ್ತಾರೆ. ಇವೆಲ್ಲಾ ಇಂದಿಗೂ ಕಂಡುಬರುವ ಸಾಮಾನ್ಯ ಸಂಗತಿಗಳಾಗಿವೆ.

ಕರಾವಳಿಯ ಉಪಾಸನಾ ಪಂಥಗಳ ಇತಿಹಾಸವನ್ನು ಗಮನಿಸುವಾಗ ಅವರೆಲ್ಲರ ಆದಿ ಮೂಲ ದೈವ ನಾಗನೇ ಆಗಿರುವುದು ತಿಳಿದುಬರುತ್ತದೆ. ಎಲ್ಲಾ ವರ್ಗದ ಜನರು ನಾಗನನ್ನು ಬೇರೆ ಬೇರೆ ರೂಪಗಳಲ್ಲಿ ಭಿನ್ನ ಭಿನ್ನ ಪ್ರಕ್ರಿಯೆಗಳಿಂದ ಆರಾಧಿಸುತ್ತಾರೆ. ನಾಗ ಇತರ ದೇವತೆಗಳೊಂದಿಗೆ ಸಮಾವೇಶಗೊಂಡು ಸಂಕೀರ್ಣ ರೂಪದಲ್ಲಿಯೂ ಆರಾಧನೆಗೊಳ್ಳುತ್ತಾನೆ. ಉದಾಹರಣೆಗೆ ತುಳುವರ ಆದಿಮೂಲ ಸಂಕೀರ್ಣ ದೇವಸ್ಥಾನವಾದ 'ಆಲಡೆ'ಯಲ್ಲಿ ನಾಗನು ಇತರ ದೇವತೆಗಳೊಂದಿಗೆ ಪೂಜೆಗೊಳ್ಳುತ್ತಾನೆ. ಮತ್ತು ಆತನೇ ಪ್ರಧಾನವಾಗಿರುತ್ತಾನೆ. ಆಲಡೆಯಲ್ಲಿ ನಾಗ, ಬ್ರಹ್ಮ, ಲೆಕ್ಕೆಸಿರಿ (ರಕ್ತೇಶ್ವರಿ) ನಂದಿಗೋಣ ಮತ್ತು ಕ್ಷೇತ್ರಪಾಲ ಎಂಬ ಪಂಚ ದೈವಗಳು ಪೂಜೆಗೊಳ್ಳುವ ಪ್ರಾಕೃತಿಕ ತಾಣವಾಗಿರುತ್ತವೆ.

## ನಾಗವನ

ಇದು ರೂಢಿಯಲ್ಲಿ ನಾಗಬನ ಎಂದಾಗಿದೆ. ಈಗ ನಾಗವನಗಳಿಗೆ ಆಧುನಿಕತೆಯ ರೂಪವಿರುವುದಾದರೂ ಪ್ರಾಚೀನ ಕಾಲದಿಂದಲೂ ಇವು ಬೆಟ್ಟ, ಗುಡ್ಡ, ನೀರು, ದೈತ್ಯ ಗಾತ್ರದ ಮರಗಳು, ವಿಧವಿಧ ಬಳ್ಳಿಗಳೊಂದಿಗೆ ಕೂಡಿಕೊಂಡಿರುವ ಪ್ರಾಕೃತಿಕ ಗೊಂಚಲಾಗಿದೆ. ಹಾವಿಗೂ ಗಿಡಮರಗಳಿಗೂ ಇರುವ ಅವಿನಾಭಾವ ಸಂಬಂಧವನ್ನು ನಾವು ನಾಗವನದಲ್ಲಿ ಕಾಣಬಹುದು.

ಮರದ ಕೊಂಬೆಗಳು, ಬೇರುಗಳು, ಬಳ್ಳಿಗಳು ಹಾವು ಹರಿದಂತೆ ಹರಡಿಕೊಳ್ಳು ವುದು, ಹೂವು ಮೊಗ್ಗುಗಳು ನಾಗನ ಹೆಡೆಯನ್ನು ಹೋಲುವುದು ಸಾದೃಶ್ಯ ಸಂಬಂಧವನ್ನು ಉಂಟು ಮಾಡಿವೆ. ಹಾವಿನ ಹುತ್ತವು ಬೆಟ್ಟಗುಡ್ಡಗಳ ರಚನೆಯನ್ನು ಹೋಲುತ್ತದೆ. ಬೆಟ್ಟ ಗುಡ್ಡಗಳ ಪೂಜೆಗೂ ನಾಗಾರಾಧನೆಗೂ ಇರುವ ನಂಟು ಇಲ್ಲಿ ತೋರಿಬರುತ್ತದೆ.

ಹೀಗೆ ನಾಗ ಪೂಜೆಯು ಪ್ರಕೃತಿ ಪೂಜೆಯಾಗಿದೆ. ನಾಗವನದೊಳಗಿರುವ ನಾಗಶಿಲ್ಪಗಳು ಶಿಲ್ಪಕಲೆಯ ಚಮತ್ಕಾರವನ್ನು ಸಾರುತ್ತವೆ. ಹೆಡೆಯೆತ್ತಿ ಕುಳಿತಿರುವ ನಾಗಶಿಲ್ಪಗಳ ರಚನೆ

ಯಲ್ಲಿಯೂ ಶಿಲ್ಪಿಗಳು ಕೌಶಲ್ಯವನ್ನು ತೋರಿಸಿರುತ್ತಾರೆ. ಮರಿಗಳೊಂದಿಗೆ ನಾಗ, ಸುತ್ತು ಹಾಕಿ ಕುಳಿತಿರುವ ನಾಗ, ಪವಿತ್ರ ಗಂಟಿನ ರೂಪದಲ್ಲಿರುವ ನಾಗ, ಮಣಿ ಹೊತ್ತಿರುವ ನಾಗ, ನಾಗ-ಯಕ್ಷಿ, ಆದಿಶೇಷ, ಸುಬ್ರಹ್ಮಣ್ಯ, ತಂಬೂರಿನಾಗ ಇತ್ಯಾದಿ ಚಿತ್ರಗಳಿರುವ ಕಲ್ಲಿನ ನಾಗಶಿಲೆಗಳು ಆಕರ್ಷಕವಾಗಿರುತ್ತವೆ.

ಉಡುಪಿ ಜಿಲ್ಲೆಯ ಕಾರ್ಕಳ ತಾಲೂಕಿನಲ್ಲಿ ನಾಗಶಿಲೆಗಳನ್ನು ನಿರ್ಮಿಸಿ ಕೊಡುವ ಹಲವಾರು ಶಿಲ್ಪಕಲಾ ಕೇಂದ್ರಗಳಿವೆ. ಪುರಾತನ ಕಾಲದಲ್ಲಿ ನಾಗಶಿಲೆಗಳನ್ನು ಮುರಕಲ್ಲಿನಲ್ಲಿ (ಮಣ್ಣಿನ ಕಲ್ಲು) ಕೆತ್ತುತ್ತಿದ್ದರು. ನಾಗವನಗಳನ್ನು ಉತ್ಖನನ ಮಾಡುವಾಗ ಅವು ದೊರೆಯುತ್ತವೆ.

ಜನಪದರು ನಾಗನಿಗೆ ವಿಶೇಷ ಸ್ಥಾನವನ್ನು ಕೊಟ್ಟಿದ್ದಾರೆ. ದಕ್ಷಿಣ ಕನ್ನಡ, ಉಡುಪಿ ಜಿಲ್ಲೆಗಳಲ್ಲಿ ನಾಗಾರಾಧನೆಯ ಜೊತೆಗೆ ಸಮಾನ ನೆಲೆಯಲ್ಲಿ ಸುಬ್ರಹ್ಮಣ್ಯಾರಾಧನೆಯೂ ನಡೆದುಕೊಂಡು ಬಂದಿರುತ್ತದೆ. ನಾಗ ಮತ್ತು ಸ್ಕಂದ (ಸುಬ್ರಹ್ಮಣ್ಯರು) ಕರಾವಳಿ ಜಿಲ್ಲೆಗಳಲ್ಲಿ ಯಾವ ಕಾಲದಿಂದ ಅಭಿನ್ನರಾದರೆಂದು ಹೇಳಬರುವುದಿಲ್ಲ.

ಕ್ರಿ.ಶ.೧೬೫೦ರ ಕಾಲದ ಯಕ್ಷಗಾನ 'ಸಭಾಲಕ್ಷಣ'ದಲ್ಲಿ ಗಣಪತಿ ಸ್ತುತಿಯಾದ ಬಳಿಕ 'ಮಂಡಲ ನಾಯಕ ಸುಬ್ಬರಾಯನಿಗೆ' ವಂದನೆ ಸಲ್ಲಿಸಲಾಗುತ್ತದೆ. ಆ ಕಾಲಕ್ಕೆ ನಾಗ ಹಾಗೂ ಸುಬ್ರಹ್ಮಣ್ಯರಲ್ಲಿ ವ್ಯತ್ಯಾಸವಿರಲಿಲ್ಲ ಎನ್ನುವುದು ಸ್ಪಷ್ಟವಾಗುತ್ತದೆ.

ಸ್ಕಂದ ಪುರಾಣದಲ್ಲಿ 'ಗರುಡನ ಭೀತಿಯಿಂದ ಗುಹೆಯನ್ನು ಹೊಕ್ಕು ಅಡಗಿಕೊಂಡಿದ್ದ ವಾಸುಕಿಯು ಕಶ್ಯಪರ ಸೂಚನೆಯಂತೆ ತಾರಕನನ್ನೂ ನಿಗ್ರಹಿಸಿದ ಸುಬ್ರಹ್ಮಣ್ಯನನ್ನು ಶರಣು ಹೋಗುತ್ತಾನೆ. ಆಗ ಅಭಯ ನೀಡಿದ ಷಣ್ಮುಖಸ್ವಾಮಿಯು "ನಿನ್ನಲ್ಲಿ ಇನ್ನು ಮುಂದಕ್ಕೆ ಒಂದಂಶವಾಗಿ ನಾನು ಆವಾಸವಾಗುತ್ತೇನೆ" ಎನ್ನುತ್ತಾನೆ. ಅಂದಿನಿಂದ ನಾಗ ಸುಬ್ರಹ್ಮಣ್ಯರ ಭೇದ ಅಳಿಯಿತು. ನಾಗಗಳ ಆರಾಧನೆಯಲ್ಲಿ ಸುಬ್ರಹ್ಮಣ್ಯನನ್ನೂ, ಸುಬ್ರಹ್ಮಣ್ಯನ ಪೂಜೆಯಲ್ಲಿ ಸರ್ಪವನ್ನೂ ಸ್ತೋತ್ರ ಮಾಡುವ ಪದ್ಧತಿಯು ಪ್ರಚಾರಕ್ಕೆ ಬಂದಿತು.

ಸುಬ್ರಹ್ಮಣ್ಯನಿಗೆ ಸ್ಕಂದ, ಕುಮಾರ, ಮಹಾಸೇನ, ಷಣ್ಮುಖ, ಶಿಖಿ ದೇವರ ದೇವಾಲಯಗಳಿಗೆ ಸರ್ಪ ಶಿಲ್ಪ ವಿನ್ಯಾಸದ  ಅಲಂಕಾರವಿರುತ್ತದೆ. ದಕ್ಷಿಣ ಕನ್ನಡದ ಕುಕ್ಕೆ ಸುಬ್ರಹ್ಮಣ್ಯ ಕ್ಷೇತ್ರವು ಕರಾವಳಿಯ ಪ್ರಸಿದ್ಧ ಆರಾಧನಾ ಕೇಂದ್ರವಾಗಿದ್ದು ಕ್ರಿ.ಶ.೮ನೇ ಶತಮಾನದ ಚರಿತ್ರೆಯನ್ನು ಹೊಂದಿದೆ. ಪುತ್ತೂರು ತಾಲೂಕಿನ ಬಂಟ್ರ ಶಾಸನದಲ್ಲಿ 'ಕುಕ್ಕೆ' ಪಟ್ಟಣ ಹಾಗೂ ಅಲ್ಲಿನ ದೇವರ ಪ್ರಸ್ತಾಪ ಬರುತ್ತದೆ. 'ಕುಕ್ಕೆ' ಪದಕ್ಕೆ ಜಿಲ್ಲೆಯ ಹರಿಜನರ ತುಳು ಭಾಷೆಯಲ್ಲಿ ಮಗು, ಮಗ, ಕುಮಾರ ಎನ್ನುವ ಅರ್ಥವಿದೆ.

ಅಚ್ಚ ತುಳು ಭಾಷೆಯಲ್ಲಿ 'ಕುಕ್ಕೆ ಸುಬ್ರಾಯ ದೇವೆರ್' ಎಂದಾಗುತ್ತದೆ. ಶ್ರೀ ಸುಬ್ರಹ್ಮಣ್ಯ ಕ್ಷೇತ್ರದಲ್ಲಿ ಮೂಲಸ್ಥಾನ ದೇವತೆಯು ನಾಗನಾಗಿದ್ದು ಅಲ್ಲಿ ಹುತ್ತವನ್ನೇ

ಆರಾಧಿಸಲಾಗುತ್ತದೆ. ಕುಕ್ಕೆ ಎಂದರೆ 'ಕಂದ' ಎಂಬರ್ಥವೂ ಇದೆ. ಕಂದ ಎನ್ನುವುದು ಸ್ಕಂದವಾಗಿದೆ. ಸ್ಕಂದಾರಾಧನೆಯ ಇನ್ನೊಂದು ಪ್ರಸಿದ್ಧ ಕ್ಷೇತ್ರ ಇದೇ ಹೆಸರಿನಿಂದ ಕಂದಾವರ ಎಂದೆನಿಸಿದ್ದು ಕುಂದಾಪುರ ತಾಲೂಕಿನಲ್ಲಿದೆ. ಉಡುಪ ಎಂಬ ಬ್ರಾಹ್ಮಣ ಜನಾಂಗದವರು ಇಲ್ಲಿ ಸ್ಕಂದಾರಾಧನೆ ನಡೆಸಿ ಕೊಂಡು ಬರುತ್ತಿದ್ದಾರೆ. ಉಡುಪು ಎಂಬ ಪದಕ್ಕೆ ಸರ್ಪ ಎಂಬ ಅರ್ಥವೂ ಇದೆ.

ವೈಧಿಕ ಸಂಸ್ಕೃತಿಯು ಈ ತುಳುನಾಡಿನಲ್ಲಿ ಪಸರಿಸುವ ಮೊದಲು ಇಲ್ಲಿದ್ದ ಮೂಲ ನಿವಾಸಿಗಳು ಭೂತ ಮತ್ತು ನಾಗಗಳನ್ನು ಪೂಜಿಸುತ್ತಿದ್ದರು. ಕ್ರಿ.ಶಕದ ಪ್ರಾರಂಭದಲ್ಲಿ ತಮಿಳರು ಈ ಪ್ರದೇಶದ ಮೇಲೆ ತಮ್ಮ ಅರಸೊತ್ತಿಗೆಯನ್ನು ಹೊಂದಿದುದರಿಂದ ಮುರುಗನ (ಸುಬ್ರಹ್ಮಣ್ಯನ) ಆರಾಧನೆ ಇಲ್ಲಿ ಪ್ರಾರಂಭವಾಗಿರಬೇಕು.

ಸುಬ್ರಹ್ಮಣ್ಯನು ಬಾಲಕನಾಗಿದ್ದಾಗಲೇ ಅತ್ಯದ್ಭುತ ಸಾಹಸವನ್ನು ತೋರಿದ್ದ, ತಾರ ಕಾಸುರನೇ ಮೊದಲಾದ ರಕ್ಕಸರನ್ನು ಸಂಹಾರ ಮಾಡಿದ್ದ. ತಾರಕಾಸುರನ ತಮ್ಮ ಶೂರ ಪದ್ಮನನ್ನು ಕೊಂದು ಅವನ ದೇಹವನ್ನು ಇಬ್ಭಾಗವಾಗಿಸಿದಾಗ ಒಂದು ಭಾಗ ನವಿಲಾಗಿಯೂ ಇನ್ನೊಂದು ಭಾಗ ಕೋಳಿಯಾಗಿಯೂ ಕಾಣಿಸಿಕೊಂಡವು. ನವಿಲನ್ನು ತನ್ನ ವಾಹನವಾಗಿಯೂ ಕೋಳಿಯನ್ನು ತನ್ನ ಧ್ವಜವನ್ನಾಗಿಯೂ ಸುಬ್ರಹ್ಮಣ್ಯ ಮಾಡಿಕೊಳ್ಳುತ್ತಾನೆ.

ಹೀಗಾಗಿ ಸುಬ್ರಹ್ಮಣ್ಯ ದೇವಾಲಯಗಳಲ್ಲಿನ ಸುಬ್ರಹ್ಮಣ್ಯ ವಿಗ್ರಹಗಳಲ್ಲಿ ವಾಹನವಾಗಿ ನವಿಲನ್ನು ಧ್ವಜ ಚಿಹ್ನೆಯಾಗಿ 'ಕುಕ್ಕುಟ'ವನ್ನು ಕೆತ್ತಲಾಗಿರುವುದನ್ನು ನಾವು ಗಮನಿಸ ಬಹುದು. ಮಕ್ಕಳನ್ನು ಬಯಸುವವರು ಸೂಕ್ಷ್ಮಮತಿಗಳಾದ, ಚತುರರಾದ, ಸಾಹಸಿಗಳಾದ ಮಕ್ಕಳನ್ನೇ ಬಯಸುವುದರಿಂದ ಇಂಥಕಲ್ಪನೆಗೆ ಕುಮಾರನ ಕತೆ ಪ್ರೇರಣೆ ನೀಡಿದೆ. ಹಾಗಾಗಿ ಉತ್ತಮ ಸಂತಾನ ಪ್ರಾಪ್ತಿಗಾಗಿ ನಾಗನ-ಸ್ಕಂದನ ಆರಾಧನೆ ಮಾಡುತ್ತಾರೆ. ಇಲ್ಲಿ ನಾಗನೆಂದರೆ ಸುಬ್ರಹ್ಮಣ್ಯ, ಸುಬ್ರಹ್ಮಣ್ಯನೆಂದರೆ ನಾಗನೆನಿಸಿದ್ದಾನೆ. ನಾಗ ಸುಬ್ರಹ್ಮಣ್ಯರ ಅಭೇದಕ್ಕೆ ಕುಕ್ಕೆ ಸುಬ್ರಹ್ಮಣ್ಯ ಕ್ಷೇತ್ರದಲ್ಲಿರುವ ದೇವರ ವಿಗ್ರಹವೇ ಉತ್ತಮ ಉದಾಹರಣೆಯಾಗಿದೆ.

ಇಲ್ಲಿ ಹುತ್ತದ ರೂಪದಲ್ಲಿ ಆದಿ ಸುಬ್ರಹ್ಮಣ್ಯನನ್ನು ಪೂಜಿಸಲಾಗುತ್ತದೆ. ಈ ಕ್ಷೇತ್ರದ ಗರ್ಭಗೃಹದಲ್ಲಿ ಮೇಲ್ಗಡೆಯ ಮೂರ್ತಿ ಮಯೂರವಾಹನನಾದ ಷಣ್ಮುಖ ಮಧ್ಯಭಾಗ ದಲ್ಲಿರುವುದು ವಾಸುಕಿ ವಿಗ್ರಹ. ಕೆಳಗಡೆ ಶೇಷದೇವರ ವಿಗ್ರಹ. ಕುಕ್ಕೆ ಹೆಸರಿಗೆ ನಿಷ್ಪತ್ತಿಯಾಗಿ ಕುಮಾರ ಅಥ-ದ ಜೊತೆಗೆ ಸುಬ್ರಹ್ಮಣ್ಯನು ಕುಕ್ಕುಟ ಧ್ವಜನಾದುದರಿಂದ ಕುಕ್ಕೆ ಎಂತಲೂ, ಸಂಸ್ಕೃತದ 'ಕುಕ್ಷಿ' ಎಂಬುದು ಕುಕ್ಕೆ ಅಂದರೆ 'ಗುಹೆ' ಎಂದೂ ತಿಳಿಸಿದ್ದಾರೆ. ಗುಹೆಗಳಲ್ಲಿ ಲಿಂಗವಿದ್ದುದರಿಂದ ಕುಕ್ಕೆಲಿಂಗ ಎಂತಲೂ (ಕುಕ್ಕೆ ಅಂದರೆ ಬುಟ್ಟಿ) ಹೇಳುತ್ತಾರೆ.

ನಾಥ ಪಂಥದ ಸಿದ್ಧಿ ಪುರುಷರು ನಾಗಬ್ರಹ್ಮನ ಲಿಂಗಗಳನ್ನು ಬುಟ್ಟಿಯಲ್ಲಿಟ್ಟು ಇಲ್ಲಿ ಪೂಜಿಸುತ್ತಿದ್ದರು ಎಂದಿದೆ. ಸುಬ್ರಹ್ಮಣ್ಯ ಕ್ಷೇತ್ರಕ್ಕೂ ಬೆಳ್ತಂಗಡಿಯ ಬಳ್ಳಮಂಜ ಕ್ಷೇತ್ರಕ್ಕೂ, ಮಂಗಳೂರಿನ ಕುಡುಪು ಕ್ಷೇತ್ರಕ್ಕೂ ಸಂಬಂಧ ಕಲ್ಪಿಸಲಾಗಿದೆ.

ಕುಕ್ಕೆ ಸುಬ್ರಹ್ಮಣ್ಯ ದೇವರಿಗೆ ಬಳ್ಳಮಂಜದ ಅನಂತೇಶ್ವರ ದೇವರು 'ಅಣ್ಣ'ನಂತೆ ಬಳ್ಳ ಮಂಜದ ದೇವರು ಅನಂತಸ್ವಾಮಿಯಾದರೂ ಈ ಕ್ಷೇತ್ರವು ಸುಬ್ರಹ್ಮಣ್ಯ ಕ್ಷೇತ್ರವೆಂದೇ ಪ್ರಸಿದ್ಧಿ. ಕುಕ್ಕೆ ಸುಬ್ರಹ್ಮಣ್ಯ ಕ್ಷೇತ್ರಕ್ಕೆ ಹೇಳಿಕೊಂಡ ಹರಕೆಗಳನ್ನು ಬಳ್ಳಮಂಜಕ್ಕೆ ಸಲ್ಲಿಸಿದರೆ ಸಲ್ಲುತ್ತದೆ ಎಂಬ ನಂಬಿಕೆ ಭಕ್ತರಲ್ಲಿದೆ. ಬಳ್ಳಮಂಜದೇವರ ವಿಗ್ರಹದಲ್ಲಿ ಮೇಲ್ಭಾಗ ಮಾನವ ರೂಪವಿದ್ದು ಕೆಳಭಾಗ ಸರ್ಪರೂಪಿಯಾಗಿದೆ. ಈ ದೇವರು ಮಂಗಳೂರು ಕುಡುಪು ಕ್ಷೇತ್ರ ದಿಂದ ಬಳ್ಳಮಂಜಕ್ಕೆ ಆಗಮಿಸಿ ನೆಲೆಸಿದರೆಂಬ ಐತಿಹ್ಯವಿದೆ.

ಮಂಗಳೂರಿನ ಕುಡುಪು ಅನಂತ ಪದ್ಮನಾಭ ದೇವಾಲಯವು ಪ್ರಸಿದ್ಧ ನಾಗಾರಾಧನಾ ಕ್ಷೇತ್ರವಾಗಿದೆ. ಇಲ್ಲಿ ಹುತ್ತವನ್ನೇ ಪ್ರಧಾನವಾಗಿ ಪೂಜಿಸಲಾಗುತ್ತಿದೆ. ದೇವಾಲಯದೊಳಗೆ ಶಂಖಚಕ್ರಧಾರಿ ಅನಂತ ಪದ್ಮ ನಾಭನ ಪ್ರತಿಮೆ ಪೂಜೆಗೊಳ್ಳುತ್ತದೆ. ಉಡುಪಿ ಸಮೀಪದ ಮುಚ್ಚಿಲಕೋಡು ಎಂಬಲ್ಲಿಯೂ ಇಂತಹುದೇ ಆರಾಧನೆಯಿದೆ.

ಇಲ್ಲಿನ ಬಲಿದೇವತೆ ಸುರುಳಿ ಸುತ್ತಿಕೊಂಡಿರುವ ನಾಗರೂಪದಲ್ಲಿದೆ. ಉಡುಪಿ ತಾಲೂಕಿನ ಸೂಡ ಕ್ಷೇತ್ರದಲ್ಲಿ ಕೈಯಲ್ಲಿ ಮೂರು ಹೆಡೆಯ ಸರ್ಪವನ್ನು ಧರಿಸಿರುವ ಸುಬ್ರಹ್ಮಣ್ಯ ವಿಗ್ರಹವಿದ್ದು ಇದೊಂದು ಪ್ರಸಿದ್ಧ ಸುಬ್ರಹ್ಮಣ್ಯ ಕ್ಷೇತ್ರವಾಗಿದೆ. ಇಲ್ಲಿಯೂ ಹುತ್ತದ ಮೃತ್ತಿಕೆಯನ್ನೇ ಪ್ರಸಾದ ರೂಪದಲ್ಲಿ ನೀಡಲಾಗುತ್ತದೆ.

ಉಡುಪಿ ತಾಲೂಕಿನ ಸಾಂತೂರು (ಶಾಂತಪುರ) ಎಂಬಲ್ಲಿನ ಷಣ್ಮುಖ ವಿಗ್ರಹ ಅತಿ ಪ್ರಾಚೀನದ್ದೆಂದು ವಿದ್ವಾಂಸರು ಗುರುತಿಸಿದ್ದಾರೆ. ಹಾಗೂ ಇದು ಫಲಿಮಾರಿನ ಫಲಿಮಾರು ಮಠದ ಸಂಬಂಧವನ್ನು ಹೊಂದಿದೆ. ಕುಂದಾಪುರ ತಾಲೂಕಿನ ಕಾರ್ತಿಕೇಯ ಸುಬ್ರಹ್ಮಣ್ಯ ದೇವಾಲಯದ ಧ್ವಜ ಸ್ತಂಭದ ಮೇಲ್ಗಡೆ ಕೋಳಿಯ ರೂಪವಿದ್ದು ವಿಜಯನಗರ ಅರಸರಿಂದ ಉಂಬಳಿ ಪಡೆದ ದೇವಾಲಯವಿದೆಂದು ತಿಳಿದು ಬರುತ್ತದೆ.

ಇಲ್ಲಿನ ಮೂಲವಿಗ್ರಹ ಸುಬ್ರಹ್ಮಣ್ಯ ಮೂರ್ತಿ ಮೂರೂವರೆ ಅಡಿಯ ಸಮಭಂಗಿಯಲ್ಲಿ ಆಕರ್ಷಕವಾಗಿದೆ. ಇಲ್ಲಿ ಮಾರ್ಗಶಿರ ಮಾಸದ ಶುದ್ಧ ಷಷ್ಠಿಯಂದು ರಾತ್ರಿ ನಾಗನಿಗೆ ವಿಶೇಷ ವೆನಿಸಿದ ನಾಗಮಂಡಲ ನೃತ್ಯಾಚರಣೆಯ ಸೇವೆಯು ಜರಗುತ್ತದೆ. ಕುಂದಾಪುರದ ಕಾಳಾವರದ ಸುಬ್ರಹ್ಮಣ್ಯ ಕ್ಷೇತ್ರವೂ ಪ್ರಸಿದ್ಧವಾದದ್ದು.

ಕಾಳಾವರ ಷಷ್ಠಿ ಹಬ್ಬ ವಿಶೇಷವಾಗಿದ್ದು ಕುಂದಾಪುರ ಕನ್ನಡದ ಜನಪದ ತ್ರಿಪದಿಗಳಲ್ಲಿ ಸಿಗುತ್ತದೆ. ಕುಂದಾಪುರ ತಾಲೂಕಿನ ಸಿದ್ಧಾಪುರದ ಶ್ರೀನಾಗದೇವಾಲಯದಲ್ಲಿ ಆರು ಅಡಿಯ

ಏಳು ಹೆಡೆಯ ಭವ್ಯ ನಾಗಶಿಲ್ಪವಿದೆ. ಕಾರ್ಕಳ ತಾಲೂಕಿನ ಕಡಂದಲೆಯಲ್ಲಿಯೂ ಸುಬ್ರಹ್ಮಣ್ಯ ದೇವಾಲಯವಿದೆ. ಮಾರ್ಗಶಿರ ಶುದ್ಧ ಷಷ್ಠಿಯಂದು ಈ ಎಲ್ಲಾ ದೇವಾಲಯ ಗಳಲ್ಲಿ ವಿಶೇಷ ಪೂಜೆಗಳು ನಡೆಯುತ್ತವೆ. ಕೆಲವೆಡೆ ರಥೋತ್ಸವ, ಪಲ್ಲಕಿ ಉತ್ಸವ, ಇತರ ವಿಶೇಷ ಉತ್ಸವಗಳು ನಡೆದು ಅನ್ನ ಸಂತರ್ಪಣೆ ಜರಗುತ್ತದೆ.

ಊಟದ ಎಂಜೆಲೆಲೆಗಳ ಮೇಲೆ 'ಮಡೆಸ್ನಾನ'ವೆಂಬ ಉರುಳು ಸೇವೆಯನ್ನು ಭಕ್ತಾಧಿಗಳು ನಡೆಸುತ್ತಾರೆ. ಬಳ್ಳ ಮಂಜದಲ್ಲಿ ಬರಿ ನೆಲದಲ್ಲಿ ಊಟ ಮಾಡುವಂತಹ ಸೇವೆ ನಡೆಯುತ್ತದೆ. ಎಲ್ಲಾ ದೇವಾಲಯಗಳಲ್ಲಿ ಹುತ್ತದ ಮೃತ್ತಿಕೆ ಪ್ರಸಾದಕ್ಕೆ ಪ್ರಾಶಸ್ತ್ಯವಿದೆ. ನಾಗರಪಂಚಮಿ, ಚಂಪಾಷಷ್ಠಿಗಳಂದು ಈ ದೇವಾಲಯಗಳಲ್ಲಿ ವಿಶೇಷ ಅಭಿಷೇಕ, ಪೂಜೆಗಳು ನಡೆಯುತ್ತವೆ. ಕೆಲವು ದೇವಾಲಯಗಳಲ್ಲಿ ಪ್ರಧಾನ ದೇವರು ಬೇರೆಯಿದ್ದು ಉಪದೇವರಾಗಿ ಸುಬ್ರಹ್ಮಣ್ಯ ಪೂಜೆಗೊಳ್ಳುತ್ತಾನೆ. ಸಾಮಾನ್ಯವಾಗಿ ಎಲ್ಲಾ ದೇವಾಲಯಗಳಲ್ಲೂ ನಾಗರಗುಡಿ ಅಥವಾ ನಾಗನಕಟ್ಟೆಯಿದ್ದು ಅಲ್ಲಿ ಪೂಜೆಗಳು ನಡೆಯುತ್ತಿರುತ್ತವೆ.

ಸಂಶೋಧಕ ಡಾ.ವಿ.ಗುರುರಾಜ ಭಟ್ಟರು ಜಿಲ್ಲೆಯ ಸುಬ್ರಹ್ಮಣ್ಯ ದೇವಾಲಯದ ವಿಗ್ರಹ ಗಳನ್ನು, ನಾಗಶಿಲೆಗಳನ್ನು ಪರಿಶೀಲಿಸಿ ಅವುಗಳ ಪ್ರಾಚೀನತೆಯನ್ನು ಕಂಡುಹಿಡಿದಿದ್ದಾರೆ. ಉಡುಪಿ ತಾಲೂಕಿನ ಸಾಂತೂರಿನ ಸುಬ್ರಹ್ಮಣ್ಯ ವಿಗ್ರಹವು ಕ್ರಿ.ಶ. ೬ನೆಯ ಶತಮಾನ ದ್ದಾಗಿದ್ದು ದಕ್ಷಿಣ ಭಾರತದಲ್ಲೇ ಅತಿ ಪ್ರಾಚೀನ ಸ್ಕಂದ ವಿಗ್ರಹವೆಂದು ಪರಿಗಣಿಸಿದ್ದಾರೆ.

ಹಾಗೆಯೇ ಕುಕ್ಕೆ, ಕಂದಾವರ, ಬಳ್ಳಮಂಜ, ಕುಡುಪು, ಕಡಂದಲೆ, ವಡಭಾಂಡೇಶ್ವರ, ಬಾರಕೂರು, ಪಲಿಮಾರು, ಮಾಂಗೋಡು, ಪಾದೆಬೆಟ್ಟು, ಮಂಗಳೂರಿನ ನೀರುಮಾರ್ಗ, ಪುತ್ತೂರು ತಾಲೂಕಿನ ಕೆಮ್ಮಿಂಜೆ, ಬಂಟ್ವಾಳ ತಾಲೂಕಿನ ಕಾಪು, ಪೊಳಲಿಗಳಲ್ಲಿರುವ ಸ್ಕಂದ ವಿಗ್ರಹಗಳ ಬಗೆಗೂ ವಿಶೇಷ ಸಂಶೋಧನೆ ನಡೆಸಿ ಅವುಗಳ ಕಾಲವನ್ನು ಗುರುತಿಸಿದ್ದಾರೆ.

ದಕ್ಷಿಣ ಕನ್ನಡದ ಕೆಲವು ದೊಡ್ಡ ದೇವಾಲಯಗಳ ಅಂಗಣದೊಳಗೆ ಸುಬ್ರಹ್ಮಣ್ಯನ ಪ್ರತ್ಯೇಕ ಗುಡಿಗಳಿವೆ. ಉದಾ: ಪುತ್ತೂರು ಮಹಾಲಿಂಗೇಶ್ವರ ದೇವಸ್ಥಾನ, ಬಾರಕೂರು ಪಂಚಲಿಂಗೇಶ್ವರ ದೇವಸ್ಥಾನ, ಕಾಸರಗೋಡು ತಾಲೂಕು ಒಂದರಲ್ಲೇ ಹದಿನಾರಕ್ಕೂ ಹೆಚ್ಚು ಸುಬ್ರಹ್ಮಣ್ಯ ದೇವಾಲಯಗಳಿವೆ. ಕಾಸರಗೋಡಿನ ಮಂಜೇಶ್ವರ ಅನಂತೇಶ್ವರ ದೇವಾಲಯ, ಕುಕ್ಕುಂಗೋಡು, ಕುಮಾರ ಮಂಗಲ ಮತ್ತು ಮುಗು ಎಂಬಲ್ಲಿನ ಸ್ಕಂದ ದೇವಾಲಯಗಳು ಪ್ರಸಿದ್ಧವಾಗಿವೆ.

'ಕುಕ್ಕೆ' ಹೆಸರಿನ ಬೇರೆ ಸುಬ್ರಹ್ಮಣ್ಯ ದೇವಾಲಯಗಳೂ ಇವೆ. ಕಾಸರಗೋಡು ತಾಲೂಕಿನ 'ಕಾಟುಕುಕ್ಕೆ'ಎಂಬಲ್ಲಿ ಪ್ರಸಿದ್ಧ ಸುಬ್ರಹ್ಮಣ್ಯ ದೇವಾಲಯವಿದೆ. ಇನ್ನೊಂದು 'ಕುಕ್ಕಂ ಗೋಡ್ಲು' ಎಂಬಲ್ಲಿ ಸುಬ್ರಹ್ಮಣ್ಯ ದೇಗುಲವಿದೆ. ಬೆಳ್ತಂಗಡಿ ತಾಲೂಕಿನ 'ಕೊಕ್ರಾಡಿ'

ಎಂಬಲ್ಲಿ ಸ್ಕಂದ ದೇವಾಯಯವಿದೆ. ಉಡುಪಿ ತಾಲೂಕಿನ 'ಕುಕ್ಕೆಹಳ್ಳಿ' ಕೂಡಾ ಸ್ಕಂದಾರಾಧನೆಗೆ ಪ್ರಸಿದ್ಧವಾಗಿದೆ. ಅದೇ ರೀತಿ ದಕ್ಷಿಣ ಕನ್ನಡ, ಉಡುಪಿ ಜಿಲ್ಲೆಗಳಲ್ಲಿ ಕಂಡುಬರುವ ಕುಕ್ಕಜೆ, ಕುಕ್ಕಿಲ, ಕುಕ್ಕಿಕಟ್ಟೆ, ಕುಕ್ಕೇಡಿ, ಕುಕ್ಕಾಡಿ, ಕುಕ್ಕುಂದೂರು, ಕುಕ್ರಬೆಟ್ಟು, ಕೊಕ್ಕಪುಣಿ ಮೊದಲಾದ ಸ್ಥಳನಾಮಗಳಿಗೂ ಸ್ಕಂದಾರಾಧನೆಗೂ ನಂಟು ಇರಬಹುದು ಎನ್ನಲಾಗಿದೆ.

ಜಿಲ್ಲೆಯ ಸ್ಕಂದ ಮೂರ್ತಿಗಳಲ್ಲಿ ಹೆಚ್ಚಿನವು ದ್ವಿಬಾಹುಗಳಾಗಿದ್ದು ಎಡಗೈಯನ್ನು ಕಡೆಯ ಮೇಲಿರಿಸಿದಂತೆಯೂ, ಬಲಗೈಯಲ್ಲಿ ವಜ್ರ, ನಾಗಾಂಡ ಪದ್ಮ ಅಥವಾ ವೇಲಾಯುಧವನ್ನು ಧರಿಸಿದಂತೆಯೂ ಇದೆ.

ಸಂಶೋಧಕ ಡಾ.ಗುರುರಾಜ ಭಟ್ಟರು ಸ್ಕಂದಾರಾಧನೆಯ ಮೂರ್ತಿಶಿಲ್ಪಗಳನ್ನು ಆರು ಗುಂಪುಗಳಾಗಿ ವಿಂಗಡಿಸಿದ್ದಾರೆ. ೧. ಸಮ ಭಂಗದಲ್ಲಿರುವ ದ್ವಿಬಾಹು ವಿಗ್ರಹ (ಇದರಲ್ಲಿ ವಿವಿಧ ರೀತಿಯವುಗಳಿವೆ). ೨. ಕುಳಿತುಕೊಂಡಿರುವ ದ್ವಿಬಾಹು ವಿಗ್ರಹ ೩. ಲಲಿತಾಸನ ಅಥವಾ ಸಮ ಭಂಗದಲ್ಲಿರುವ ನಾಲ್ಕು ಕೈಗಳ ವಿಗ್ರಹ ೪. ಆರು ಮುಖಗಳ ಮಯೂರ ವಾಹನ ವಿಗ್ರಹ ೫. ನಾಗನ ಸುರುಳಿಗಳಿಂದ ಹೊರ ಹೊಮ್ಮಿದಂತಿರುವ ಕಂಚಿನ ವಿಗ್ರಹ ಮತ್ತು ೬. ನಾಗನ ಹೆಡೆಯ ಆಕಾರದ ವಿಗ್ರಹ. ಇವುಗಳಲ್ಲಿ ದ್ವಿಬಾಹು ವಿಗ್ರಹಗಳೇ ಹೆಚ್ಚು ಪ್ರಾಚೀನವಾದುದೆಂದು ಅವರ ಅಭಿಪ್ರಾಯ.

ವಿಟ್ಲ ಸೀಮೆಯ ಕೇಪು ಸುಬ್ರಾಯ ದೇವಸ್ಥಾನವು ಪ್ರಾಚೀನ ಸ್ಕಂದ ಮಂದಿರಗಳಲ್ಲೊಂದಾಗಿದ್ದು ಇಲ್ಲಿನ ವಿಗ್ರಹವು ಕ್ರಿ.ಶ. ೧೦-೧೧ನೇ ಶತಮಾನಗಳಷ್ಟು ಪ್ರಾಚೀನವಾದುದೆಂದು ಡಾ.ಗುರುರಾಜ ಭಟ್ಟರು ಗುರುತಿಸಿದ್ದಾರೆ. ಇದೇ ಸೀಮೆಯ ವಗೆನಾಡು ಸುಬ್ರಾಯ ದೇವಸ್ಥಾನದ ವಿಗ್ರಹವೂ ಪ್ರಾಚೀನವೇ ಆಗಿದೆಯೆಂದೂ ಕ್ರಿ.ಶ. ೯-೧೦ ಶತಮಾನ ಗಳಷ್ಟು ಹಿಂದಿನದೆಂದೂ ಮಂಜೇಶ್ವರ ಮುಕುಂದ ಪ್ರಭುಗಳು ತಿಳಿಸಿರುತ್ತಾರೆ.

ಭಕ್ತರು ಸುಬ್ರಹ್ಮಣ್ಯ ದೇಗುಲಗಳಿಗೆ ಬೆಳ್ಳಿಯ ನಾಗನಹೆಡೆ, ನಾಗನ ಮೊಟ್ಟೆ ಮತ್ತು ಸರಿಗೆ(ಸರ)ಗಳನ್ನು ಸಮರ್ಪಿಸುವುದು ವಾಡಿಕೆಯಾಗಿದೆ. ದ.ಕ.ದ ಅನೇಕ ಸುಬ್ರಹ್ಮಣ್ಯ ವಿಗ್ರಹಗಳು ಕೈಯಲ್ಲಿ ನವನಾಗ ಅಥವಾ ನಾಗನ ಮೊಟ್ಟೆಯನ್ನು ಧರಿಸಿರುವುದನ್ನು ಗಮನಿಸಬಹುದಾಗಿದೆ.

ಸಂಶೋಧಕ ಎ.ವಿ.ನಾವಡರು ಕರಾವಳಿಯ ನಾಗಾರಾಧನೆಯನ್ನು ಐದು ನೆಲೆಗಳಲ್ಲಿ ಗುರುತಿಸಿದ್ದಾರೆ. ಅವುಗಳೆಂದರೆ ೧. ಸಂಸ್ಕೃತ ಮೂಲದ ಅನಂತನ ವ್ರತ, ತನು ತಂಬಿಲ, ಸರ್ಪಸಂಸ್ಕಾರ, ಆಶ್ಲೇಷಾಬಲಿ ಮತ್ತು ನಾಗದರ್ಶನ ೨. ಜನಪದ ಮೂಲದ ಆದರೆ ಸಂಸ್ಕೃತದ ಪ್ರಭಾವಕ್ಕೊಳಗಾಗಿರುವ ನಾಗಮಂಡಲ-ಡಕ್ಕೆಬಲಿ ೩. ಪಾಣರು ಪಾಣರಾಟದ ಸಂದರ್ಭದಲ್ಲಿ ನಡೆಸುವ ಸ್ವಾಮಿ ಕೋಲ ೪. ಉಪ್ಪಾರು ಹರಿಜನರು ತಮ್ಮದೇ ಆದ

ನಾಗಬನಗಳಲ್ಲಿ ನಡೆಸುವ ಹುಟ್ಟು ಆಚರಣೆ ೫. ಉಡುಪಿ-ಕುಂದಾಪುರ ತಾಲೂಕುಗಳ ಕನ್ನಡ ಸಂಪ್ರದಾಯದ ಮೇರ ಹರಿಜನರು ನಡೆಸುವ ಕಾಡ್ಯನಾಟ.

ಪಾಣಾರಾಟ ಎಂದರೆ ಭೂತ ಮಾಧ್ಯಮ ಜನಾಂಗಗಳಲ್ಲಿ ಒಂದಾದ ಪಾಣರು ನಡೆಸುವ ವೈದಿಕೇತರ ಆಚರಣೆ, ಮನೆದೈವವಾದ ಸ್ವಾಮಿಗೆ ಪಾಣರ ಮೂಲಕ ನಡೆಸುವ ವಾರ್ಷಿಕ ಆರಾಧನೆ ಇದಾಗಿರುತ್ತದೆ. ನಾಗನ ಕುರಿತಾದ ಹೊಗಳಿಕೆಯ ಹಾಡುಗಳನ್ನು ಕಸವೇಷ ತೊಟ್ಟ ಪಾಣ ಹಾಡುತ್ತಿರುವಾಗ ಮತ್ತೊಬ್ಬ ಯಕ್ಷಗಾನದ ಕೇದಗೆ ಮುಂದಲೆ ಕಿರೀಟವನ್ನು ಹೋಲುವ ವೇಷತೊಟ್ಟು ಕುಣಿದು ಹೋಗುತ್ತಾನೆ. ಇದನ್ನು 'ಸ್ವಾಮಿ ಕೋಲ' ಎನ್ನುತ್ತಾರೆ. ಸ್ವಾಮಿ ಕೋಲದ ಹಾಡುಗಳಲ್ಲಿ ನಾಗನ ಹುಟ್ಟು, ಈ ಭೂಮಿಗೆ ಬಂದ ವಿವರ, ಬೇರೆ ಬೇರೆ ಕ್ಷೇತ್ರಗಳಲ್ಲಿ ಆತ ನೆಲೆಯಾದ ವಿವರಗಳು ಸಿಗುತ್ತವೆ.

ಕಾಡ್ಯನಾಟವೆಂದರೆ ಕಾಳಿಂಗಾರಾಧನೆ. ಕಾಡಿನ ಸರಹದ್ದಿನಲ್ಲಿ ವಾಸಿಸುವ ಮೇರ ಹರಿಜನರು ಕಾಳಿಂಗ ಸರ್ಪದ ಆರಾಧನೆ ಮಾಡುತ್ತಾರೆ. ಕಾಡ್ಯನ ವನದೊಳಗೆ ದೊಡ್ಡ ಹುತ್ತ, ಅದಕ್ಕೆ ತಾಗಿಕೊಂಡು ನಾಗನಕಲ್ಲು, ಮರ ಅಥವಾ ಶಿಲೆಯ ಕಂಬ, ಹುತ್ತದ ಸುತ್ತಲೂ ಸರ್ಪನ ಹೆಡೆಯಿರುವ ನೂರಾರು ಮಣ್ಣಿನ ಕಲಶಗಳು ಇರುತ್ತವೆ. ಕಾಡ್ಯನ ಮನೆಯಲ್ಲಿ ಸುತ್ತು ನೆಟ್ಟ ನಾಲ್ಕು ಕಂಬಗಳ ಮೇಲೊಂದು ಹುಲ್ಲು ಹೊದಿಕೆಯ ಮಾಡು ಇರುತ್ತದೆ. ಹೊರ ಆವರಣದಲ್ಲಿ ಬ್ರಹ್ಮ, ಯಕ್ಷಿ, ಉಮ್ಮಳ್ತಿ, ಸ್ವಾಮಿ, ಗಾಮ, ಬೊಬ್ಬರ್ಯ, ಜಟ್ಟಿಗ, ಮಂತ್ರಿಗಣ, ಹಾಯ್ಗುಳಿ, ಕಾನ್ ಪಂಜುರ್ಲಿ ಮುಂತಾದ ಪರಿವಾರ ದೇವತೆಗಳಿರುತ್ತದೆ.

ಮೇರ ಹರಿಜನರು ತಮ್ಮ ಕೂಡು ಕಟ್ಟಿನೊಳಗೆ 'ಕಾಡ್ಯನ ಮನೆ'ಯಲ್ಲಿ ನಡೆಸುವ ಮೂರು ಹಗಲು ನಾಲ್ಕು ರಾತ್ರಿಗಳ ಸುದೀರ್ಘ ಕಾಳಿಂಗಾರಾಧನೆಯನ್ನು 'ಕಾಡ್ಯನಾಟ' ಎನ್ನುತ್ತಾರೆ. ಇದರಲ್ಲಿ ಕಲಶ ಒಪ್ಪಿಸುವ ಕ್ರೀಯೆ ಮಹತ್ವದ್ದಾಗಿದೆ. ವಿಧ್ಯುಕ್ತವಾಗಿ ಕುಂಬಾರ ರಿಂದ ಕಲಶ ತಯಾರಿಸಿ, ಪೂಜಿಸಿ ಅದನ್ನು ಕುಲದ ಸ್ತ್ರೀಯರೇ ಹೊತ್ತು ತರುತ್ತಾರೆ. ಕಲಶದೊಳಗೆ ನೀರು ತುಂಬಿಸಿ ಕಲಶದ ಬಾಯಿಗೆ ಮಾವಿನ ಚಿಗುರು ಇರಿಸುತ್ತಾರೆ.

ಮಂಡಲದ ಚಿತ್ತಾರದ ಮೇಲೆ ಅದನ್ನಿರಿಸುತ್ತಾರೆ. ಕಲಶ ಹೊತ್ತು ನಿಂತ ಹೆಣ್ಣಿನ ಮೇಲೆ ಬೈದ್ಯ ಅಕ್ಕಿಕಾಳುಗಳನ್ನು ಚೆಲ್ಲುತ್ತಾನೆ. ದರ್ಶನ ನಡೆಯುತ್ತದೆ. ಕಾಡ್ಯನನ್ನು ಸಂತಾನದ ಬಯಕೆಗಾಗಿ ನೆನೆಯುತ್ತಾರೆ. ಪೂಜೆಯ ಕೊನೆಯಲ್ಲಿ ಕಲಶವನ್ನು ಹರಿವ ನೀರಿನಲ್ಲಿ ತೊಳೆದು ತರುತ್ತಾರೆ.

ಮಂಡಲವನ್ನು ಬರೆಯುವುದು ಕಾಡ್ಯನಾಟದ ಪ್ರಧಾನ ವಿಧಿ. ಸುಮಾರು ಹತ್ತು ಅಡಿ ವ್ಯಾಸದ ವೃತ್ತಾಕಾರದ ಮಂಡಲವನ್ನು ಪಂಚವರ್ಣಗಳಿಂದ ಚಿತ್ರಿಸುತ್ತಾರೆ. ಮಂಡಲದೊಳಗೆ ಸೂರ್ಯ, ಚಂದ್ರ, ನಕ್ಷತ್ರ, ದೇವತೆ, ಕಮಲದ ಹೂ, ಕಾಗೆ, ದೋಣಿ, ಗೋವಕ್ಕಿ, ನವಿಲು, ಹೊನ್ನರಳಿ ಮರ, ಒನಕೆ, ಒರಳು, ಗೆರಸೆ, ಚೆನ್ನಮಣೆ, ತೊಲೆ, ಡೋಲು, ಕಾಡ್ಯ, ನಾಗ

ಇತ್ಯಾದಿ ರೂಪಗಳನ್ನು ಬಣ್ಣದ ಹುಡಿಗಳಿಂದ ತಮಗೆ ತಿಳಿದಂತೆ ಚಿತ್ರಿಸುತ್ತಾರೆ. ಮಂಡಲದ ಮಧ್ಯದಲ್ಲಿ ಮಹೂರ್ತ ಕಂಬವಿರುತ್ತದೆ. ಹೀಗೆ ಈ ಆರಾಧನೆಯ ಹಿನ್ನೆಲೆಯಲ್ಲಿ ಕಲಶ-ಸರ್ಪ ಹಾಗೂ ಗರ್ಭಕ್ಕೆ ತಾಂತ್ರಿಕ ಸಂಬಂಧವಿರುತ್ತದೆ.

ಉಪ್ಪಾರ ವರ್ಗದ ಹರಿಜನರು ನಡೆಸುವ ನಾಗಾರಾಧನೆಯನ್ನು 'ಹುಟ್ಟು' ಎನ್ನುತ್ತಾರೆ. ಅವರಿಗೆ ಸೇರಿದ ನಾಗವನಗಳು ಪ್ರತ್ಯೇಕ ಇರುತ್ತದೆ. ಅಲ್ಲಿ ದಟ್ಟವಾದ ಮರಗಳ ಬುಡದಲ್ಲಿ ನಾಗನ ಕಲ್ಲುಗಳಿರುತ್ತವೆ. ಹಾಗೂ ಸರ್ಪನ ಹೆಡೆಯಿರುವ ಕಳಶಗಳು, ಹಾಯ್ಗುಳಿಯ ಕಂಬ ಇರುತ್ತದೆ. ಇಲ್ಲಿ ಆರಾಧನೆ ನಡೆಸುವಲ್ಲಿ ಪ್ರತ್ಯೇಕವಾಗಿ ಒಬ್ಬ ನಾಗ ಪಾತ್ರಿಯಿರುತ್ತಾನೆ. ವರ್ಷಕ್ಕೆ ಎರಡು ಬಾರಿ ಮಾತ್ರ ಇಲ್ಲಿ ಆಚರಣೆ ನಡೆಯುತ್ತದೆ.

ಒಂದು ಕದ್ರ್‌ಹಬ್ಬ ಮತ್ತೊಂದು ಹುಟ್ಟು ಮಾಡುವ ಆಚರಣೆ. ನಾಗರಪಂಚಮಿ ಇವರಿಗೆ ಮುಖ್ಯವಾಗಿಲ್ಲ. ಕದ್ರ್ ಹಬ್ಬದ ದಿನ ನೆರೆದ ಜನ ಶುಚಿರ್ಭೂತರಾಗಿ ಅಲ್ಲಿನ ನಾಗಪಾತ್ರಿಯೊಂದಿಗೆ ಪಕ್ಕದ ಗದ್ದೆಗೆ ಓಲಗದೊಂದಿಗೆ ಹೋಗಿ ತೆನೆಯನ್ನು ಕಿತ್ತು ತರುತ್ತಾರೆ. ಆ ತೆನೆಗಳನ್ನು ನಾಗನ ಕಲ್ಲುಗಳ ಮುಂದಿರಿಸಿ, ಪೂಜೆ ಮಾಡುತ್ತಾರೆ. ನಂತರ ನಾಗದರ್ಶನದಲ್ಲಿ ಕಲ್ಲುಗಳ ಮುಂದಿರಿಸಿ, ಪೂಜೆ ಮಾಡುತ್ತಾರೆ. ನಂತರ ನಾಗದರ್ಶನದಲ್ಲಿ ನಾಗಪಾತ್ರಿಯೊಡನೆ ಜನರು ತಮ್ಮ ಕಷ್ಟ ಸುಖಗಳನ್ನು ಹೇಳಿ ಪರಿಹಾರ ಪಡೆಯುತ್ತಾರೆ.

ನಂತರ ತಮ್ಮ ತಮ್ಮ ಮನೆಗಳಿಗೆ ತೆನೆಗಳನ್ನು ಕೊಂಡೊಯ್ದು ಮನೆ ತುಂಬಿಸುತ್ತಾರೆ. 'ಬೇಸ' ತಿಂಗಳಲ್ಲಿ ನಡೆಸುವ 'ಹುಟ್ಟು' ಆಚರಣೆಗೆ ಬಳಿಗೆ ಸೇರಿದ ಪ್ರತಿಯೊಬ್ಬರೂ ಬರಬೇಕು. ನಾಗನಿಗೆ ಹಾಲು ಹಣ್ಣು ಒಪ್ಪಿಸಿ, ಪೂಜೆ ಮಾಡಿ ನಾಗನಿಂದ ಮೈ ತುಂಬಿಸಿಕೊಂಡ ಪಾತ್ರಿಯಿಂದ ಪ್ರಶ್ನೆ ಕೇಳಿ ಪರಿಹಾರ ಪಡೆಯುತ್ತಾರೆ.

ಉಡುಪಿ ಕುಂದಾಪುರ ತಾಲೂಕುಗಳ ಕೋಟೇಶ್ವರ, ಕಾಳಾವರ, ಐರೋಡಿ, ಕಟ್ಬೇರಿ, ಚಾಂತಾರ್, ಒಂಬದ್ದಂಡಿಗೆ, ಬರ್ತ್‌ಕಲ್ಲುಗಳಲ್ಲಿ ಉಪ್ಪಾರರ ಪ್ರಸಿದ್ಧ ನಾಗಬನಗಳಿವೆ. ಆಸೋಡು, ಉಳ್ಳೂರುಗಳಲ್ಲಿ ಕೊರಗ ಜನಾಂಗದವರಿಗೇ ಮೀಸಲಾದ ನಾಗಬನಗಳಿವೆ. ಹೀಗೆ ನಾಗ ಎಲ್ಲಾ ವರ್ಗದವರಿಂದಲೂ ಪೂಜೆಗೊಂಬ ದೈವವಾಗಿದ್ದಾನೆ. ನಾಗನನ್ನು ಯಕ್ಷ, ಗಂಧರ್ವ, ಭೂತ, ಪಿಶಾಚಿಗಳೊಂದಿಗೆ ಗುರುತಿಸಿಕೊಂಡಿಲ್ಲ.

ನಾಗ 'ನಿಧಿ'ಯನ್ನು ಕಾಪಾಡುವವ ಎನ್ನುವ ನಂಬಿಕೆಯಿದೆ. ದೈವತ್ವೀಕರಣಗೊಂಡ ನಾಗ ದೇವತೆಗಳ ಸಂಬಂಧವನ್ನು ಇಟ್ಟುಕೊಂಡಿದ್ದಾನೆ. ಮಹಾವಿಷ್ಣು ನಾಗಶಯನನಾಗಿದ್ದಾನೆ. ಶಿವ ನಾಗಭೂಷಣನಾಗಿದ್ದಾನೆ. ಗಣಪತಿಯ ಉದರವು ಸರ್ಪ ಬಂಧಿತವಾಗಿದೆ. ದುರ್ಗೆ ನಾಗಾ ಆಯುಧಧಾರಿಯಾಗಿದ್ದಾಳೆ. ಸುಬ್ರಹ್ಮಣ್ಯ ನಾಗರೂಪಿ ಯಾಗಿದ್ದಾನೆ. ಹೀಗೆ ದೇವತೆಗಳು ಸರ್ಪಮುಕುಟ, ಸರ್ಪಕಂಕಣ, ಸರ್ಪಾಯುಧ, ಸರ್ಪಮುದ್ರಿಕೆ ಗಳಿಂದ ಶೋಭಾಯಮಾನವಾಗಿದ್ದಾರೆ. ಜೈನ, ಬೌದ್ಧ ಶಿಲ್ಪಗಳಲ್ಲೂ ನಾಗನಿಗೆ ಸ್ಥಾನ ದೊರೆತಿದೆ.



ನಾಗಮಂಡಲದ ಚಿತ್ತಾರ ರಚನೆ



ನಾಗಮಂಡಲದ ಚಿತ್ತಾರ

ನಾಗಾರಾಧನೆ ಪ್ರತ್ಯಕ್ಷ/ಪರೋಕ್ಷ ರೀತಿಗಳಲ್ಲಿ ನಡೆಯುತ್ತಿರುತ್ತದೆ. ಕಾರ್ಣಿಕದ ಸ್ಥಳಗಳಲ್ಲಿ ಹುತ್ತದೆದುರು ಹಾಲನ್ನಿಟ್ಟರೆ ನಿಜವಾದ ಹಾವು ಬಂದು ಹಾಲು ಕುಡಿದು ಹೋಗುವುದಿದೆ. ಕೆಲವೆಡೆ ಹುತ್ತಕ್ಕೆ ಹಾಲೆರೆಯುತ್ತಾರೆ. ಹೆಚ್ಚಿನ ಕಡೆಗಳಲ್ಲಿ ಹುತ್ತದ ಎದುರು ಇರುವ ನಾಗಶಿಲಾ ವೃಂದಕ್ಕೆ ಹಾಲೆರೆಯುವುದು ವಾಡಿಕೆಯಾಗಿದೆ. ನಾಗರ ಪಂಚಮಿ ಹಬ್ಬ, ಸುಬ್ರಹ್ಮಣ್ಯ ಷಷ್ಠಿಯ ದಿನಗಳಂದು ನಾಗಶಿಲೆಗಳಿಗೆ ಹಾಲೆರೆದು, ಪಂಚಾಮೃತ ಅಭಿಷೇಕ ಮಾಡಿ, ಕೇದಗೆ ಹೂಗಳ ನ್ನಿಟ್ಟು, ಅರಶಿನವನ್ನು ಲೇಪಿಸಿ, ಆರತಿ ಬೆಳಗಿ ಸಂತೃಪ್ತಿ ಪಡೆ ಯುವವರು ಅನೇಕರು. ನಾಗರ ಪಂಚಮಿ ಹಬ್ಬಗಳಲ್ಲಿ ಮೊದಲನೆಯ ಹಬ್ಬವಾಗಿದೆ. ನಾಗನನ್ನು ರೋಗ ಪರಿಹಾರಕ ಎಂದು ನಂಬುತ್ತಾರೆ.

ಚರ್ಮವ್ಯಾಧಿ, ದೃಷ್ಟಿದೋಷ ಬಂದಾಗ ನಾಗ ಪೂಜೆ ನಡೆಸುತ್ತಾರೆ. ಸತ್ತ ಸರ್ಪವನ್ನು ಕಂಡಾಗ ವೈದಿಕ ಮಂತ್ರ ಪೂರ್ವಕ ಸಂಸ್ಕಾರ ಮಾಡಿ ಅಪರ ಕರ್ಮಗಳನ್ನು ನಡೆ ಸುತ್ತಾರೆ. ಸಂತಾನ ಭಾಗ್ಯವಿಲ್ಲದವರು ನಾಗಶಿಲೆ ಪ್ರತಿಷ್ಠಾಪಿಸಿ ಆಶ್ಲೇಷಾ ಬಲಿಪೂಜೆ ನಡೆಸುತ್ತಾರೆ ಆಸ್ತಿಕರು ಲೋಕೋದ್ಧಾರಕ್ಕಾಗಿ ನಾಗಮಂಡಲ ಸೇವೆಯನ್ನೂ ನಡೆಸುತ್ತಾರೆ. ಇವೆಲ್ಲಾ ಪೂಜೆಗಳ ಸಂದರ್ಭದಲ್ಲಿ ನಾಗ ಸಂದರುಶನ ಮಾಡಿಸಿ ತೊಂದರೆ ತಗಾದೆಗಳಿಗೆ ಪರಿಹಾರ ಮಾಡಿ ಕೊಳ್ಳುತ್ತಾರೆ.

ಅರಳಿ ಮರದ ಕೆಳಗೆ ನಾಗಶಿಲೆಗಳನ್ನು ನೆಟ್ಟು, ಯಾವಾಗಲೂ ಪೂಜೆ ಮಾಡುತ್ತಾರೆ. ಆಲಡೆಯ ಸ್ಥಳಗಳಲ್ಲಿ ನಾಗ ಬ್ರಹ್ಮನನ್ನು (ನಾಗ ಹಾಗೂ ಬ್ರಹ್ಮ ಸೇರಿರುವ ರೂಪ) ಆರಾಧಿಸುತ್ತಾರೆ. ಇಲ್ಲಿ ನಾಗನಿಗೆ ಬ್ರಹ್ಮಮಂಡಲವೆಂಬ ಸೇವೆಯನ್ನು ನಡೆಸುತ್ತಾರೆ. ಮನೆ ಯೊಳಗೆ ಬಂದು ನಾಗ ರಿಕಾಣಿ ಹೂಡಿದರೆ ಅಥವಾ ಮನೆಯ ಸುತ್ತ ಆತ ಅಲೆದಾಡಿದರೆ ಯಾವುದೋ ಹರಕೆ ಬಾಕಿಯಿದೆಯೆಂದು ಜನ ನಂಬುತ್ತಾರೆ.

"ಕಲ್ಲನಾಗರಕಂಡರೆ ಹಾಲೆರೆಯೆಂಬರು, ದಿಟದನಾಗರ ಕಂಡರೆ ಕೊಲ್ಲೆಂಬರಯ್ಯ" ಎನ್ನುವ ಬಸವಣ್ಣನವರ ಮಾತು ಕೆಲವೆಡೆ ನಿಜವಿರಬಹುದು. ಆದರೆ ಕರಾವಳಿ ಜಿಲ್ಲೆಗಳಲ್ಲಿ ಇದಕ್ಕೆ ಪುಷ್ಟಿ ಸಿಗುವುದಿಲ್ಲ. ಇಲ್ಲಿ ನಾಗರ ಹಾವನ್ನು ಕೊಲ್ಲುವುದು ನಿಷಿದ್ಧ. ಪಾಪಕರ್ಮ, ತಪ್ಪಿ ಕೊಂಡರೂ ಪ್ರಾಯಶ್ಚಿತ್ತ ಮಾಡಬೇಕಾಗುತ್ತದೆ. ಅಲ್ಲದೆ ಕರಾವಳಿ ಜಿಲ್ಲೆಗಳಲ್ಲಿ ನಾಗಪೂಜೆ ಮಡಿಯದ್ದಾಗಿದೆ. ಇದನ್ನು ಬ್ರಾಹ್ಮಣ ಅರ್ಚಕರೇ ನಡೆಸುವುದು ಕ್ರಮ. ಇತರೆಡೆ ಗಳಲ್ಲಿ ನಾಗನನ್ನು ಮುಟ್ಟಿ ಯಾರುಬೇಕಾದರೂ ಪೂಜಿಸಬಹುದು. ಹೆಂಗಸರೂ ಪೂಜಿಸು ತ್ತಾರೆ. ಆದರೆ ಇಲ್ಲಿ ಹೆಂಗಸರು ಮುಟ್ಟುವುದು ನಿಷಿದ್ಧವೆನಿಸಿದೆ.

ಕರಾವಳಿ ಜಿಲ್ಲೆಗಳಲ್ಲಿ ಹಲವಾರು ಪ್ರಸಿದ್ಧ ನಾಗಕ್ಷೇತ್ರಗಳಿವೆ. ಕುಕ್ಕೆ ಸುಬ್ರಹ್ಮಣ್ಯ ದೇಗುಲ ಪ್ರಧಾನ ನಾಗಕ್ಷೇತ್ರವಾಗಿದೆ. ಅದರಂತೆ ಮಂಗಳೂರಿನ ಕುಡುಪು, ಉಡುಪಿಯ

ಪಡುಬಿದ್ರಿ, ಸೂಡಾ, ಸಗ್ರಿ, ಮುಚ್ಲಿಕೋಡು, ಕುಂದಾಪುರದ ಕಾಳಾವರ, ಕಾಸರಗೋಡಿನ ಕುಮಾರಮಂಗಲ, ಕುಕ್ಕುಂಗೋಡ್ಲು ನಾಗಕ್ಷೇತ್ರಗಳು ಪ್ರಸಿದ್ಧವಾಗಿವೆ.

ನಾಗನು ಶಕ್ತಿ ದೇವತೆಯೊಂದಿಗೆ ಸಮಾವೇಶಗೊಂಡಿರುವುದನ್ನು ಹಲವೆಡೆ ಕಾಣಬಹುದು. ಬಸ್ರೂರಿನ ದುರ್ಗಾಲಯ, ನೀಲಾವರದ ದುರ್ಗಾಭಗವತಿ, ಮಂದರ್ತಿಯ ದುರ್ಗಾಪರಮೇಶ್ವರಿ, ಮಂಗಳೂರು ಕಣ್ಣಾರುವಿನ ದುರ್ಗಾಲಯಗಳಲ್ಲಿ ಹುತ್ತವನ್ನೇ ದುರ್ಗೆಯನ್ನಾಗಿ ಆರಾಧಿಸುತ್ತಾರೆ. ದಕ್ಷಿಣ ಕನ್ನಡದ ಪೊಳಲಿಯಲ್ಲಿ ಸ್ಕಂದನ ಜೊತೆಗೆ ರಾಜರಾಜೇಶ್ವರಿಯನ್ನು ಆರಾಧಿಸುತ್ತಾರೆ.

ಕುಂದಾಪುರ ತಾಲೂಕಿನ ಹಟ್ಟಿಯಂಗಡಿ ದುರ್ಗಾಲಯದಲ್ಲಿ ದುರ್ಗೆಯ ಮೂರು ಮುಖವಾಡಗಳಿದ್ದು ಅವುಗಳ ಹಣೆಯಲ್ಲಿ ಸರ್ಪಲಾಂಛನವಿದೆ. ಮಾರಣ ಕಟ್ಟೆಯ ಬ್ರಹ್ಮಲಿಂಗೇಶ್ವರ, ಪೊಸರಾಲಿನ ನಾಗಬ್ರಹ್ಮ, ಹಿರಿಯಡ್ಕ, ಮಂದರ್ತಿಯ ಆಲಡೆ ಕ್ಷೇತ್ರಗಳಲ್ಲಿ ಬ್ರಹ್ಮ-ಶಿವ-ಶಕ್ತಿಯ ಸಂಕೀರ್ಣ ರೂಪಗಳನ್ನು ಕಾಣಬಹುದು. ನಾಗನ ಕೋರಿಕೆಯಂತೆ ತಾರಕಾಸುರನನ್ನು ಸುಬ್ರಹ್ಮಣ್ಯನು ನಿಗ್ರಹಿಸಿದ ಕಾರಣ ನಾಗ-ಸುಬ್ರಹ್ಮಣ್ಯ ಒಂದಾಗಿ ಆವಾಸವಾಗಿರುವುದನ್ನು ನಾವು ಹಲವೆಡೆ ಕಾಣಬಹುದು.

ಕುಂದಾಪುರ ತಾಲೂಕಿನ ಕಂದಾವರ, ಬೆಳ್ತಂಗಡಿ ತಾಲೂಕಿನ ಬಳ್ಳಮಂಜ, ಉಡುಪಿ ತಾಲೂಕಿನ ಸಾಂತೂರು, ಬಾರಕೂರು, ಪಲಿಮಾರು, ಮಾಂಗೋಡು, ಪಾದೆಬೆಟ್ಟು, ವಡಭಾಂಡೇಶ್ವರ, ಬಂಟ್ವಾಳ ತಾಲೂಕಿನ ಕೇಪು, ಪುತ್ತೂರು ತಾಲೂಕಿನ ಕೆಮ್ಮಿಂಜೆ, ಕಾಸರಗೋಡಿನ ಮಂಜೇಶ್ವರ, ಮುಗು ಮುಂತಾದುವು ಪ್ರಸಿದ್ಧ ಸ್ಕಂದ ಕ್ಷೇತ್ರಗಳಾಗಿವೆ.

ಉಡುಪಿ, ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಹತ್ತು ಸಾವಿರಕ್ಕೂ ಮಿಕ್ಕಿ ನಾಗವನಗಳಿವೆ. ಇಲ್ಲಿ ಪರ್ವದಿನಗಳಲ್ಲಿ ಅಲ್ಲದೆ ಇತರ ದಿನಗಳಲ್ಲೂ 'ತನುಹಾಕುವುದು', ತಂಬಿಲ ಸೇವೆ, ಸರ್ಪ ಸಂಸ್ಕಾರ, ಆಶ್ಲೇಷಾಬಲಿ, ತನು ತರ್ಪಣ ಮಂಡಲ, ನಾಗ ಮಂಡಲಗಳು ನಡೆಯುತ್ತಿರುತ್ತವೆ. ಆಧುನಿಕತೆಯ ದೆಸೆಯಿಂದ ಇಂದು ನಾಗವನಗಳು ಕಾಂಕ್ರೀಟ್ ಕಾಡುಗಳಾಗುತ್ತಿವೆ.

ವಾಸ್ತು ಶಿಲ್ಪಗಳ ಗೋಪುರವನ್ನು ಕಾಣುತ್ತಿವೆ. ಇದರಿಂದಾಗಿ ಹಾವುಗಳಿಗೆ ನಾಗವನದೊಳಗೆ ಬಂದು ಹೋಗಲೂ ಅಂಜಿಕೆಯಾಗುವಂತಹ ಪರಿಸ್ಥಿತಿ ನಿರ್ಮಾಣವಾಗುತ್ತಿದೆ. ನಾಗವನ ತರಗೆಲೆಗಳ ಕೊಳಕಿನಿಂದ ತುಂಬಿರಬಾರದು, ಶುದ್ಧವಾಗಿರಬೇಕು ಎಂಬ ಉದ್ದೇಶದಿಂದ ನಾಗವನವನ್ನು ಸಮೀಕರಣಗೊಳಿಸುತ್ತಿದ್ದಾರಾದರೂ ಇದು ಪೂರ್ತಿ ಕಾಂಕ್ರೀಟೀಕರಣವಾಗ ಬಾರದು. ಉತ್ತಮ ಮರಗಳನ್ನು ಹಾಗೆಯೇ ಉಳಿಸಿಕೊಂಡು ಪೂಜಾಸ್ಥಾನದ ಭಾಗವನ್ನಷ್ಟೇ ಕಟ್ಟೆ ಕಟ್ಟಿ ಸುಂದರ ಗೊಳಿಸಿದರೆ ನಾಗವನದ ಪ್ರಾಕೃತಿಕ ಸೊಬಗು ಉಳಿಯುತ್ತದೆ. ನಾಗವನವೂ ತಂಪಾಗಿರುತ್ತದೆ. ಈ ದಿಸೆಯಲ್ಲಿ ಚಿಂತನೆ ನಡೆಯಬೇಕು.

## ಸಂಸ್ಕೃತ ಮೂಲದ ಆಚರಣೆಗಳು

ದಕ್ಷಿಣ ಕನ್ನಡದ ನಾಗಸಂಬಂಧಿ ಆಚರಣೆಗಳಲ್ಲಿ ಅನಂತನ ವ್ರತ (ನೋಂಪು) ಪ್ರಮುಖವಾಗಿದೆ. ಅನೇಕ ಮನೆಗಳಲ್ಲಿ ಸಂತಾನ ಮತ್ತು ಸಮೃದ್ಧಿಗಾಗಿ ಈ ವಿಧಿಯನ್ನು ತಲೆತಲಾಂತರಗಳಿಂದ ನಡೆಸಿಕೊಂಡು ಬರುತ್ತಿದ್ದಾರೆ. ಭಾದ್ರಪದ ಶುಕ್ಲಪಕ್ಷ ಚತುರ್ದಶಿಯ ದಿನ ವ್ರತಧಾರಿಯಾದವನು ಕಲಶದೊಳಗೆ ಗಂಗಾಜಲವನ್ನು ತುಂಬಿಸಿ ಪೂಜೆಯನ್ನು ಆರಂಭಿಸುತ್ತಾನೆ. ಕೈಗೆ ೧೪ ಗಂಟುಗಳುಳ್ಳ ಕೆಂಪು ರೇಶ್ಮೆ ದಾರವನ್ನು ಪೂಜಿಸಿ ಕಟ್ಟಿ ಕೊಳ್ಳುತ್ತಾನೆ. ವ್ರತಧಾರಿಯಾದ ಇತರರಿಗೂ ಕಟ್ಟಿಕೊಳ್ಳಲು ಕೊಡುತ್ತಾನೆ. ಈ ದಾರಕ್ಕೆ 'ಅನಂತ' ಎಂದು ಹೆಸರಿದೆ.

## ನಾಗರಪಂಚಮಿ

ಶ್ರಾವಣ ಮಾಸದ ಶುಕ್ಲಪಕ್ಷದ ಪಂಚಮಿಯಂದು ಆಚರಿಸುವ ಮೊದಲ ಹಬ್ಬ ಇದಾಗಿದೆ. ಎಲ್ಲಾ ವರ್ಗದ ಜನರೂ ನಾಗಪಂಚಮಿ ಪೂಜೆಯಲ್ಲಿ ಸೇರುತ್ತಾರೆ. ಆದಿನ ನಾಗಬನಗಳಲ್ಲಿ ನಾಗತನು -ತಂಬಿಲ ಸೇವೆಗಳು ಸಾವಿರಗಟ್ಟಳೆ ನಡೆಯುತ್ತದೆ. ಬ್ರಾಹ್ಮಣ ಅರ್ಚಕರೇ ಈ ಕೆಲಸವನ್ನು ನಿರ್ವಹಿಸುತ್ತಾರೆ.

ಆದಿನ ನಾಗನ ಕಲ್ಲುಗಳಿಗೆ ಹಾಲು, ಸಿಯಾಳ, ಪಂಚಾಮೃತವನ್ನು ಎರೆದು ಅರಶಿನ ಹುಡಿಯಿಂದ ಶೃಂಗರಿಸಿ ಹೂವಿಟ್ಟು ಫಲ ಸಮರ್ಪಿಸಿ ಆರತಿ ಬೆಳಗಿ ಅವರವರ ಇಷ್ಟಾರ್ಥಕ್ಕಾಗಿ ನಾಗನಲ್ಲಿ ಪ್ರಾರ್ಥಿಸುತ್ತಾರೆ. ದೇವಸ್ಥಾನಕ್ಕೆ ಹೊಂದಿಕೊಂಡಂತೆಯೂ ಪ್ರತ್ಯೇಕವಾಗಿ ನಾಗಬನಗಳಿರುತ್ತವೆ. ಅಲ್ಲಿ ನಾಗರಪಂಚಮಿ ದಿನದಂದು ಹಾಗೂ ವರ್ಷವಿಡಿ ನಾಗಪೂಜೆಗಳು ನಡೆಯುತ್ತಿರುತ್ತವೆ.

## ನಾಗ ಸಂದರ್ಶನ

ಜನರು ತಮ್ಮಲ್ಲಿರುವ ಸಮಸ್ಯೆಗಳನ್ನು ಇತ್ಯರ್ಥಗೊಳಿಸಲು ನಾಗದರ್ಶನವನ್ನು ನಡೆಸುವುದು ವಾಡಿಕೆಯಾಗಿದೆ. ಅದಕ್ಕೆಂದೇ ನಾಗ ಪಾತ್ರಿಗಳು ಇರುತ್ತಾರೆ. ನಿಶ್ಚಿತ ದಿನದಂದು ನಾಗನಿಗೆ ಪೂಜೆ ನಡೆಸಿ ನಾಗಶಿಲೆಗಳ ಎದುರು ನಾಗಪಾತ್ರಿಯನ್ನು ನಿಲ್ಲಿಸುತ್ತಾರೆ. ವೈದಿಕರು ಮಂತ್ರೋಚ್ಛರಿ ಸುತ್ತಾರೆ. ಎಲ್ಲರೂ ನಾಗನನ್ನು ಪ್ರಾರ್ಥಿಸುತ್ತಾರೆ. ಅರ್ಚಕರು ಸ್ವಸ್ತಿಕೆಯ ಮೇಲಿರಿಸಿದ್ದ ಹಿಂಗಾರ ಹೂಗಳನ್ನು ನಾಗಪಾತ್ರಿಯ ಕೈಗೆ ನೀಡುತ್ತಾರೆ. ನಾಗಸ್ವರ ವಾದ್ಯವು ಏರುಗತಿಯಲ್ಲಿ ಸಾಗುತ್ತದೆ. ನಾಗಪಾತ್ರಿಯ ಮೈಯಲ್ಲಿ ನಾಗದೇವತೆ-ಯಕ್ಷಿರೂಪದಲ್ಲಿ ಆವಾಹನೆ ಹೊಂದಿ ಆತನಿಗೆ ನಡುಕ ಉಂಟಾಗುತ್ತದೆ.

ಹಿಂಗಾರದ ಹೂಗಳನ್ನು ಮುಖಕ್ಕೆ ಸವರಿಕೊಳ್ಳುತ್ತಾನೆ. ಹೂಂಕರಿಸುತ್ತಾ, ಬುಸುಗುಟ್ಟುತ್ತಾ, ಕಂಪಿಸುತ್ತಾನೆ. ನಡುನಡುವೆ ವಾದ್ಯಸ್ವರವನ್ನು ಏರಿಸಿ ನಾಗಪಾತ್ರಿಯ ಆವೇಶವನ್ನು ಉತ್ಕಟಗೊಳಿಸಲಾಗುತ್ತದೆ. ಹಿಂಗಾರ ಹೂವುಗಳೆಲ್ಲಾ ಮುಖಕ್ಕೆ ಸಮರ್ಪಣೆಯಾದ

ಬಳಿಕ ಪಾತ್ರಿಯ ಆವೇಶ ಕಡಿಮೆಗೊಳ್ಳುತ್ತದೆ. ಆಗ ಭಕ್ತರು ತಮ್ಮ ಸಮಸ್ಯೆಗಳನ್ನು ಪಾತ್ರಿಯಲ್ಲಿ ಅರಿಕೆ ಮಾಡಿಕೊಳ್ಳುತ್ತಾರೆ.

ಪಾತ್ರಿಯು ತನ್ನ ಸಿದ್ಧಿಯಿಂದ ಆ ಸಮಸ್ಯೆಗಳಿಗೆ ಪರಿಹಾರ ನೀಡುತ್ತಾನೆ. ಹೀಗೆ ನಾಗಮುಖದಿಂದ ಪರಿಹಾರ ವಚನ ಪಡೆದು ಭಕ್ತರು ಕೃತಾರ್ಥರಾಗುತ್ತಾರೆ. ನಾಗಬನಗಳಲ್ಲಿ ನಾಗ ಪ್ರತಿಷ್ಠೆ, ವರ್ಧಂತಿ ದಿನಗಳಂದು ನಾಗದರ್ಶನ ಮಾಮೂಲಿಯಾಗಿ ನಡೆಯುತ್ತದೆ. ನಾಗ ಮಂಡಲ ನಡೆಯುವ ದಿನ ನಾಗಬನಗಳಲ್ಲಿ ನಾಗದರ್ಶನವಾಗಿಯೇ ನೃತ್ಯ ಮಂಟಪಕ್ಕೆ ಸಾಗುತ್ತಾರೆ.

## ಸುಬ್ರಹ್ಮಣ್ಯ ಷಷ್ಠಿ

ನಾಗಕ್ಷೇತ್ರಗಳಲ್ಲಿ ಸುಬ್ರಹ್ಮಣ್ಯ ಷಷ್ಠಿ ಹಬ್ಬವನ್ನು ಶ್ರದ್ಧಾ ಭಕ್ತಿಗಳಿಂದ ಆಚರಿಸುತ್ತಾರೆ. ಕೆಲವೆಡೆ ಮರುದಿನ ನಾಗಮಂಡಲ ನಡೆಯುವುದುಂಟು. ಸುಬ್ರಹ್ಮಣ್ಯ, ಕಾಳಾವರ, ಕುಡುಪು, ಪೆರ್ಡೂರು ಮುಂತಾದ ನಾಗಕ್ಷೇತ್ರಗಳಲ್ಲಿ ಷಷ್ಠಿ ದಿವಸ ಉರುಳುಸೇವೆ ನಡೆಸುತ್ತಾರೆ. ಸಾರ್ವಜನಿಕ ಅನ್ನ ಸಂತರ್ಪಣೆ ನಡೆಸುತ್ತಾರೆ.

## ಸರ್ಪ ಸಂಸ್ಕಾರ

ಇದು ಮೃತ ಸರ್ಪನ ಅಪರ ಸಂಸ್ಕಾರ ರೂಪದ ಕ್ರಿಯೆಯಾಗಿದೆ. ದಕ್ಷಿಣ ಕನ್ನಡ ಉಡುಪಿ ಜಿಲ್ಲೆಗಳಲ್ಲಿ ಮೃತ ಸರ್ಪವನ್ನು ಕಂಡರೆ ಅಪರ ಕ್ರಿಯಾದಿಗಳನ್ನು ನಡೆಸುವುದು ಮಾಮಾಲಿ ಯಾಗಿದೆ. ಇದನ್ನು ನಡೆಸದಿದ್ದರೆ ಪಾಪಬರುವುದು ಎಂಬ ಭಾವನೆ ಇಲ್ಲಿಯ ಜನರಲ್ಲಿದೆ. ಸರ್ಪ ಸಂಸ್ಕಾರ ದಿನ ಹಿಟ್ಟಿನಿಂದ ಎರಡು ಸರ್ಪಾಕೃತಿಗಳನ್ನು ಮಾಡಿ ಅವುಗಳಲ್ಲಿ ಒಂದು ಮೃತವಾಯಿತೆಂದು ಭಾವಿಸಿ ವಿಧಿ ಪ್ರಕಾರ ಅದನ್ನು ಸುಟ್ಟು ಅಪರ ಕರ್ಮ ಮಾಡುತ್ತಾರೆ. ಮತ್ತೊಂದನ್ನು ಹುತ್ತದ ಸಮೀಪ ಬಿಡುತ್ತಾರೆ.

ಕೆಲವೆಡೆ ಹಿಟ್ಟಿನಲ್ಲಿ ಒಂದೇ ಸರ್ಪವನ್ನು ಮಾಡುವುದಿದೆ. ನಂತರ ಮೂರು ದಿನ ಯಜಮಾನನು ಶುದ್ಧದಲ್ಲಿದ್ದು ನಾಲ್ಕನೇ ದಿನ ನವಕ ಪ್ರಧಾನ ಹೋಮ ಕಲಶಾಭಿಷೇಕವನ್ನು ನಾಗನಿಗೆ ನಡೆಸುತ್ತಾರೆ. ಬ್ರಹ್ಮಚಾರಿಗಳನ್ನು ಆಮಂತ್ರಿಸಿ ಅವರಲ್ಲಿ ವಿವಿಧ ಸರ್ಪದೇವತೆಗಳನ್ನು ಆವಾಹಿಸಿ, ಭೋಜನ ದಾನಾದಿಗಳಿಂದ ಅವರನ್ನು ತೃಪ್ತಿಪಡಿಸಿ ಆಶೀರ್ವಾದ ಪಡೆಯುತ್ತಾರೆ. ಮೃತ ಸರ್ಪವನ್ನು ಕಂಡರೆ ಆ ಸರ್ಪವನ್ನು ವಿಧಿ ಪ್ರಕಾರ ಸುಟ್ಟು ಅನಂತರ ಸರ್ಪಸಂಸ್ಕಾರ ವಿಧಿಯನ್ನು ನಡೆಸುತ್ತಾರೆ. ಇನ್ನಿತರ ನಾಗದೋಷಗಳ ನಿವಾರಣೆಗೂ ಸರ್ಪ ಸಂಸ್ಕಾರವನ್ನು ನಡೆಸುವ ವಾಡಿಕೆಯಿದೆ.

## ಆಶ್ಲೇಷಾ ಬಲಿ

ಗೃಹಚಾರ ನಿವೃತ್ತಿ, ನಿಸ್ಸಂತಾನ ಪರಿಹಾರ, ಚರ್ಮವ್ಯಾಧಿಗಳ ನಿವಾರಣೆ ಗಾಗಿ ಆಶ್ಲೇಷಾಬಲಿ ಪೂಜೆಯನ್ನು ನಡೆಸುತ್ತಾರೆ. ಇದನ್ನು ನಾಗಬನಗಳಲ್ಲಿ, ಮನೆಯಲ್ಲಿ ಹಾಗೂ

ನಾಗಕ್ಷೇತ್ರಗಳಲ್ಲಿ ನಡೆಸುತ್ತಾರೆ. ಆಶ್ಲೇಷಾ ನಕ್ಷತ್ರದ ದಿನ ನಾಗನ ಪ್ರಾರ್ಥನೆ ಪುರಸ್ಸರ ಹಗಲು ಅಥವಾ ರಾತ್ರಿ ಹೊತ್ತಿನಲ್ಲಿ ಶುದ್ಧೀಕರಿಸಿದ ಜಾಗದಲ್ಲಿ ಆಶ್ಲೇಷಾಬಲಿಯನ್ನು ನಡೆಸುತ್ತಾರೆ.

ಪಂಚವರ್ಣದ ಹುಡಿಗಳಿಂದ (ಬಿಳಿ, ಕಪ್ಪು, ಕೆಂಪು, ಹಳದಿ, ಹಸಿರು) ಕಲಾತ್ಮಕ ವಾದ ಮಂಡಲ ಬರೆಯುತ್ತಾರೆ. ಇದರಲ್ಲಿ ೯ ಕೋಣೆಗಳ ನವಪದ ಮಂಡಲ ಮತ್ತು ೭೬ ಕೋಣೆಗಳ ಇನ್ನೊಂದು ದೊಡ್ಡಮಂಡಲ ಬರೆಯುತ್ತಾರೆ. ಇದನ್ನು ಸುತ್ತು ಹಾಕಿ ಮೇಲೆ ಹೆಡೆಬಿಚ್ಚಿ ಕುಳಿತ ನಾಗನನ್ನು ಚಿತ್ರಿಸುತ್ತಾರೆ. ಈ ಕೋಣೆಗಳೊಳಗೆ ತಲಾ ಒಂದೊಂದು ಪಿಂಡವನ್ನು(ಅನ್ನದ ಉಂಡೆ), ಅದರ ಮೇಲೆ ಅಕ್ಕಿಯಿಂದ ಮಾಡಿದ ಭಕ್ಷ್ಯ-ಅಪ್ಪವನ್ನಿರಿಸಿ ವೈದಿಕ ಮಂತ್ರೋಚ್ಛಾರಣೆ ಸಹಿತ ಅದರ ಮೇಲೆ ಹಣತಿಗೆ ಸೊಡರನ್ನು ಬೆಳಗಿಸುತ್ತಾರೆ.

ಕೊನೆಯಲ್ಲಿ ನೈವೇದ್ಯ, ಮಂಗಳಾರತಿ, ಪ್ರಾರ್ಥನೆ, ನಮಸ್ಕಾರ, ದಾನಾದಿಗಳು ನಡೆ ಯುತ್ತದೆ. ವಟುವಾರಾಧನೆ, ಭೋಜನ ನಡೆಸುತ್ತಾರೆ. ಹೀಗೆ ಮಂಡಲ ರಚಿಸಿ ನಾಗನನ್ನು ಪ್ರಸನ್ನಗೊಳಿಸುವ ಈ ಪೂಜೆಯನ್ನು ಹನ್ನೆರಡುಬಾರಿ ಸತತವಾಗಿ ನಡೆಸಿ ಹದಿಮೂರನೆಯ ಬಾರಿ 'ಉದ್ಯಾಪನೆ'ಯ ಮೂಲಕ ಮುಕ್ತಾಯಗೊಳಿಸುತ್ತಾರೆ. ಆರಂಭದಲ್ಲೂ ಮುಕ್ತಾಯ ದಲ್ಲೂ ನಾಗದರ್ಶನ ನಡೆ ಸುತ್ತಾರೆ.

ಆಶ್ಲೇಷಾ ಬಲಿ ಮಂಡಲ ಹಿಂದೆ ಸಾಮಾನ್ಯವಾಗಿತ್ತು. ಬರ ಬರುತ್ತಾ ಅದರಲ್ಲಿ ಕಲಾತ್ಮಕ ಅಂಶಗಳು ಸೇರಿಕೊಂಡು ಇದೀಗ ಈ ಚಿತ್ತಾರ ಮಂಡಲ ಆತ್ಯಾಕರ್ಷಕವಾಗಿ ಮೂಡಿ ಬರುತ್ತಿದೆ. ಕಳೆದ ಶತಮಾನದ ಅರ್ವತ್ತರ ದಶಕದವರೆಗೆ ಬರೇ ಬಿಳಿ ಜೇಡಿ ಪುಡಿಯಿಂದ ಇಂತಹ ಮಂಡಲ ವನ್ನು ಬರೆಯುತ್ತಿದ್ದರು. ಎಪ್ಪತ್ತರ ದಶಕದಲ್ಲಿ ಪಂಚವರ್ಣಗಳಿಂದ ಮಂಡಲವನ್ನು ವಿಪ್ರರು ಶಾಸ್ತ್ರೋಕ್ತವಾಗಿ ಅಲಂಕರಿಸ ತೊಡಗಿದರು. ಕ್ರಮೇಣ ಮಂಡಲದ ಸುತ್ತಲೂ ಪವಿತ್ರಗಂಟನ್ನು ಹಾಕಿ ಕುಳಿತಿರುವ ನಾಗನನ್ನು ಚಿತ್ರಿಸತೊಡಗಿದರು.

ಎಂಬತ್ತರ ದಶಕದಲ್ಲಿ ಮೂರು ಹೆಡೆಯ ನಾಗರ, ಐದು ಹೆಡೆ, ಏಳು ಹೆಡೆ, ಒಂಬತ್ತು ಹೆಡೆಯ ನಾಗನನ್ನು ಚಿತ್ರಿಸುವ ಪದ್ಧತಿ ವಿಪ್ರ ರೊಳಗೆ ಸ್ಪರ್ಧಾತ್ಮಕ ರೀತಿಯಲ್ಲಿ ಬೆಳೆಯಿತು. ಈ ಹಂತದಲ್ಲಿ ಈ ಲೇಖಕರು ಆಶ್ಲೇಷಾ ಬಲಿಮಂಡಲಕ್ಕೆ ಹೊಸ ಕಾಯಕಲ್ಪವನ್ನು ಕೊಟ್ಟರು ಎಂದರೆ ತಪ್ಪಾಗಲಾರದು. ಇದು ಪೂಜಾ ವಿಧಾನದಲ್ಲಿ ಹೆಚ್ಚೆಚ್ಚು ಅಲಂಕಾರ ಮತ್ತು ಸೌಂದರ್ಯ ವನ್ನು ಬಯಸುವವರಿಗೆ ಹೊಸತನದ ಕಳೆಕೊಟ್ಟಿತು.

ಶಾಸ್ತ್ರೀಯ ವಿಧಾನಕ್ಕೆ ಭಂಗ ಕೊಡದ ರೀತಿಯಲ್ಲಿ ಸುತ್ತು ಶೃಂಗಾರವನ್ನು ಹೆಚ್ಚಿಸುವ ಹಾಗೂ ನಾಗನ ವಿವಿಧ ರೂಪಗಳನ್ನು ಚಿತ್ರಿಸುವ ಇಂತಹ ಮಂಡಲಗಳ ರಚನೆಗೆ ಬೇಡಿಕೆಯೂ ಹೆಚ್ಚಿತು. ಪರಿಣಾಮವಾಗಿ ಕರಾವಳಿ ಜಿಲ್ಲೆಯ ಉದ್ದಗಲಕ್ಕೂ ನಾನು ಇಂತಹ ಮಂಡಲ ಗಳನ್ನು ಸಾಕಷ್ಟು ಬರೆದಿದ್ದೇನೆ. ಇದು ಭಕ್ತರಿಗೆ ಭಕ್ತಿ ಹೆಚ್ಚಿಸುವ ಮಾರ್ಗವೂ ಆಗಿದೆ.

ಹೇಗೆ ದೇವಾಲಯಗಳಲ್ಲಿ ದೇವತಾ ಚಿತ್ರಗಳನ್ನು ರಚಿಸಿಟ್ಟಾಗ ಭಕ್ತರಿಗೆ ಮಧುರ ಭಕ್ತಿಯು ಹೆಚ್ಚುವುದೋ ಅಂತಹ ಪರಿಣಾಮವನ್ನು ಈ ಮಂಡಲಗಳೂ ಮಾಡಿದವು. ಪಂಚವರ್ಣ ಗಳನ್ನು ಮಿಶ್ರ ವರ್ಣರೂಪದಲ್ಲಿ ಬಳಸಿಕೊಂಡು ಮಂಡಲದ ಸುತ್ತಲೂ ಪವಿತ್ರ ಗಂಟಿನ ನಕ್ಷೆ ರಚಿಸಿ, ಮೇಲ್ಬದಿಯಲ್ಲಿ ದೊಡ್ಡ ಗಾತ್ರದಲ್ಲಿ ಹೆಡೆಯರಳಿಸಿ ಕುಳಿತಿರುವ ನಾಗನ ಮುಖದೆದುರು ವಿವಿಧ ನಾಗರೂಪಗಳನ್ನು ಬರೆದಾಗ ಆ ಚಿತ್ತಾರ ನೋಡಲು ಆಕರ್ಷಕ ವಾಗಿರುತ್ತದೆ.

ರಂಗೋಲಿ ಪ್ರಿಯರನ್ನಂತೂ ಇವು ವಿಶೇಷವಾಗಿ ಸೆಳೆಯುತ್ತವೆ. ಇಂತಹ ನಾಗರೂಪ ಗಳಲ್ಲಿ ಮುಖ್ಯವಾಗಿ ಸಂಕರ್ಷಣ, ಸುಬ್ರಹ್ಮಣ್ಯ ಸ್ಕಂದ, ನಾಗ-ನಾಗಯಕ್ಷಿ, ಅನಂತ, ವಾಸುಕಿ, ತಂಬೂರಿನಾಗ, ನಾಗ-ನಾಗ ಪತ್ನಿ-ನಾಗಪುತ್ರ, ಆದಿಶೇಷ ಮುಂತಾಗಿ ಹತ್ತನ್ನೆರಡು ಸ್ವರೂಪ ಗಳನ್ನು ನಾನು ಬರೆದಿದ್ದು ಅವು ಪ್ರಸಿದ್ಧಿಯಾಗಿವೆ. ಈಗಲೂ ಬೇಡಿಕೆಯಲ್ಲಿವೆ. ಆಶ್ಲೇಷಾಬಲಿ ಮಂತ್ರ ಪುಸ್ತಕಗಳಲ್ಲೂ ಮುದ್ರಿತವಾಗಿವೆ. ಇವುಗಳಲ್ಲಿ ಕೆಲವು ರೂಪಗಳನ್ನು ಪ್ರಾಚೀನ ನಾಗಶಿಲೆಗಳಲ್ಲೂ ಕಾಣಬಹುದಾಗಿದೆ.

## ತನು ತರ್ಪಣ ಮಂಡಲ

ಮುಖ್ಯವಾಗಿ ಕೇರಳದ ವೈದಿಕ ವಿಧಿಯಾದ ಈ ಪೂಜೆಯು ಈಗ ತುಳುನಾಡಿನಲ್ಲೂ ಪ್ರಾಮುಖ್ಯತೆ ಪಡೆಯುತ್ತಿದೆ. ಮಂಡಲ ವಿಸ್ತಾರದ ದೃಷ್ಟಿಯಿಂದ ಇದು ನಾಗಮಂಡಲಕ್ಕೂ ಮಿಗಿಲೆನಿಸುತ್ತದೆ. ಆಶ್ಲೇಷಾಬಲಿ ಮಂಡಲಕ್ಕಿಂತ ಸ್ವಲ್ಪ ವ್ಯತ್ಯಾಸವನ್ನು ಪಡೆದಿರುವ ಈ ನಾಗ ತನು ತರ್ಪಣ ಮಂಡಲದಲ್ಲಿ ಮೂರು ವಿಭಾಗಗಳಿರುತ್ತವೆ. ಇದರಲ್ಲಿ ಒಂದು ದೊಡ್ಡ ಮಂಡಲವೂ ಅದರ ಇಕ್ಕೆಲಗಳಲ್ಲಿ ಎರಡು ಸಣ್ಣ ಮಂಡಲಗಳಿರುತ್ತವೆ. ಬಲ ಬದಿಯ ನವಪದ ಮಂಡಲವು ಆಶ್ಲೇಷಾ ಬಲಿಯಂತೆ ೯ ಕೋಣೆಗಳನ್ನು ಹೊಂದಿರುತ್ತದೆ.

ಮಧ್ಯದ ಮಂಡಲವು ವಿಸ್ತಾರವಾಗಿದ್ದು ಅದರ ಮಧ್ಯದಲ್ಲಿ ಆಶ್ಲೇಷಾ ಬಲಿಯಂತೆ ೭೬ ಕೋಣೆಗಳಿರುತ್ತದೆ. ಅದರ ಸುತ್ತ ಕ್ರಮವಾಗಿ ೮ ದಳ, ೧೬ ದಳ, ೩೨ ದಳ, ೬೪ ದಳಗಳ ವೃತ್ತಿ ಮಂಡಲವಿರುತ್ತದೆ. ಈ ಕಮಲ ದಳಗಳಲ್ಲಿ ನಾಗನ ಹೆಡೆಯನ್ನು ಚಿತ್ರಿಸುತ್ತಾರೆ. ಈ ದಳ ವೃತ್ತಗಳ ಹೊರಗೆ ೧೬ ಪವಿತ್ರಗಂಟಿನ ರೂಪದಲ್ಲಿ ಸುತ್ತುವರಿದಿರುವ ನಾಗನ ದೇಹವಿರುತ್ತದೆ. ಹಾಗೂ ಮೇಲ್ಬದಿಯಲ್ಲಿ ಸುತ್ತು ಹಾಕಿ ಹೆಡೆಯರಳಿಸಿ ಕುಳಿತಿರುವ ಏಳು ಹೆಡೆಯ ನಾಗನನ್ನು ಚಿತ್ರಿಸುತ್ತಾರೆ.

ಈ ದೊಡ್ಡ ಮಂಡಲದ ಎಡಬದಿಯಲ್ಲಿ ವೃತ್ತಕಮಲ ಸುತ್ತಿನ ತರ್ಪಣ ಮಂಡಲವನ್ನು ಬರೆಯುತ್ತಾರೆ. ತನುತರ್ಪಣ ಮಂಡಲದಲ್ಲಿ ಆಶ್ಲೇಷಾಬಲಿಯಂತೆ ಕೋಣೆಗಳೊಳಗೆ ಪಿಂಡವನ್ನಿಟ್ಟು ದೊಂದಿಯನ್ನು ಸುರಿಯುತ್ತಾರೆ. ಎಡಬದಿಯ ಮಂಡಲದಲ್ಲಿ ಪಂಚಾಮೃತ

ವನ್ನು ಪೂಜಿಸಿ ಮಹಾಮಂಗಳಾರತಿ ಬೆಳಗಿದ ನಂತರ ಬಲಿದೇವತೆಗಳಿಗೆ ತರ್ಪಣವನ್ನು ಕೊಡುತ್ತಾರೆ. ಕೊನೆಯಲ್ಲಿ ಪಂಚಾಮೃತವನ್ನು ಮಂಡಲಕ್ಕೆ ಚೆಲ್ಲಿ ಬಿಡುತ್ತಾರೆ. ಆಶ್ಲೇಷಾ ಬಲಿಗಿಂತಲೂ ಶ್ರೇಯಸ್ಕರವಾದ ಬಲಿಪೂಜೆ ಇದೆನ್ನಲಾಗಿದೆ.

## ಡಕ್ಕೆಬಲಿ

ಡಕ್ಕೆಬಲಿ, ಬ್ರಹ್ಮಮಂಡಲ, ನಾಗಮಂಡಲ ನೃತ್ಯ ವಿಧಾನಗಳಲ್ಲಿ ವಿಶೇಷ ವ್ಯತ್ಯಾಸ ಗಳಿಲ್ಲ. ಅವುಗಳ ಆರಾಧನಾ ಉದ್ದೇಶ ಮಾತ್ರ ಬೇರೆ ಬೇರೆಯಾಗಿರುತ್ತದೆ. ಡಕ್ಕೆ ಬಲಿಗೆ ಮಂಡ್ಲಭೋಗ, ಮಂಡ್ಲಸೇವೆ, ಹೊಡಿಸೇವೆ, ಡಮರುಸೇವೆ, ದೈವಮಂಡ್ಲ ಮುಂತಾದ ಪರ್ಯಾಯ ಹೆಸರುಗಳು ಇವೆ. ಡಕ್ಕೆಬಲಿಯನ್ನು ವೈದ್ಯರು ಮತ್ತು ಪಾಣರು ಇಬ್ಬರೂ ನಡೆಸಿ ಕೊಡುವುದುಂಟು. ನಾಗಮಂಡಲ, ಬ್ರಹ್ಮಮಂಡಲವನ್ನು ವೈದ್ಯರೆನ್ನುವ ಬ್ರಾಹ್ಮಣ ಕುಲದವರು ನಡೆಸಿ ಕೊಡುತ್ತಾರೆ.

ಬ್ರಹ್ಮಮಂಡಲವು ಬ್ರಹ್ಮನ ಪ್ರೀತ್ಯರ್ಥವಾಗಿ ಜರುಗುವ ವಿಧಿ ಆಚರಣೆಯಾಗಿದೆ. ಇಲ್ಲಿ ಬ್ರಹ್ಮನೆಂದರೆ ಚತುರ್ಮುಖ ಬ್ರಹ್ಮನಲ್ಲ. ತುಳು ಭಾಷೆಯಲ್ಲಿ ಜನಜನಿತವಾಗಿರುವ 'ಬೆರ್ಮೆರ್' ಎನ್ನುವ ಮೂಲ ದೈವವಾಗಿದೆ. ಹಿರಿಯಡ್ಕ, ಮಾರಣಕಟ್ಟೆ, ಮಂದರ್ತಿ, ಪಡುಬಿದ್ರಿ -ಇಲ್ಲಿನ ಗುಡಿಗಳಲ್ಲಿ ಡಕ್ಕೆಬಲಿ-ಬ್ರಹ್ಮಮಂಡಲಗಳು ನಡೆಯುತ್ತವೆ. ಪಡು ಬಿದ್ರಿಯ ಬ್ರಹ್ಮಸ್ಥಾನದಲ್ಲಿ ಎರಡು ವರ್ಷಗಳಿಗೊಮ್ಮೆ ಬ್ರಹ್ಮಮಂಡಲ ನಡೆಯುತ್ತದೆ. ಇಲ್ಲಿನ ಆಲಡೆಯಲ್ಲಿ ಉಳಿದ ದೈವಗಳೊಂದಿಗೆ ಖಡ್ಗೇಶ್ವರಿಯನ್ನು ಆರಾಧಿಸುತ್ತಾರೆ.

ಪಡುಬಿದ್ರಿಯ ಬ್ರಹ್ಮಸ್ಥಾನದ ವಿಶೇಷತೆಯೆಂದರೆ ಇಲ್ಲಿ ಕಟ್ಟಡಗಳಿಲ್ಲ, ಕಾಣಿಕೆಯ ಡಬ್ಬಿಯಿಲ್ಲ ಬ್ರಹ್ಮಮಂಡಲಕ್ಕೆ ವನವನ್ನು ಹೂಗಳಿಂದ ಅಲಂಕರಿಸುತ್ತಾರೆ. ದೀಪ, ದೊಂದಿ ಗಳ ಬೆಳಕಿನಲ್ಲಿಯೇ ಬ್ರಹ್ಮಮಂಡಲ ನಡೆಯುತ್ತದೆ. ಭಕ್ತರಿಗೆ ಆಸನಗಳ ವ್ಯವಸ್ಥೆಯೂ ಇಲ್ಲಿಲ್ಲ. ಇದೇ ಕ್ರಮವು ಈಗಲೂ ನಡೆದುಕೊಂಡು ಬರುತ್ತಿದೆ. ಇಲ್ಲಿ ಬ್ರಹ್ಮಮಂಡಲದ ದಿನ ವೈದ್ಯರು ಬ್ರಹ್ಮನಮುಖ-ನಾಗನ ಚಿತ್ರಗಳನ್ನು ಪಂಚವರ್ಣದಲ್ಲಿ ಚಿತ್ರಿಸುತ್ತಾರೆ. ಆಯತಾಕಾರ ದೊಳಗೆ ಕೆಂಪು ಬಣ್ಣದ ಹಿನ್ನೆಲೆಯಲ್ಲಿ ಚಿತ್ರವನ್ನು ಬರೆಯುತ್ತಾರೆ. ಸುತ್ತಲೂ ಬಿಳಿ ನಂತರ ಹಸಿರು ಬಣ್ಣದ ಹೊರ ಆವರಣವನ್ನು ರಚಿಸುತ್ತಾರೆ. ನಂತರ ಮಂಡಲಕ್ಕೆ ಅಲಂಕಾರ ಮಾಡಿ ಪೂಜೆಯಾಗುತ್ತದೆ.

ಆ ಬಳಿಕ ಬನದ ಬಿಳಿ ಪಾತ್ರಿಯ ದರ್ಶನ(ತೂಳು)ವಾಗಿ ಅಲ್ಲಿಂದ ಮಂಡಲ ನಡೆವ ಜಾಗಕ್ಕೆ ಬರುತ್ತಾರೆ. ವೈದ್ಯರು ಡಕ್ಕೆ ಬಡಿದು ಮಂಡಲದ ಹಾಡುಗಳನ್ನು ಹಾಡಿ ಕುಣಿಯು ತ್ತಾರೆ. ಪಾತ್ರಿಗಳ ಕೈಯಲ್ಲಿ ಚಿಕ್ಕದೊಂದಿ ಇರುವುದು ಇಲ್ಲಿನ ವೈಶಿಷ್ಟ್ಯ. ನಡುನಡುವೆ ಪಾತ್ರಿಗಳ ಆವೇಶ ಪರಾಕಾಷ್ಠೆಗೆ ತಲುಪಿ ಅವರು ನೆಲದ ಮೇಲೆ ಹೊರಳಾಡುವುದೂ ಉಂಟು.

ಡಕ್ಕೆಯವರ ಕುಣಿತ ನಾಗಮಂಡಲದ ಕುಣಿತವನ್ನು ಹೋಲುತ್ತದೆ. ಆವೇಶ-ನರ್ತನಗಳೆಲ್ಲಾ ಮುಗಿದ ನಂತರ ಹಾಲಾವಳಿ-ಪ್ರಸಾದ ವಿತರಣೆಯಾಗುತ್ತದೆ.

## ನಾಗಮಂಡಲ

ನರ್ತನದ ಮೂಲಕ ದೈವ ದೇವರುಗಳ ಆರಾಧನೆ ಪ್ರಾಚೀನ ಕಾಲದಿಂದಲು ನಡೆದು ಬಂದಿದೆ. 'ನಲಿಯುವುದು ಒಲಿಸಿಕೊಳ್ಳುವುದಕ್ಕೆ ಹತ್ತಿರದ ದಾರಿಯಾಗಿದೆ'. ನಾಗನ ಪ್ರೀತ್ಯರ್ಥ ವಾಗಿ ಮೂಲ ನಿವಾಸಿಗಳು (ದ್ರಾವಿಡರು) ನಡೆಸುತ್ತಿದ್ದ ನಾಗನೃತ್ಯ ಆರ್ಯರ ಪ್ರಭಾವ ದಿಂದ ಹಲವಾರು ಬದಲಾವಣೆಗಳನ್ನು ಕಂಡಿತ್ತು. ೭-ಲನೆಯ ಶತಮಾನದಲ್ಲಿ ಈ ಪ್ರದೇಶಕ್ಕೆ ಬ್ರಾಹ್ಮಣರು ಬಂದಾಗ ನಾಗನೃತ್ಯ ಸಂಪೂರ್ಣವಾಗಿ ಬ್ರಾಹ್ಮಣರ ವಶವಾಯಿತು. ಭೂತ-ದೈವಗಳ ನರ್ತನ ಇತರ ಜನವರ್ಗಗಳ ಪಾಲಾಯಿತು.

ನಾಗಮಂಡಲದ ನಾಗಪಾತ್ರಿ ಹಾಗೂ ಅರ್ಧನಾರಿವೇಷದ ವೈದ್ಯರು ಅನುಕ್ರಮವಾಗಿ ಪುರುಷ ಮತ್ತು ಪ್ರಕೃತಿಯನ್ನು ಪ್ರತಿನಿಧಿಸುತ್ತಾರೆ. ಅಂದರೆ ಇದು ಹೆಣ್ಣು ಗಂಡನ್ನು ಒಲಿಸುವ ನೃತ್ಯರೂಪ. ಮರಿ ಮೊಟ್ಟೆ ಸಹಿತವಾದ ನಾಗ ಸಂತಾನ ಸಮೃದ್ಧಿಯ ಪ್ರತೀಕವಾಗಿದ್ದು, ಈ ಹಿನ್ನೆಲೆಯಲ್ಲಿ ನಾಗಮಂಡಲಕ್ಕೆ ಪುಷ್ಟಿ ದೊರೆತಿದೆ. ಪುರುಷ ಪಾತ್ರಿಯ ಜತೆಗೆ ಸ್ತ್ರೀಯರಿಗಿದ್ದ ಪಾತ್ರವನ್ನು ಕಸಿಯುವಾಗ ಅರ್ಧನಾರಿಯ ಅವತಾರವಾಗಿರಬಹುದೆಂದು ಭಾವಿಸಲಾಗಿದೆ.

ಗೆಜ್ಜೆ ಕಟ್ಟಿ ಕುಣಿಯುವುದು ಬ್ರಾಹ್ಮಣರಿಗೆ ನಿಷಿದ್ಧವೆಂದು ಭಾವಿಸಿದ್ದ ಕಾರಣ ಅರ್ಧನಾರಿ ವೇಷ ಹಾಗೂ ಹಿಮ್ಮೇಳ ಒದಗಿಸುವ ವೈದ್ಯರನ್ನು ಬ್ರಾಹ್ಮಣರ ಒಂದು ಪ್ರಭೇದವೆಂದು ಪರಿಗಣಿಸಿ ಅವರಿಗೆ ಆ ಬಗ್ಗೆ ವಿನಾಯಿತಿ ನೀಡಲಾಗಿದೆ.

ಅದೇರೀತಿ ಬ್ರಾಹ್ಮಣನಾದವನು ಚರ್ಮವಾದ್ಯವನ್ನು ನುಡಿಸುವುದು ನಿಷಿದ್ಧವಂತೆ. ಆದರೆ ನಾಗಮಂಡಲ/ಡಕ್ಕೆ ಬಲಿಗಳಲ್ಲಿ ವೈದ್ಯರು ಡಕ್ಕೆ ನುಡಿಸುತ್ತಾರಷ್ಟೆ - ಇದರ ಸಮರ್ಥನೆ ಗಾಗಿ ವೈದ್ಯರು ತಮ್ಮ ಡಕ್ಕೆ ಶಿವನ ಡಮರು ಅಲ್ಲದೆ ಬೇರೆ ಅಲ್ಲ. ಸಾಕ್ಷಾತ್ ಶಿವನೇ ಮಂಡಲ ಬರೆದು ಮಂಗಳಾಂತ್ಯದವರೆಗೆ ಡಮರು ಬಾರಿಸುವ ಅಧಿಕಾರವನ್ನು ಬ್ರಾಹ್ಮಣನಿಗೆ ನೀಡಿದನೆಂದು -ವೈದ್ಯರು ಹೇಳುವ ಪುರಾಣ ಕತೆಯಲ್ಲಿದೆ.

ನಾಗಮಂಡಲ/ಡಕ್ಕೆ ಬಲಿಯ ಪ್ರಾಚೀನತೆಯನ್ನು ಗಮನಿಸುವಾಗ ಬಾರಕೂರಿನಲ್ಲಿ ದೊರೆತ ಕ್ರಿ.ಶ.೧೪೫೮ ರ ಒಂದು ಶಾಸನದಲ್ಲಿ ಡಕ್ಕೆ ಬಲಿಯ ಉಲ್ಲೇಖವಿದೆ. ಕ್ರಿ.ಶ.೧೪೦೨ ರ ಒಂದು ಶಾಸನದಲ್ಲಿ ನಾಗ ಮಂಡಲ ಮಾಡಿಸಿದಾತನಿಗೆ 'ಮಂಡಲ ಭಂಡಾರಿ' ಎಂದು ಕರೆಯಲಾಗಿದೆ. ನಂದಳಿಕೆಯಲ್ಲಿ ದೊರೆತ ೧೩ನೆಯ ಶತಮಾನದ ನಾಗಶಿಲೆಯಲ್ಲಿ ನಾಗಮಂಡಲದ ವೈಶಿಷ್ಟ್ಯವಾದ ಗಂಟಿನ ಸರ್ಪದ ಕೆತ್ತನೆಯಿದೆ.

ನಾಗಮಂಡಲವು ದಕ್ಷಿಣ ಕನ್ನಡ ಕರಾವಳಿಯಲ್ಲಿ' ಅತಿ ಹೆಚ್ಚು ನಡೆಯುವ ನಾಗಾರಾಧನಾ ರಂಗಕಲೆಯಾಗಿದೆ. ಇದು ಯಕ್ಷಗಾನ ಕಲೆಗೆ ಸಮಕಾಲೀನವಾಗಿ ಬೆಳೆದಿದ್ದು ನಾಟ್ಯಾಂಶಗಳು



ನಾಗಮಂಡಲದ ಕುಣಿತದ ದೃಶ್ಯ



ನಾಗಪಾತ್ರಿ ಮತ್ತು ಅರ್ಧನಾರಿ ಕುಣಿತ

ಒಂದಕ್ಕೊಂದು ಪೂರಕವಾಗಿವೆ. ಬ್ರಾಹ್ಮಣ ಅರ್ಚಕ, ಬ್ರಾಹ್ಮಣ ನಾಗಪಾತ್ರಿ, ಬ್ರಾಹ್ಮಣ ನಾಗನರ್ತಕರ ಕೂಡುವಿಕೆಯಲ್ಲಿ, ಮಂತ್ರೋಕ್ತ ಹೋಮ ಹವನಾದಿಗಳ ಹಿನ್ನೆಲೆಯಲ್ಲಿ ನಾಗಮಂಡಲದ ವಿಶಿಷ್ಟ ಆರಾಧನೆಯು ನಡೆಯುತ್ತದೆ.

ನಾಗಮಂಡಲ ನೃತ್ಯಕ್ಕೆ ಪೂರ್ವಭಾವಿಯಾಗಿ ಹಿಟ್ಟಿನ ನಾಗನ ಸಂಸ್ಕಾರ, ವಟುವಾರಾಧನೆ, ಆಶ್ಲೇಷಾಬಲಿ, ಕಲಶಾಭಿಷೇಕ, ಪ್ರಧಾನ ಹೋಮ, ಗಣಹೋಮ, ಮಂಟಪಸಂಸ್ಕಾರ, ದಾನಾದಿಗಳು ನಡೆಯುತ್ತವೆ. ಜಾತಿಮತ ಭೇದವಿಲ್ಲದೆ ಸರ್ವರಿಗೂ ಅನ್ನ ಸಂತರ್ಪಣೆ ನಡೆಯುತ್ತದೆ. ನಾಲ್ಕು ಗಂಟಿನ ನಾಗಮಂಡಲಕ್ಕೆ ನಾಲ್ಕು ಸಾವಿರ ಜನರಿಗೆ, ಎಂಟಕ್ಕೆ ಎಂಟು ಸಾವಿರ ಹಾಗೂ ಪೂರ್ಣ ಮಂಡಲಕ್ಕೆ ೧೬ ಸಾವಿರ ಜನರಿಗೆ ಕಡಿಮೆಯಿಲ್ಲದಂತೆ ಅನ್ನ ಸಂತರ್ಪಣೆ ನಡೆಯಬೇಕೆಂದು ಹೇಳುತ್ತಾರೆ. ಅನ್ನದಾನ ಸಾಕಷ್ಟು ನಡೆಯದಿದ್ದರೆ ಆ ಸಂಬಂಧ ವಾಗಿ ಮತ್ತೆ ಪ್ರಾಯಶ್ಚಿತ್ತ ಎದುರಿಸಬೇಕಾಗುತ್ತದೆ.

ಈ ಎಲ್ಲಾ ಕಾರಣಗಳಿಂದ ನಾಗಮಂಡಲ ನಡೆಸಲು ಶ್ರೀಮಂತರಿಗೆ ಮಾತ್ರ ಸಾಧ್ಯ ವಾಗುತ್ತದೆ. ಕನಿಷ್ಟ ನಾಲ್ಕು ಲಕ್ಷರೂಪಾಯಿಗಳ ಖರ್ಚು ಬರುತ್ತದೆ. ಹಾಗಾಗಿ ಮಧ್ಯಮ ವರ್ಗದ ಜನರು ನಾಗನಿಗೆ ಹೆಚ್ಚು ಸಲ್ಲಿಸುವ ಪೂಜೆಯೆಂದರೆ ಆಶ್ಲೇಷಾಬಲಿ ಸೇವೆ. ಮಧ್ಯಮ ವರ್ಗದಲ್ಲೂ ಸಾರ್ವಜನಿಕರ ಸಹಕಾರದಿಂದ ನಾಗಮಂಡಲ ಸೇವೆ ನಡೆಯುವುದಿದೆ.

**ಮಂಡಲ ಚಿತ್ತಾರ :** ನಾಗಮಂಡಲ/ಡಕ್ಕೆಬಲಿಗಳ ಮಂಡಲ ಚಿತ್ತಾರದಲ್ಲಿ ಕೆಲವು ಬದಲಾವಣೆಗಳನ್ನು ನಾವು ಕಾಣಬಹುದು. ಡಕ್ಕೆಬಲಿ ಎಂಬ ಮಾತಿನಲ್ಲಿ ಪ್ರಾಣಿ ಬಲಿ ಎಂಬ ಅರ್ಥವೂ ಸೇರಿರಬಹುದು. ಅದಕ್ಕಾಗಿ ಡಕ್ಕೆಬಲಿ ಮಂಡಲದ ಹಿನ್ನೆಲೆಯಲ್ಲಿ ರಕ್ತ ಸೂಚಕವಾದ ಕೆಂಪು ಬಣ್ಣವನ್ನೇ ಹಾಕುತ್ತಾರೆ. ಆಯತಾಕಾರ ಮಂಡಲದ ಎಡಬದಿಯಲ್ಲಿ ಕೈಕಾಲುಗಳಿಲ್ಲದ ತಲೆಯ ಚಿತ್ರ ಬ್ರಹ್ಮಯಕ್ಷನನ್ನು ರೂಪಿಸುತ್ತಾರೆ.

ಬ್ರಹ್ಮನ ದೇಹಕ್ಕೆ ಬಿಳಿ ಬಣ್ಣವನ್ನು ಹಾಕಿ ಹಳದಿ ಬಣ್ಣದ ಸುತ್ತನ್ನು ಕೊಡುತ್ತಾರೆ. ಕಣ್ಣು, ಬಾಯಿಯನ್ನು ಕೆಂಪುಬಣ್ಣದಲ್ಲಿ ರೂಪಿಸುತ್ತಾರೆ. ಬಲಬದಿಯ ಮೇಲ್ಭಾಗದಲ್ಲಿ ಗಣಪತಿ ನಕ್ಷೆಯನ್ನು ಕೆಂಪು, ಹಳದಿ ಬಣ್ಣಗಳಿಂದ ಚಿತ್ರಿಸುತ್ತಾರೆ. ಇದರಲ್ಲಿ ತ್ರಿಕೋನವನ್ನು ಒಂದು ಮೇಲ್ಮುಖವಾಗಿಯೂ ಇನ್ನೊಂದನ್ನು ಕೆಳಮುಖವಾಗಿಯೂ ಚಿತ್ರಿಸುತ್ತಾರೆ.

ಇದು 'ಸ್ತ್ರೀ ಪುರುಷರ ಮಿಲನದ ಸಂಕೇತ' ಎಂಬ ಅಭಿಪ್ರಾಯವಿದೆ. ಬಲಬದಿ ಕೆಳಗೆ ನಾಗರ ಹಾವನ್ನು ಚಿತ್ರಿಸುತ್ತಾರೆ. ನಾಗನ ಹೆಡೆಯನ್ನು ಹೋಲುವ ಮತ್ತೊಂದು ಆಕೃತಿಯನ್ನು ಅದರ ಹತ್ತಿರ ಬಿಳಿ, ಹಳದಿ ಬಣ್ಣದಲ್ಲಿ ಚಿತ್ರಿಸುತ್ತಾರೆ. ಇದನ್ನು ನಾಗಯಕ್ಷಿ ಎನ್ನುತ್ತಾರೆ. ಮಂಡಲದ ಹೊರ ಆವರಣವನ್ನು ಬಿಳಿ ಮತ್ತು ಹಸಿರು ಬಣ್ಣದಿಂದ ಚಿತ್ರಿಸುತ್ತಾರೆ.

ನಾಗಮಂಡಲ ಸುಮಾರು ಇಪ್ಪತ್ನಾಲ್ಕು ತಾಸುಗಳ ಧಾರ್ಮಿಕ ವಿಧಿಯಾದರೂ ಅದರ ಹಿಂದೆ ಭಾರೀ ಸಿದ್ಧತೆ ಅವಶ್ಯವಿರುತ್ತದೆ. ಸಾವಿರಾರು ಮಂದಿ ಸೇರಿ ನಡೆಸುವ ಕಾರ್ಯವಾದ

ಕಾರಣ ವಿಶಾಲವಾದ ಸಮತಟ್ಟುಗೊಳಿಸಿದ ಪ್ರದೇಶದಲ್ಲಿ ದೊಡ್ಡ ಚಪ್ಪರ ಹಾಕುತ್ತಾರೆ. ಚಪ್ಪರದ ಮಧ್ಯದಲ್ಲಿ ಎತ್ತರವಾದ ವೇದಿಕೆ ಸಿದ್ಧಗೊಳಿಸಿ ಅದಕ್ಕೆ ಅಂತರ-ಅಂತರ ಚಪ್ಪರ ಹಾಕುತ್ತಾರೆ.

ಇದು ನಾಗಮಂಡಲ ನಡೆಯುವ ವೇದಿಕೆಯಾಗಿರುತ್ತದೆ. ಚಪ್ಪರ ತೆಂಗಿನಗರಿಯದಾದರೂ ಅದಕ್ಕೆ ಕೆಳಬದಿಯಲ್ಲಿ ಬಿಳಿ-ಕೆಂಪು ಬಣ್ಣದ ಬಟ್ಟೆಯ ಹಾಸು ಹಾಕುತ್ತಾರೆ. ಕಾಗದದ, ಬೇಗಡೆಯ ಬಗೆಬಗೆಯ ಹೂಗಳು, ವಿವಿಧ ಬಣ್ಣದ ಪುಷ್ಪಗಳ ಮಾಲೆಯಿಂದ ಅಲಂಕಾರ ಮಾಡುತ್ತಾರೆ. ವೇದಿಕೆಯ ಕಂಬಗಳನ್ನು ಸುರಿದ ಅಡಕೆ ಹಾರಗಳಿಂದ ಶೃಂಗರಿಸುತ್ತಾರೆ. ಕಂಬಗಳ ಮಧ್ಯಕ್ಕೆ ವೃತ್ತಾಕಾರದಲ್ಲಿ ಸೀಯಾಳಗಳನ್ನು ಕಟ್ಟುತ್ತಾರೆ. ವಿವಿಧ ಫಲವಸ್ತುಗಳನ್ನು -ಬಾಳೆಗೊನೆಗಳನ್ನು ಸಿರಿಒಲಿಗಳನ್ನು ಅಲಂಕಾರವಾಗಿ ಕಟ್ಟುತ್ತಾರೆ.

ಹೀಗೆ ಚಪ್ಪರಕ್ಕೆ ಎಷ್ಟು ಅಲಂಕಾರ ಮಾಡಿದರೂ ಹೆಚ್ಚಲ್ಲ. ನಾಗ ಸಂಪತ್ತು ಸಮೃದ್ಧಿ ಗಳನ್ನು ಕೊಡುವ ದೇವರಾದ್ದರಿಂದ ಅಲಂಕಾರ ಮಾಡಿದಷ್ಟೂ ಅಧಿಕ ಫಲ ಎನ್ನುವ ನಂಬಿಕೆ ಕೂಡಾ ಇದೆ. ವೇದಿಕೆಗೆ-ಚಪ್ಪರಕ್ಕೆ ಬಣ್ಣ ಬಣ್ಣದ ವಿದ್ಯುದ್ದೀಪಗಳಿಂದ-ಚಲಿಸುವ ದೀಪ ಗಳಿಂದ ಶೃಂಗರಿಸಿ ಭವ್ಯಗೊಳಿಸುತ್ತಾರೆ. ವೇದಿಕೆಯ ಎಂಟುದಿಕ್ಕುಗಳಲ್ಲಿ ಅಷ್ಟ ದಿಕ್ಪಾಲಕರ ಪ್ರತೀಕಗಳನ್ನು ತೂಗಿಬಿಡುತ್ತಾರೆ. ಇಷ್ಟಾದ ಬಳಿಕ ವೈದಿಕರು ಮಂಟಪ ಸಂಸ್ಕಾರ ಗಳನ್ನು, ಹೋಮವನ್ನು ಮಾಡಿ ವೇದಿಕೆಯನ್ನು ಶುದ್ಧಗೊಳಿಸುತ್ತಾರೆ. ಇದಾದ ನಂತರ ವೈದ್ಯರು ಮಂಡಲ ರಚನೆಗೆ ತೊಡಗುತ್ತಾರೆ.

ನಾಗಮಂಡಲದ ಸ್ವರೂಪಕ್ಕನುಸರಿಸಿ ವೈದ್ಯರು ಬಾಳೆಹಂಬೆಯ ಅಳತೆ ಪಟ್ಟಿಯಿಂದ ಮಂಡಲದ ಹೊರ ಚೌಕಟ್ಟನ್ನು ಹಳದಿ ಬಣ್ಣದ ಹುಡಿಯಿಂದ ರೇಖಿಸುತ್ತಾರೆ. ಮಂಡಲದ ಮಧ್ಯಭಾಗದಲ್ಲಿ ಗಣಪತಿ ನಕ್ಷೆಯನ್ನು ಬರೆದು ದೇವತಾ ಪ್ರಾರ್ಥನೆಯನ್ನು ಮಾಡುತ್ತಾನೆ. ಮಂಡಲ ನಡೆಸುವ ಯಜಮಾನ, ಪುರೋಹಿತರು ಹಾಗೂ ವೈದ್ಯರ ಸಮಕ್ಷಮದಲ್ಲಿ ಮಂಡಲ ರಚನೆಗೆ ಯಾವುದೇ ಅಡೆತಡೆ ಬಾರದಂತೆ ಪ್ರಾರ್ಥನೆ ಸಲ್ಲಿಸಲಾಗುತ್ತದೆ.

ಪೂರ್ಣ ಮಂಡಲ ರಚನೆಗೆ ೬ ಮಂದಿಗೆ ೬ ಗಂಟೆಗಳಷ್ಟು ಕಾಲ ತಗಲುತ್ತದೆ. ಮಂಡಲದ ಪ್ರಮಾಣಕ್ಕನುಸಾರವಾಗಿ ಸುಮಾರು ಇಪ್ಪತ್ತು ಅಡಿ ವ್ಯಾಸದ ಸ್ಥಳದಲ್ಲಿ ಪಂಚವರ್ಣದ ಹುಡಿಗಳಿಂದ ಚಿತ್ತಾರ ಬರೆಯುತ್ತಾರೆ. ಏಳು ಹೆಡೆಯ ಸರ್ಪದ ಭೀಮಕಮನೀಯ ಆಕೃತಿ ಯನ್ನು ಸುರುಳಿ ಸುರುಳಿಯಾಗಿ ಪವಿತ್ರಗಂಟುಗಳೊಂದಿಗೆ ಮೊದಲು ನಕ್ಷೆಯನ್ನು ಹಾಕು ತ್ತಾರೆ.

ಉಳಿದವರು ಬಣ್ಣವನ್ನು ತುಂಬಿಸುತ್ತಾರೆ. ನಾಗಮಂಡಲಕ್ಕೆ ಬಳಸುವ ಬಣ್ಣಗಳು ಹೀಗಿವೆ. ಅರಶಿಣ ಬೇರಿನ ಹುಡಿಯಿಂದ ಹಳದಿ ಬಣ್ಣ, ಅರಶಿಣ ಮತ್ತು ಸುಣ್ಣದ ಹುಡಿಯ ಮಿಶ್ರಣದಿಂದ ಕೆಂಪು ಬಣ್ಣ, ಜಂಗಮನ ಎಲೆಯ ಹುಡಿಯಿಂದ ಹಸಿರು ಬಣ್ಣವನ್ನೂ,

ಭತ್ತದ ಹೊಟ್ಟನ್ನು ಕರಿಕುಗೊಳಿಸಿದ ಹುಡಿಯಿಂದ ಕಪ್ಪು ಬಣ್ಣವನ್ನೂ, ಬೆಳ್ತಿಗೆ ಅಕ್ಕಿಯ ಹುಡಿಯಿಂದ ಬಿಳಿಬಣ್ಣವನ್ನು ತಯಾರಿಸಿ ಬಳಸುತ್ತಾರೆ.

ನಾಗನ ದೇಹದ ಬಣ್ಣ ಹಳದಿ ಮತ್ತು ಹಿನ್ನೆಲೆ ಅವಕಾಶ ಕೆಂಪಾಗಿರುತ್ತದೆ. ದೇಹದ ಹಳದಿಬಣ್ಣದ ಮಧ್ಯದಲ್ಲಿ ಕೆಂಪುಬಣ್ಣದಿಂದ ನಾಡಿರೇಖೆಯನ್ನು ಎಳೆಯುತ್ತಾರೆ. ಹೊರಬದಿ ಕಪ್ಪು ಬಣ್ಣದಿಂದ ಜೀವರೇಖೆ ಅಥವಾ ಆಧಾರ ರೇಖೆಯನ್ನು ಎಳೆಯುತ್ತಾರೆ. ಇದನ್ನು ಒಬ್ಬನೇ ಮೊದಲಿನಿಂದ ಕೊನೆಯವರೆಗೆ ಎಳೆಯುತ್ತಾನೆ. ಕಪ್ಪು ಜೀವರೇಖೆಯ ಹೊರಗೆ ಬಿಳಿಬಣ್ಣದಿಂದ ಚುಕ್ಕಿ ಚುಕ್ಕಿಯಾಕಾರದಲ್ಲಿ ನಾಗನಿಗೆ ಕಾಲು ಬಿಡಿಸುತ್ತಾರೆ. ನಾಗನ ಆಕೃತಿಯ ನಡುನಡುವೆ ಬಿಳಿಹುಡಿಯಿಂದ 'ಮರಿಮೊಟ್ಟೆ'ಗಳನ್ನು ರೂಪಿಸುತ್ತಾರೆ.

ಮೊದಲು ಹಸಿರು ಬಣ್ಣದ ಹುಡಿ, ಅದರ ಮೇಲೆ ಬಿಳಿ, ನಂತರ ಹಳದಿ, ಕೆಂಪು, ಕಪ್ಪು ಹೀಗೆ ಪಂಚವರ್ಣಗಳಿಂದ ಹೆಡೆಯ ಉಬ್ಬನ್ನು ರಚಿಸುತ್ತಾರೆ. ಹೆಡೆಯ ಕೆಳಭಾಗದಲ್ಲಿ ವಿಷ್ಣು ಪಾದವನ್ನು 'S' ಆಕಾರದಲ್ಲಿ ರೇಖಿಸುತ್ತಾರೆ. ಹೆಡೆಯಿಂದ ಮೇಲೆ-ಪ್ರಭಾವಳಿಯ ಕೆಳಗೆ ಬ್ರಹ್ಮನ ಮುಖವನ್ನು ಚಿತ್ರಿಸುತ್ತಾರೆ. (ಇದು ನಾಗ ಬ್ರಹ್ಮ ಮಂಡಲಗಳಲ್ಲಿ ಹೆಚ್ಚು) ನಾಗನ ಪಕ್ಕದಲ್ಲಿ ಮರಿನಾಗಗಳನ್ನು, ಬ್ರಹ್ಮ, ಯಕ್ಷ, ಗಣಪತಿಯರನ್ನು ಬರೆಯುತ್ತಾರೆ.

ಮಂಡಲದ ಸುತ್ತ ಸುಮಾರು ಮೂರು ಇಂಚು ಅಗಲಕ್ಕೆ ಬಿಳಿ ಪಟ್ಟಿಹಾಕಿ ಅದರಲ್ಲಿ ದ್ರಾಕ್ಷಿಯ ಬಳ್ಳಿ, ಎಲೆ ಇತ್ಯಾದಿಗಳನ್ನು ಕಪ್ಪು ಬಣ್ಣದಲ್ಲಿ ಚಿತ್ರಿಸುತ್ತಾರೆ. ಜಂಗಮನ ಸೊಪ್ಪಿನ ಹಸಿರು ಪುಡಿಯಿಂದ ದಂಡೆಕಟ್ಟಿ, ಅದರ ಮೇಲೆ ಸ್ವಸ್ತಿಕವನ್ನು ಇರಿಸುತ್ತಾರೆ. ಚಿತ್ತಾರದ ಪಕ್ಕದಲ್ಲೇ ಸುತ್ತಲೂ ಅಕ್ಕಿ, ತೆಂಗಿನಕಾಯಿ, ಹಿಂಗಾರ, ಸೀಯಾಳ, ಅಡಿಕೆ, ಬಾಳೆಹಣ್ಣು, ಫಲವಸ್ತುಗಳ ರಾಶಿಯನ್ನು ಇರಿಸುತ್ತಾರೆ. ಪವಿತ್ರಗಂಟಿಗೆ ಒಂದರಂತೆ ಮಂಡಲದ ಸುತ್ತ ಎತ್ತರದ ಕಾಲು ದೀಪಗಳನ್ನು ಬೆಳಗಿಸುತ್ತಾರೆ. ಮರಿಮೊಟ್ಟೆಯ ಮೇಲೆ ಸೇವಂತಿಗೆ ಹೂಗಳನ್ನೂ ಹೆಡೆಯ ಮೇಲೆ ಬಂಗಾರವನ್ನು ಇಡುವುದು ಸಂಪ್ರದಾಯವಾಗಿದೆ. ನಾಗಮಂಡಲ ರಚನೆಗೆ ಸುಮಾರು ೨೦-೨೫ ಕೆ.ಜಿ. ಬಣ್ಣದ ಹುಡಿಗಳು ಬಳಕೆಯಾಗುತ್ತವೆ.

ವಾದ್ಯಗಳು : ನಾಗಮಂಡಲ/ಡಕ್ಕೆಬಲಿಯಲ್ಲಿ ಬಳಸುವ ವಾದ್ಯಗಳೆಂದರೆ ಕಂಚಿನ ಡಕ್ಕೆ, ಮರದ ಡಕ್ಕೆ, ತಾಳ, ಚಕ್ರತಾಳ ಇತ್ಯಾದಿ. ಅರ್ಧನಾರಿವೇಷ ತೊಟ್ಟ ವೈದ್ಯನ ಕೈಯಲ್ಲಿರುವುದು ಕಂಚಿನ ಡಕ್ಕೆ, ಕುಣಿಸುವ ವೈದ್ಯನ ಕೈಯಲ್ಲಿರುವುದು ಮರದ ಡಕ್ಕೆ, ಜೊತೆಗಿರುವ ಇಬ್ಬರು ಮೇಳದವರ ಕೈಯಲ್ಲಿ ತಾಳ ಮತ್ತು ಚಕ್ರತಾಳಗಳಿರುತ್ತವೆ. ಡಕ್ಕೆ ಶಿವನ ಕೈಯಲ್ಲಿರುವ ಡಮರುವಿನ ಸಂಸ್ಕೃತೀಕರಣಗೊಂಡ ರೂಪವಾಗಿದೆ.

ಖದಿರ ಅಥವಾ ಕಾಚು ಮರದ ಕಳನಿಗೆ ಮತ್ತು ಆಡಿನ ಜಠರಕೋಶದ ಚರ್ಮವನ್ನು ಡಕ್ಕೆಯಲ್ಲಿ ಬಳಸಲಾಗುವುದು. ಈ ಎರಡು ವಿಧದ ಡಕ್ಕೆಗಳು ವಿಧವಿಧವಾದ ನಾದವನ್ನು ಹೊಮ್ಮಿಸಬಲ್ಲವು. ಡಕ್ಕೆಯಲ್ಲಿ ಮದ್ದಳೆಯಂತೆ ಎಲ್ಲಾ ನುಡಿತಗಳು ಸ್ಪಷ್ಟವಾಗಿ ಕಂಡು

ಬಾರದಿದ್ದರೂ ತಾಳಗಳ ದಸ್ತುಗಳು, ಬಿಡ್ತಿಗೆಗಳು, ಚಾಲುಗಳು ಯಕ್ಷಗಾನದಲ್ಲಿದ್ದಂತೆಯೇ ಇವೆ.

ಚಕ್ರತಾಳದ ಸ್ವರವು ಡಕ್ಕೆಯೊಂದಿಗೆ ಮೇಳ ಗೊಂಡು ವಿಶೇಷ ನಾದ ತರಂಗಿತತೆಯನ್ನು ಸೃಷ್ಟಿಮಾಡುತ್ತವೆ. ಈ ಸಂಗೀತವು ನಾಗಮಂಡಲಕ್ಕೆ ದೇವತ್ವವನ್ನು ನೀಡುತ್ತದೆ. ಮಧ್ಯೆ ಮಧ್ಯೆ ನುಡಿಸುವ ನಾಗಸ್ವರ ವಾದ್ಯ, ಕೊಂಬು ಕಹಳೆಗಳು, ಚೆಂಡೆ, ಡೋಲು, ಬ್ಯಾಂಡು ವಾದ್ಯದ ಧ್ವನಿಗಳು ಒಟ್ಟಾಗಿ ನಾಗಮಂಡಲಕ್ಕೆ ಗಾಂಭೀರ್ಯವನ್ನು ನೀಡುತ್ತದೆ.

### ಕುಣಿತ

ನಾಗಮಂಡಲ ಚಿತ್ತಾರಗಳ ಹೊರಸುತ್ತಿನಲ್ಲಿ ವೈದ್ಯರು ಪ್ರದರ್ಶಿಸುವ ಕುಣಿತವು ಸುಂದರವೂ, ತರಂಗಬದ್ಧವೂ, ಭಾವರಸ ಪ್ರಧಾನವೂ ಆಗಿರುತ್ತದೆ. ವೈದ್ಯರ ಮೇಳದಲ್ಲಿ ಒಬ್ಬನು ಅರ್ಧನಾರಿ ವೇಷತೊಟ್ಟು ಕೈಯಲ್ಲಿ ಕಂಚಿನ ಡಕ್ಕೆಯನ್ನು ಹಿಡಿದಿರುತ್ತಾನೆ. ಇನ್ನೊಬ್ಬ ಗಾಯಕ ಸಾಮಾನ್ಯ ವೇಷದಲ್ಲಿದ್ದು ಮರದ ಡಕ್ಕೆಯನ್ನು ಹಿಡಿದಿರುತ್ತಾನೆ.

ಮತ್ತಿಬ್ಬರು ಸಾಮಾನ್ಯ ವೇಷದಲ್ಲಿದ್ದು ತಾಳಬಾರಿಸುತ್ತಾರೆ. ಇವರೆಲ್ಲರೂ ಪುರುಷ (ನಾಗಪಾತ್ರಿ) ಸ್ತ್ರೀ (ಅರ್ಧನಾರಿ) ವೇಷಧಾರಿಯರನ್ನು ಹಿಂಬಾಲಿಸುತ್ತಾ ಮಂಡಲಕ್ಕೆ ಸುತ್ತು ಬರುತ್ತಾರೆ.

ವೇಷಭೂಷಣ ಕುರಿತಂತೆ ಹೇಳುವುದಾದರೆ ಅರ್ಧನಾರಿ ವೇಷದ ವೈದ್ಯ ಯಕ್ಷಗಾನ ಬಡಗುತಿಟ್ಟಿನ ಸ್ತ್ರೀ ವೇಷದಂತೆ ಕೆಂಪು ಬಣ್ಣದ ಕೈಮಗ್ಗದ ಚೌಕುಳಿ ಸೀರೆ (ಈಗೀಗ ಜರಿಸೀರೆ ಉಡುತ್ತಾರೆ) ಉಡುತ್ತಾನೆ. ಇದಕ್ಕೆ 'ಕಸೆ ಕಟ್ಟುವುದು' ಎನ್ನುತ್ತಾರೆ.

ಕಾಲಿಗೆ ಪಾಡಗ (ಗೆಜ್ಜೆ), ಎದೆಗೆ ರವಿಕೆ, ಕೊರಳಿಗೆ ಗುಂಡುಸರ, ಸೊಂಟಕ್ಕೆ ಬೆಳ್ಳಿ ಪಟ್ಟಿ, ಕೈಗೆ ಚಿನ್ನದ ಕಡಗ, ತಲೆಗೆ ಜರಿಪಟ್ಟಿ ಸುತ್ತಿದ ರುಮಾಲು, ಅದರ ತುದಿಗೆ 'ಕೋರೆ ಬಂಗಾರ' ಕೈಯಲ್ಲಿ ಕಂಚಿನ ಡಕ್ಕೆ -ಇವಿಷ್ಟು ಅರ್ಧನಾರಿ ವೇಷದ ಉಡುಗೆಗಳು. ಅರ್ಧನಾರಿ ವೇಷಕ್ಕೆ ಎದುರು ನರ್ತಕನಾದ ನಾಗಪಾತ್ರಿಗೆ ವಿಶೇಷ ವೇಷಭೂಷಣಗಳಿಲ್ಲ. ಮೈಗೆ ಕೆಂಪು ಪಟ್ಟೆಕಚ್ಚೆ, ಕೈಗೆ ನಾಗಕಡಗ, ಕೊರಳಿಗೆ ನಾಗಪಣದ ಸರ, ಮೈಗೆ ನಾಮ ಇದರೊಂದಿಗೆ ಕೆದರಿದ ತಲೆಗೂದಲು, ಹಿಂಗಾರದ ಕಾಳು ತುಂಬಿದ ಮುಖ -ಇವಿಷ್ಟು ನಾಗಪಾತ್ರಿಗೆ ಗಂಭೀರತೆಯನ್ನು ತಂದುಕೊಡುತ್ತದೆ.

ನಾಗಮಂಡಲದ ವೈದ್ಯರು ಭರತನಾಟ್ಯ ಶಾಸ್ತ್ರವನ್ನು ಅಭ್ಯಾಸ ಮಾಡದಿದ್ದರೂ ತಲೆ ಮೊರೆಯಿಂದ ಈ ಮಂಡಲದ ಕುಣಿತವನ್ನು ಅಂತಸ್ಥಗೊಳಿಸಿಕೊಂಡು ಬಂದವರು. ತಮ್ಮ ಕುಣಿತದಲ್ಲಿ ಭಾವ ಪ್ರಕಾಶನಕ್ಕಾಗಿ ಹಸ್ತ ಮುದ್ರೆಯನ್ನು ಬಳಸುತ್ತಾರೆ. ಇದರಲ್ಲಿ ಕೆಲವು ಮುದ್ರೆಗಳು ನಾಟ್ಯ ಶಾಸ್ತ್ರದಲ್ಲಿ ಬಳಕೆ ಇರುವಂತಹವುಗಳಾಗಿವೆ. ಅವುಗಳೆಂದರೆ:

೧. ಪತಾಕ ಹಸ್ತ: ನಾಗದೇವತೆಯನ್ನು ಶಾಂತಗೊಳಿಸಲು ಪ್ರಾರ್ಥಿಸುವ ಮುದ್ರೆ ೨. ತ್ರಿಪತಾಕ: ದೇವಾನು ದೇವತೆಗಳ ಪ್ರಾರ್ಥನೆಯ ಸಂದರ್ಭ ೩. ಅರ್ಧ ಚಂದ್ರ: ಪ್ರಾರ್ಥನೆಯ ಸಂದರ್ಭ ೪. ಸೂಚಕ: ಕ್ರೋಧ ಅಸಹನೆಯ ಅಭಿವ್ಯಕ್ತಿಯ ಸಂದರ್ಭ ೫. ಶಿಖರ: ದೈವಕೃಪೆ ಕರುಣೆ ಒಲವಿನ ಹಾರೈಕೆಯ ಸಂದರ್ಭ ೬. ಸರ್ಪಶೀರ್ಷ: ನಾಗನ ಸೂಚಕ ೭. ಅಲ ಪಲ್ಲವಿ ೮. ಪದ್ಮಕೋಶ ೯. ಮೃಗಶೀರ್ಷ ೧೦. ಸಿಂಹಮುಖ ೧೧. ಕವಿತ್ಥ ೧೨. ಅಭಯ ೧೩. ಅಂಗುಲ ೧೪. ಸುಖ ತುಂಡ ೧೫. ಕರ್ತರಿ ಮುಖ ಇತ್ಯಾದಿ.

## ಹಾಡುಗಾರಿಕೆ

ನಾಗಮಂಡಲದ ಸುತ್ತು ತಿರುಗುತ್ತಾ ನೃತ್ಯ ಮಾಡುತ್ತಾ ಹಾಡುವ ಹಾಡು ಗಳನ್ನು ಕನ್ನಡ/ಸಂಸ್ಕೃತ ಶ್ಲೋಕಗಳಿಂದ ಆರಿಸಿಕೊಳ್ಳುತ್ತಾರೆ. ಹಿಮ್ಮೇಳದ ಹಾಡುಗಾರರು ಡಮರುವಿನ ನುಡಿತದೊಂದಿಗೆ ಹಾಡತೊಡಗಿದಾಗ ಅರ್ಧನಾರಿ ವೇಷಧಾರಿ ಅದನ್ನು ಪುನರುಚ್ಚರಿ ಸುತ್ತಾ, ಬಗೆಬಗೆಯ ತಾಳಗತಿಯಲ್ಲಿ ಕುಣಿಯುತ್ತಾ ತನ್ನ ಕೈಯಲ್ಲಿರುವ ಕಂಚಿನ ಢಕ್ಕೆಯನ್ನು ನುಡಿ ಸುತ್ತಾನೆ. ಇಲ್ಲಿ ಹಾಡುವ ಹಾಡಿನ ಭಾಷೆ ಶಿಷ್ಟ ಎನಿಸಿದರೂ ಜಾನಪದದ ಗಡಿಯನ್ನು ಮೀರುವುದಿಲ್ಲ. ಹಾಡಿನಲ್ಲಿ ನಾಗನ ಮೂಲದಿಂದ (ಪಾತಾಳಲೋಕ) ಭೂಲೋಕಕ್ಕೆ ಅದರ ಆಗಮನದಿಂದ ಆರಂಭಗೊಳ್ಳುತ್ತದೆ.

ಸಂಶೋಧಕ ಎ.ವಿ.ನಾವಡರು ವೈದ್ಯರ ನೆರವಿನೊಂದಿಗೆ 'ವೈದ್ಯರ ಹಾಡುಗಳು' ಎನ್ನುವ ಕೃತಿಯನ್ನು ಹೊರತಂದಿದ್ದಾರೆ. ಅದರಲ್ಲಿ ತಿಳಿಸಿರುವಂತೆ ನಾಗಮಂಡಲದಲ್ಲಿ ಹಾಡುವ ಹಾಡುಗಳು ಇಂತಿವೆ: "ಚಿತ್ತಾ ಸಂತೋಷದಲ್ಲಿ ತನ್ನ ಸ್ಥಾನದಲ್ಲಿ ಸ್ಥಿರವಾಗಿ ನಿಲ್ಲುವಂತಹಾ ಮುದ್ದು ಸ್ವಾಮಿ / ಧರಣೆಯೊಳಗೆ ಇರುವ ದುರಾತ್ಮರು / ನಿಮ್ಮ ಮರಿ ಮಟ್ಟೆಯನು ಮಾಡಿಕೊಂಡು / ಗಾನ ಮಾಡುತಲಿದು ಸಂತತಿಯು ನಷ್ಟವಾದ್ದು / ಚಿಂತಿಸಿ ಸುಬ್ರಹ್ಮಣ್ಯ ಕೋವಿಸುತ / ಕೊಳನಾಗನ ಮುಂದೆ ಮಾಡಿಕೊಂಡು / ಇಳೆಯ ಮನುಜರಿಗೆ ಕಾಡುದಿಲ್ರಿ" ಹೀಗೆ ಆರಂಭಗೊಂಡು "ಕದ್ರು ಪುತ್ರರಿಗೆ ಭೋಗ (ಮಂಡಲ) ಕೊಡುವ ತನಕ / ಬಿದ್ದ ಉಪಪತಿ ಶಾಂತವಾಗದೆಂದರು / ರಾತ್ರಿಯೊಳ್ ಮಂಡ್ಲ ಭೋಗಗೊಂಬವನೆ ಬಿಡದೆ ಭಕ್ತರು ಬಂದು ಹುಡಿಸೇವೆ (ಮಂಡಲ) ಮಾಡಲು / ತಡೆಯದಿಷ್ಟಾರ್ಥ ಕೊಡುತಿಹನೆ" ಮುಂತಾಗಿ ಕ್ರೋಧ, ಪ್ರಾಯಶ್ಚಿತ್ತ ಪರಿಹಾರ ಈ ಬಗೆಯಲ್ಲಿ ಹಾಡು ಸಾಗುತ್ತದೆ.

ವೈದ್ಯರ ಹಾಡಿನ ಧಾಟಿ, ಮಟ್ಟುಗಳು ಯಕ್ಷಗಾನದಂತೆಯೇ ಇವೆ. ನಾಟಿ, ಮಧ್ಯಮಾವತಿ, ಸುರುಟಿ, ಅರಭಿ, ಅಠಾಣ, ಕಾನಡ, ಮೋಹನ, ಭೂಪಾಳಿ ಮುಂತಾದ ರಾಗಗಳು ಹೆಚ್ಚಾಗಿ ಬರುತ್ತವೆ. ವಿಲಂಬಗತಿಯಲ್ಲಿ ಆರಂಭಿಸಿ ಅಲ್ಲೇ ಮುಕ್ತಾಯ ಮಾಡಿ, ನಂತರ ಚುರುಕುಗತಿ ಯಲ್ಲಿ ತಾಳದಲ್ಲಿ ಮುಂದುವರಿಯುವುದು. ವೈದ್ಯ ನೃತ್ಯದಲ್ಲಿ ಸಾಮಾನ್ಯ.

ಹಾಡಿನ ಸಾಹಿತ್ಯದ ಶಬ್ದಗಳಿಗನುಗುಣವಾದ ಅಭಿನಯವಲ್ಲದೆ ವೈದ್ಯರು ಅಭಿವ್ಯಕ್ತಿಗೆ ಭರತನಾಟ್ಯದ ಮುದ್ರೆ ಗಳನ್ನೂ ಬಳಸಿಕೊಳ್ಳುತ್ತಾರೆ. ಈಗ ವೈದ್ಯರು ಮಧ್ಯೆ ಮಧ್ಯೆ ದಾಸರ ಪದ್ಯಗಳನ್ನು ಹಾಡುವುದು ಕೇಳಿಬರುತ್ತದೆ. ಕೆಲವು ಹಾಡುಗಳು ಕೃಷ್ಣನಿಗೋ, ಇನ್ನಾವ ದೇವತೆಗೋ ಸಂಬಂಧ ಪಟ್ಟು ಇರುತ್ತದೆ. ಸಾಮಾನ್ಯವಾಗಿ ನಾಗನಿಗೆ, ಬ್ರಹ್ಮನಿಗೆ, ಯಕ್ಷಿಗೆ, ನಂದಿಗೆ, ಕ್ಷೇತ್ರಪಾಲನಿಗೆ, ವೀರಭದ್ರನಿಗೆ, ಬೊಬ್ಬರ್ಯನಿಗೆ, ಹಳೆಯಮ್ಮನಿಗೆ, ಮರ್ಲ್ ಚಿಕ್ಕು ಮುಂತಾದ ದೈವಗಳಿಗೆ ಸಂಬಂಧಿಸಿದ ಹಾಡುಗಳನ್ನು ಡಕ್ಕೆ ಬಲಿಗಳಲ್ಲಿ ಹಾಡುತ್ತಾರೆ.

## ಮಂಡಲ ಸೇವೆ

ನಾಗಮಂಡಲ ನಡೆಯುವ ದಿನ ಸಂಬಂಧಪಟ್ಟ ನಾಗಬನದಲ್ಲಿ ಕಲಶಾಭಿಷೇಕ, ಹೋಮ, ಆಶ್ಲೇಷಾಬಲಿ ಸೇವೆಗಳು ನಡೆದು ನಂತರ ಸಾರ್ವಜನಿಕ ಅನ್ನ ಸಂತರ್ಪಣೆ ಜರಗುತ್ತದೆ. ಸಂಜೆ ಸೂರ್ಯಾಸ್ತವಾದ ಮೇಲೆ ನಾಗಬನದಲ್ಲಿ 'ಹಾಲಿಟ್ಟು ಸೇವೆ' ನಡೆಯುತ್ತದೆ. ಪುರೋಹಿತರು ಅರಶಿನ, ಅಕ್ಕಿ ಹಿಟ್ಟು ಹಾಗೂ ಹಾಲಿನ ಮಿಶ್ರಣವನ್ನು ನಾಗನ ಕಲ್ಲಿಗೆ ಅಭಿಷೇಕ ಮಾಡುತ್ತಾರೆ. ನಂತರ ನೈವೇದ್ಯ ಮಂಗಳಾರತಿ ನಡೆಯುತ್ತದೆ.

ಯಜಮಾನ ವರ್ಗದವರು, ವೈದ್ಯರು, ನಾಗಪಾತ್ರಿಗಳು ಅಲ್ಲಿ ನೆರೆದಿರುತ್ತಾರೆ. ಪುರೋಹಿತರು ಪ್ರಾರ್ಥನೆ ಮಾಡಿ ನಾಗಪಾತ್ರಿಗೆ 'ಹೂ ನೀರು' ಕೊಡುತ್ತಾರೆ. ವೈದ್ಯರು ಹಾಡು ಹೇಳಿ ಡಕ್ಕೆ ಬಡಿಯುತ್ತಾರೆ. ಅಷ್ಟರಲ್ಲಿ ನಾಗಪಾತ್ರಿಗೆ ಆವೇಶ ಬಂದು ಹಿಂಗಾರವನ್ನು ಮುಖ ಮೈಕೈಗಳಿಗೆ ಉಜ್ಜಿಕೊಳ್ಳುತ್ತಾ, ಬುಸು ಗುಟ್ಟುತ್ತಾ ನಾಗನಾಗಿ ಪ್ರಕಟಗೊಳ್ಳುತ್ತಾನೆ. ವೈದ್ಯರ ಹಾಡಿನೊಂದಿಗೆ ನಾಗಪಾತ್ರಿ ಕುಣಿಯುತ್ತಾನೆ. ಸ್ವಲ್ಪ ಹೊತ್ತಿನ ಬಳಿಕ ಅವರೆಲ್ಲರು ನಾಗಮಂಡಲದ ಮಂಟಪಕ್ಕೆ ಸಾಗುತ್ತಾರೆ.

ನಾಗಬನದಿಂದ ತಂದ ಬೆಳಕಿನಿಂದ ಮಂಡಲದ ದೀಪಗಳನ್ನು ಬೆಳಗಿಸುತ್ತಾರೆ. ದೇವರ ಸಂಪುಷ್ಟವನ್ನಿಟ್ಟು ಪೂಜೆ ಮಾಡುತ್ತಾರೆ. ನಾಗಪಾತ್ರಿಯ ಆವೇಶ ನಿಲ್ಲುತ್ತದೆ. ಇದು ಒಂದು ಹಂತ. ಸ್ವಲ್ಪ ಹೊತ್ತಿನ ಬಳಿಕ, ಅಂದರೆ ಅರ್ಧನಾರಿ ವೇಷ ತಯಾರಾದ ನಂತರ ಪುನಃ ನಾಗಮಂಡಲ ಮಂಟಪದಲ್ಲಿ ಯಜಮಾನ ವರ್ಗದವರು, ವೈದಿಕ ವರ್ಗದವರು, ನಾಗ ಪಾತ್ರಿಗಳು, ವೈದ್ಯರು, ವಾಲಗದವರು ಸೇರುತ್ತಾರೆ.

ಮಂಡಲಕ್ಕೆ ಅರ್ಚಕರಿಂದ ಪೂಜೆ ನಡೆಯುತ್ತದೆ. ನಾಗಸ್ವರ, ಚೆಂಡೆ, ನಗಾರಿ, ಡೋಲು, ಕೊಂಬು, ಕಡಳೆ, ಬ್ಯಾಂಡು ವಾದ್ಯಗಳ ಅಬ್ಬರ ಮುಗಿಲ್ ಮುಟ್ಟುತ್ತದೆ. ಇನ್ನೊಂದೆಡೆ ಸಿಡಿಮದ್ದು-ಗರ್ನಾಲು-ಕದೊನಿಗಳ ಭೀಕರ ಶಬ್ಧ ಗಡಚಿಕ್ಕುತ್ತಿರುತ್ತದೆ. ನಾಗಮಂಡಲ ಮಂಟಪದ ಸುತ್ತಲೂ ಆಸೀನರಾಗಿರುವ ಭಕ್ತ ಜನಸಾಗರ ತವಕದಿಂದ ವೀಕ್ಷಿಸುತ್ತಿರುತ್ತಾರೆ.

ಅಷ್ಟರಲ್ಲಿ ಪಾತ್ರಿಯ ಮೇಲೆ ನಾಗನ ಆವೇಶವಾಗಿ ರುತ್ತದೆ. ಅರ್ಚಕರು ದೇವರನ್ನು ಪ್ರಾರ್ಥಿಸಿ ಪಾತ್ರಿಯ ಕೈಗೆ ಹಿಂಗಾರದ ಹೂಗೊಂಚಲನ್ನು ಕೊಟ್ಟು ನೀರೆರೆಯುತ್ತಾರೆ. ಪಾತ್ರಿ

ಅದನ್ನು ಮುಖಕ್ಕೆ ಉಜ್ಜಿಕೊಂಡು ಹಾವಿನಂತೆ ಬುಸುಗುಟ್ಟ ತೊಡಗುತ್ತಾನೆ. ಮತ್ತೆ ಮತ್ತೆ ಹಿಂಗಾರವನ್ನು ಸೆಳಕೊಂಡು ಮುಖಕ್ಕೆ ಉಜ್ಜಿಕೊಳ್ಳುತ್ತಾನೆ. ಪರಿಣತರಾದ ಪಾತ್ರಿಗಳು ಸರ್ಪದ ವಿವಿಧ ಭಾವ ಭಂಗಿಗಳನ್ನು ಬಹು ಚೆನ್ನಾಗಿ ಪ್ರದರ್ಶಿಸುತ್ತಾರೆ.

ಹಿಂಗಾರದ 'ಅಕ್ಕಿಗಳು' ಮುಖವೆಲ್ಲಾ ಅಂಟಿಕೊಂಡು ಹೆಡೆ ಎತ್ತಿದ ಸರ್ಪದಂತೆ ಪಾತ್ರಿ ಕಂಗೊಳಿಸುತ್ತಾನೆ. ನಾಗಯಕ್ಷಿಯಿಂದ ಮೈದುಂಬಿಗೊಂಡ ನಾಗಪಾತ್ರಿ ಆವೇಶದಿಂದ ಥರ ಥರ ನಡುಗುತ್ತಾ ಚಲಿಸತೊಡಗಿದಾಗ ಆಗಲೇ ಡಕ್ಕೆ ಬಡಿಯುತ್ತಾ ವೈದ್ಯರು ಪ್ರವೇಶಿಸುತ್ತಾರೆ.

ಮಂಡಲದ ನೃತ್ಯವು ಆರಂಭವಾಗುತ್ತದೆ. ಅರ್ಧನಾರಿ ವೇಷದ ವೈದ್ಯ ಹಾಗೂ ನಾಗಪಾತ್ರಿ ಎದುರು ಬದರಾಗಿ ನರ್ತಿಸುತ್ತಾರೆ. ಹಿಮ್ಮೇಳದ ಹಾಡುಗಾರರು ಡಮರುವಿನ ನುಡಿತ ದೊಂದಿಗೆ ವಿವಿಧ ಹಾಡುಗಳನ್ನು ಹಾಡುತ್ತಾ ಮಂಡಲಕ್ಕೆ ಸುತ್ತು ಬರಲು ಪ್ರಾರಂಭಿಸುತ್ತಾರೆ. ಆ ಹಾಡುಗಳನ್ನು ಪುನರುಚ್ಚರಿಸುತ್ತಾ, ಕಂಚಿನ ಡಕ್ಕೆಯನ್ನು ಬಡಿಯುತ್ತಾ ಅರ್ಧನಾರಿ ಕುಣಿಯ ತೊಡಗುತ್ತಾನೆ. ಪಾತ್ರಿ ಆತನನ್ನು ಹಾವಭಾವಗಳೊಂದಿಗೆ ಹಿಂಬಾಲಿಸುತ್ತಾನೆ.

ನಾಗನ ಪವಿತ್ರ ಗಂಟಿನಂತೆ ಒಬ್ಬರನ್ನೊಬ್ಬರು ಸುತ್ತಿ ಸುಳಿದು ಡಕ್ಕೆಯ ನುಡಿತದ ನಡೆಗೆ ತಕ್ಕಂತೆ ಕುಣಿದು ಕುಪ್ಪಳಿಸುತ್ತಾ ಮಂಡಲಕ್ಕೆ ಸುತ್ತು ಬರುವ ಕುಣಿತವಂತೂ ಚಿತ್ತಾಕರ್ಷಕ ವಾಗಿರುತ್ತದೆ. ಆರಂಭದಲ್ಲಿ ವೈದ್ಯರು ನಾಗನನ್ನು ಕೆರಳಿಸುವ ಯತ್ನ ಮಾಡುತ್ತಾರೆ. ಆಗ ನಾಗನು ಕೋಪಗೊಂಡು ಇರಿಕೆ ಹಾಕಿದಂತೆ, ಮೈಗಂಟು ಕಟ್ಟಿಕೊಂಡಂತಹ ಕಲ್ಪನೆ ಬರುತ್ತದೆ. ನಂತರ ನಾಗನನ್ನು ಹೊಗಳಿ ಓಲೈಸಿ ಖುಷಿಪಡಿಸಲಾಗುತ್ತದೆ.

ಕೆಲವೊಮ್ಮೆ ನಿಧಾನಗತಿಯಲ್ಲಿ ಮರುಕ್ಷಣದಲ್ಲೇ ಚೆಂಡಿನಂತೆ ನೆಗೆದು, ಕುಣಿದು ಕುಪ್ಪಳಿಸುವ ನೃತ್ಯ ಚೇತೋಹಾರಿಯಾಗಿರುತ್ತದೆ. ಒಮ್ಮೆ ಕಲಹ, ಇನ್ನೊಮ್ಮೆ ಸ್ನೇಹ ಮತ್ತೊಮ್ಮೆ ಆಕ್ರೋಶ, ಮಗದೊಮ್ಮೆ ದೀನತೆ -ಹೀಗೆ ಬಹು ಬಗೆಯ ಭಾವ ಪ್ರದರ್ಶನ ನೃತ್ಯದಲ್ಲಿ ಕಂಡುಬರುತ್ತದೆ. ಒಮ್ಮೆ ಕೆರಳಿದರೂ ಆನಂತರ ಪ್ರಕೃತಿಯ ಭಕ್ತಿಗೆ ಒಲಿದ ಪುರುಷನ ಸಂಬಂಧ ಸೂಚಕ ಇಲ್ಲಿ ಕಂಡುಬರುತ್ತದೆ.

ಹೀಗೆ ನಾಲ್ಕೈದು ತಾಸು ಅಂದರೆ ಬೆಳಗಿನವರೆಗೆ ಈ ನೃತ್ಯ ಸೇವೆ ಮುಂದುವರಿಯುತ್ತದೆ. ನಾಗಪಾತ್ರಿ ಅದೆಷ್ಟೋ ರಾಶಿ ಹಿಂಗಾರದ ಗೊನೆಗಳನ್ನು ಮುಖಕ್ಕೆ ಉಜ್ಜಿ ಹುಡಿಮಾಡಿರುತ್ತಾನೆ. ವೈದ್ಯರ ಕುಣಿತದಿಂದ ನೆಲದ ಹುಡಿ ಎದ್ದಿರುತ್ತದೆ. ಕೊನೆಯಲ್ಲಿ ಹಾಲಾವಳಿ ಯಜಮಾನನಿಗೆ ಅಭಯ ಪ್ರಸಾದ ಸಿಗುತ್ತದೆ. ನಂತರ ನೆರೆದ ಭಕ್ತ ಸಮೂಹಕ್ಕೆ ದೇವರ ಪ್ರಸಾದ ನೀಡುತ್ತಾರೆ. ದೇವತಾ ಸಾನ್ನಿಧ್ಯವನ್ನು ನಾಗಬನಕ್ಕೆ ಒಯ್ದು ಐಕ್ಯಗೊಳಿಸುತ್ತಾರೆ.

ಹೀಗೆ ನಾಗಮಂಡಲವು ರಂಗಸಜ್ಜಿಕೆ, ವಾದ್ಯ ಸಂಗೀತ, ರಂಗ ಪರಿಕರ, ನಟನೆ, ಹಾಡು, ಕುಣಿತಗಳ ಸಮನ್ವಯ ಕಲಾಪ್ರಕಾರವಾಗಿದೆ. ಜನಪದ ರಂಗಭೂಮಿಯಾಗಿದೆ. ಡಾ.ಶಿವರಾಮ ಕಾರಂತರು ನಾಗಮಂಡಲದ ಕಲಾತ್ಮಕ ಸ್ವರೂಪದ ಬಗ್ಗೆ ಪ್ರಸ್ತಾಪಿಸುತ್ತಾ 'ನಾಗಪಾತ್ರಿ

ವೈದ್ಯ ಮತ್ತು ಹಿಮ್ಮೇಳದವರು ಮಂಡಲವನ್ನು ಸುತ್ತುತ್ತಾ, ಹಿಂದಕ್ಕೆ ಮುಂದಕ್ಕೆ ಸರಿಯುತ್ತಾ ನಡೆಸುವಂತಹ ಈ ಪೂಜಾವಿಧಿ ಅತ್ಯಂತ ಸುಂದರವೂ ಭವ್ಯವೂ ಆಗಿದೆ. ನಖಶಿಖಾಂತ ಶರೀರ ವಿನ್ಯಾಸಗಳಿಂದ ಮೂಡಿಸುವ ಲಾಸ್ಯ, ಹಾಸ್ಯ, ತಾಂಡವ, ರೌದ್ರಗಳಿಗೆ ಸಮಶಕ್ತಿಯಿಂದ ಒದಗಬಲ್ಲ ಚಲನವಲನಗಳಿವೆ. ಯಕ್ಷಗಾನ ಬಯಲಾಟದವರು ಇದಕ್ಕೇ ಋಣಿಗಳಾಗಿರಬೇಕು' ಎಂದಿದ್ದಾರೆ.

ನಾಗಮಂಡಲ/ಡಕ್ಕೆ ಬಲಿಗಳು ಆರಾಧನಾ ವಿಧಿಗಳಾದರೂ ಅಲ್ಲಿ ಕಲೆಯ ಅಂಶವನ್ನು ಖಚಿತವಾಗಿ ಗುರುತಿಸಬಹುದಾಗಿದೆ. ಚಿತ್ರಕಲೆಯ ಜನಪದ ರೂಪದ ವಿಸ್ತಾರ ಅಲ್ಲಿದೆ. ಚಿತ್ರಕಲೆಯಿಂದ ದೇವರ ರೂಪ, ಅವನಿರುವ ರೀತಿ ಮಂಡಲದ ಮೂಲಕ ತಿಳಿದುಬರುತ್ತದೆ. ಯಾವುದೇ ಲಿಖಿತರೂಪವನ್ನು ಪಡೆಯದೆ ಪ್ರಯೋಗದಲ್ಲೇ ತನ್ನ ಅಸ್ತಿತ್ವವನ್ನು ಪಡೆಯುವ ನಾಗಮಂಡಲದ ರಂಗಪರಿಕರ, ಮಂಡಲ ಚಿತ್ತಾರ, ಕುಣಿತ, ಗೀತಗಳಿಂದ ಕಲಾಪ್ರಕಾರ ಪೂರ್ಣತೆ ಯನ್ನು ಕಾಣಬಹುದು. ನಾಗಾರಾಧನೆಯಲ್ಲಿ ಚಿತ್ರಕಲೆ ಅತಿ ಮಹತ್ವದ ಸ್ಥಾನವನ್ನು ಪಡೆದಿದೆ.

■■

---


ಟಿಪ್ಪಣಿ : ಬರಹಗಾರರೂ ಸಂಶೋಧಕರೂ ಆಗಿರುವ ಪ್ರೊ.ಎ.ವಿ.ನಾವಡ ಮತ್ತು ಡಾ.ಯು.ಪಿ. ಉಪಾಧ್ಯಾಯ, ಡಾ.ಸುಶೀಲಾ ಪಿ.ಉಪಾಧ್ಯಾಯ, ಸಿದ್ಧಾಪುರ ವಾಸುದೇವ ಭಟ್, ಪಾದೇಕಲ್ಲು ವಿಷ್ಣು ಭಟ್ (ಸ್ಕಂದ ವೈಭವ) ಮತ್ತು ಕೆ.ಎಸ್.ಉಪಾಧ್ಯಾಯರು ಬರೆದಿರುವ ಲೇಖನಗಳಿಂದ ಕೆಲವೊಂದು ಅಂಶಗಳನ್ನು ಸಂದರ್ಭಕ್ಕನುಸಾರವಾಗಿ ಇಲ್ಲಿ ಬಳಸಿಕೊಳ್ಳಲಾಗಿದೆ. ಅವರಿಗೆ ಈ ಲೇಖಕನು ಋಣಿಯಾಗಿದ್ದಾನೆ. ಹಾಗೂ ಕೆಲವು ಚಿತ್ರಗಳನ್ನು ಆಸ್ಟ್ರೋ ಮೋಹನ್ ಒದಗಿಸಿ ಕೊಟ್ಟಿದ್ದಾರೆ. ಅವರಿಗೂ ಕೃತಜ್ಞತೆಗಳು.



ಆಶ್ಲೇಷಾ ಬಲಿ ಚಿತ್ರಣ



ನವೀನ ರೀತಿಯ ಆಶ್ಲೇಷಾ ಬಲಿ ಮಂಡಲ



ನಾಗಮಂಡಲ ಚಿತ್ರದ ಅಲಂಕರಣ



ನಾಗಮಂಡಲ ವೇದಿಕೆಯಲ್ಲಿ ನಾಗಪಾತ್ರಿ ಮತ್ತು ವೈದ್ಯರ ಬಳಗ



ಉಪಾಧ್ಯಾಯ ಮೂಡುಬೆಳ್ಳೆ ೧೯೬೪ರಲ್ಲಿ ಉಡುಪಿಯ ಹತ್ತಿರದ ಮೂಡುಬೆಳ್ಳೆಯಲ್ಲಿ ಜನಿಸಿದ ಅವರು ಎ.ಎಮ್.ಜಿ.ಡಿ.ಆರ್ಟ್ ಪೇಂಟಿಂಗ್‌ನಲ್ಲಿ ಪದವಿಯನ್ನು ಪಡೆದಿದ್ದಾರೆ. ಚಿತ್ರಕಾರರಾಗಿ ಚಿತ್ರಕಲಾ ವಿಮರ್ಶಕರಾಗಿ, ಚಿತ್ರಕಲಾ ಶಿಕ್ಷಕರಾಗಿ ಸಲ್ಲಿಸಿದ ಸೇವೆ ಗಮನಾರ್ಹವಾದುದು. ಇವರು ಹಲವಾರು ವಿಚಾರಸಂಕಿರಣ ಮತ್ತು ಚಿತ್ರಕಲಾ ಪ್ರದರ್ಶನಗಳಲ್ಲಿ ಭಾಗವಹಿಸಿ ಅನೇಕ ಪ್ರಶಸ್ತಿಗಳನ್ನು ಪಡೆದುಕೊಂಡಿದ್ದಾರೆ. ಕನ್ನಡ ರಾಜ್ಯೋತ್ಸವ ಪ್ರಶಸ್ತಿ, ಉತ್ತಮ ಶಿಕ್ಷಕ ಪ್ರಶಸ್ತಿ, ಅತ್ಯುತ್ತಮ ಕಲಾಸಾಹಿತಿ ಪ್ರಶಸ್ತಿ, ಉತ್ತಮ ಕಲಾವಿದ ಪ್ರಶಸ್ತಿ, ಜಿಲ್ಲಾ ಅತ್ಯುತ್ತಮ ಶಿಕ್ಷಕ ಪ್ರಶಸ್ತಿಗಳನ್ನು ಪಡೆದಿದ್ದಾರೆ. ಅನೇಕ ಸಂಘ ಸಂಸ್ಥೆಗಳಿಂದ ಇವರು ಸನ್ಮಾನ ಮತ್ತು ಪುರಸ್ಕಾರಗಳನ್ನು ಪಡೆದಿರುವುದಲ್ಲದೆ, ಆಫ್ರಿಕಾ, ನೇಪಾಳ ದೇಶದ ಅನೇಕ ಕ್ಷೇತ್ರಗಳಲ್ಲಿಯ ಗಣ್ಯ ವ್ಯಕ್ತಿಗಳಿಂದ ಇವರ ಕಲಾಕೃತಿ ರಚನೆಗಾಗಿ ಪ್ರಶಂಸಾ ಪತ್ರಗಳು ಬಂದಿವೆ. ಕರ್ನಾಟಕ ದೃಶ್ಯಕಲಾ ಸಾಹಿತ್ಯ ಪರಿಷತ್ತು ಆರ್ಟಿಸ್ಟ್ ಪೋರಂ ಉಡುಪಿ, ಉಡುಪಿ ಜಿಲ್ಲಾ ಶಿಕ್ಷಕರ ಕಲಾ ಸಂಘ ಮತ್ತು ಕರ್ನಾಟಕ ರಾಜ್ಯ ಲಲಿತಕಲಾ ಅಕಾಡೆಮಿ ಸದಸ್ಯರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಇವರು ಅಂಕಣಕಾರರಾಗಿ ಉದಯವಾಣಿ, ಜನವಾಹಿನಿ, ಹೊಸದಿಗಂತ ದಿನ ಪತ್ರಿಕೆಗಳಲ್ಲಿ ಪ್ರತಿವಾರವೂ ಕಲೆ, ಕಲಾವಿದರ ಕುರಿತು ಕಲಾವಿಮರ್ಶೆ ಮತ್ತು ವಿವಿಧ ಬರಹಗಳನ್ನು ಬರೆಯುತ್ತಲೇ ಇದ್ದಾರೆ. ಸುಮಾರು ಸಾವಿರಕ್ಕೂ ಹೆಚ್ಚು ಕಿರು ಬರಹಗಳು ಅನೇಕ ಪತ್ರಿಕೆಗಳಲ್ಲಿ ಪ್ರಕಟಗೊಂಡಿದ್ದು ಅವು ನಾಡಿನ ಕಲಾಸಕ್ತರ ಗಮನ ಸೆಳೆದಿವೆ. ಇವರು ಕರ್ನಾಟಕ ಲಲಿತಕಲಾ ಅಕಾಡೆಮಿಗಾಗಿ 'ನಾಗಾರಾಧನೆ ಮತ್ತು ಚಿತ್ರಕಲೆ' ಎಂಬ ಸಂಶೋಧನಾತ್ಮಕ ಗ್ರಂಥವನ್ನು ವ್ಯಾಪಕವಾಗಿ ಅಧ್ಯಯನ ಮಾಡಿ ಬರೆದುಕೊಟ್ಟುದಕ್ಕಾಗಿ ಅಕಾಡೆಮಿ ಅವರನ್ನು ಅಭಿನಂದಿಸುತ್ತದೆ.

ಕರ್ನಾಟಕ ಲಲಿತಕಲಾ ಅಕಾಡೆಮಿ
ಕನ್ನಡ ಭವನ, ಜೆ.ಸಿ. ರಸ್ತೆ
ಬೆಂಗಳೂರು - 560 002